ಪ್ರೊ. ಸ. ಸ. ಮಾಳವಾಡ, ಎಂ.ಎ.,

ಪ್ರಸಾರಾಂಗ
ಮೈಸೂರು ವಿಶ್ವವಿದ್ಯಾನಿಲಯ
೧೯೬೯

ಮೈಸೂರು ವಿಶ್ವವಿದ್ಯಾನಿಲಯ ವಿಶೇಷೋಪನ್ಯಾಸ ಪುಸ್ತಕಮಾಲೆ_೧

ಪ್ರಧಾನ ಸಂಪಾದಕ :

ಡಾ॥ ಕೆ. ವಿ. ಪುಟ್ಟಪ್ಪ, ಎಂ.ಎ., ಡಿ.ಲಿಟ್.

ಹರಿಹರನ ರಗಳೆಯಲ್ಲಿ
ಜೀವನ ದರ್ಶನ

ಲೇಖಕ :

ಪ್ರೊ. ಸ. ಸ. ಮಾಳವಾಡ, ಎಂ.ಎ.,

ಪ್ರಸಾರಾಂಗ
ಮೈಸೂರು ವಿಶ್ವವಿದ್ಯಾನಿಲಯ
೧೯೬೯

ಮೊದಲನೆಯ ಮುದ್ರಣ: ೧೯೫೭

ಎರಡನೆಯ ಮುದ್ರಣ: ೧೯೬೯

ಸಾಧಾರಣ ಪ್ರತಿ: ರೂ. ೧-೨೫. ಉತ್ತಮ ಪ್ರತಿ: ರೂ. ೨-೨೫.

ಮುದ್ರಕರು: ಡಿ. ರಾಜರತ್ನಂ
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಮುನ್ನುಡಿ

ವಿಶ್ವವಿದ್ಯಾನಿಲಯದ ಪ್ರಗತಿ ಸಾಧನೆ ಮತ್ತು ಸಿದ್ಧಿಗಳನ್ನು, ಅದರ ಅಂಗ ಸಂಸ್ಥೆಗಳ ಸಂಖ್ಯೆಯಿಂದಾಗಲಿ, ವಿದ್ಯಾರ್ಥಿ ವಿದ್ಯಾರ್ಥಿನಿಯರ ಸಂಖ್ಯಾಬಾಹುಳ್ಯ ದಿಂದಾಗಲಿ, ಪದವೀಧರರ ಆಧಿಕ್ಯದಿಂದಾಗಲಿ ನಿರ್ಧರಿಸುವುದು ಸರಿಯಲ್ಲ. ಸಂಶೋಧನೆ, ಜ್ಞಾನಾರ್ಜನೆ ಮತ್ತು ಜ್ಞಾನಪ್ರಸಾರ—ಇವು ಎಷ್ಟೆಷ್ಟು ಗಹನವಾಗಿ ಗಾಢವಾಗಿ ಸರ್ವವ್ಯಾಪಿಯಾಗಿ ನಡೆದರೆ ಅಷ್ಟರಷ್ಟರ ಮಟ್ಟಿಗೆ ವಿಶ್ವವಿದ್ಯಾನಿಲಯದ ಖ್ಯಾತಿ ಗೌರವ ಮಹತ್ವಗಳು ಅಧಿಕಗೊಂಡು ಅದಕ್ಕೆ ಸಾರ್ಥಕತೆ ಒದಗುತ್ತದೆ. ಮೈಸೂರು ವಿಶ್ವವಿದ್ಯಾನಿಲಯ ಈ ಧ್ಯೇಯತ್ರಯಗಳನ್ನು ತನ್ನ ಅಧ್ಯಾಪಕವರ್ಗದ ಮತ್ತು ವಿದ್ಯಾರ್ಥಿ ವೃಂದದ ಮೂಲಕ ಸಾಧಿಸುತ್ತಿದೆ. ಜ್ಞಾನಪ್ರಸಾರಕ್ಕಂತು ಪ್ರತ್ಯೇಕ ಶಾಖೆಯನ್ನೆ ತೆರೆದು, ಪುಸ್ತಿಕೆ ಪುಸ್ತಕಮಾಲೆಗಳ ಮೂಲಕ, ಉಪನ್ಯಾಸಮಾಲೆಗಳ ಮೂಲಕ ತನ್ನ ಧ್ಯೇಯೋದ್ದೇಶಗಳನ್ನು ಕಾರ್ಯಗತ ಮಾಡುತ್ತಿದೆ.

ಈ ಉಪನ್ಯಾಸಮಾಲೆಗಳಲ್ಲಿ ಮುಖ್ಯವಾದುವು ಎರಡು : ಪ್ರಚಾರೋಪನ್ಯಾಸ ಮಾಲೆ ಮತ್ತು ವಿಶೇಷೋಪನ್ಯಾಸಮಾಲೆ. ಕೆಲವು ದಾನಿಗಳು ವಿಶ್ವವಿದ್ಯಾನಿಲಯಕ್ಕೆ ಬಿಟ್ಟಿರುವ ದತ್ತಿಯ ನೆರವಿನಿಂದಲೂ ಆಗಾಗ್ಗೆ ಉಪನ್ಯಾಸಗಳನ್ನು ಏರ್ಪಡಿಸಲಾಗುತ್ತಿದೆ. ಇವುಗಳನ್ನೂ ವಿಶೇಷೋಪನ್ಯಾಸ ಮಾಲೆಯಲ್ಲಿಯೆ ಸೇರಿಸಬಹುದು.

ವಿಶ್ವವಿದ್ಯಾನಿಲಯದ ಸೋಪಾನವನ್ನೇರಲವಕಾಶವಿಲ್ಲದವರ ಮತ್ತು ಗ್ರಾಮಾಂತರದ ಸಾಮಾನ್ಯ ಜನರ ಅನುಕೂಲಕ್ಕಾಗಿ ಮತ್ತು ಅವರ ಜ್ಞಾನ ತೃಷೆಯನ್ನು ಕೆರಳಿಸುವುದಕ್ಕಾಗಿ ಪ್ರತಿವರ್ಷವೂ ಸುಮಾರು ೪೦-೫೦ ಬೇರೆ ಬೇರೆ ಊರುಗಳಲ್ಲಿ ಪ್ರಚಾರೋಪನ್ಯಾಸಗಳ ಕಾರ್ಯಕ್ರಮ ನಡೆಯುತ್ತದೆ. ಮೈಸೂರು ವಿಶ್ವವಿದ್ಯಾನಿಲಯದ ಅಧ್ಯಾಪಕರು ಕನ್ನಡದ ಮೂಲಕ ವಿಜ್ಞಾನ ಯಂತ್ರವಿದ್ಯೆ ಕೈಗಾರಿಕೆ ಕಲೆ ಸಮಾಜಶಾಸ್ತ್ರ ಇತಿಹಾಸ ಮೊದಲಾದ ನಾನಾ ವಿಷಯಗಳನ್ನು ಕುರಿತು ಭಾಷಣ ಮಾಡುತ್ತಾರೆ. ಈ ಭಾಷಣಗಳಲ್ಲಿ ಕೆಲವನ್ನು ಆರಿಸಿಕೊಂಡು, ಮುದ್ರಿಸಿ, ಅತ್ಯಂತ ಕನಿಷ್ಠ ಬೆಲೆಗೂ ಮಾರುವುದುಂಟು.

ವಿಶೇಷೋಪನ್ಯಾಸಗಳು ಸಾಮಾನ್ಯವಾಗಿ ವಿಶ್ವವಿದ್ಯಾನಿಲಯದ ವಿವಿಧ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಮತ್ತು ಅಧ್ಯಾಪಕರ ಪ್ರಯೋಜನಕ್ಕಾಗಿ ನಡೆಯುತ್ತವೆ. ದೇಶವಿದೇಶಗಳ ತಜ್ಞರನ್ನೂ ಪ್ರಾಧ್ಯಾಪಕರನ್ನೂ ಪ್ರಾಧ್ಯಾಪಕರನ್ನೂ ಆಗಾಗ್ಗೆ ಆಹ್ವಾನಿಸಿ ಅವರ ಭಾಷಣವನ್ನು ಏರ್ಪಡಿಸಿ, ಆ ಮೂಲಕ ... ಸಂಪರ್ಕಕ್ಕೂ ವಿಚಾರ ವಿನಿಮಯಕ್ಕೂ ಅವ... ಉದ್ದೇಶ. ಈ ವ್ಯವಸ್ಥೆಯಿಂದ ಬೇರೆ ಬೇರೆ ...ಲ್ಲಿ ಕೆಲಸ

ಮಾಡುತ್ತಿವೆ ? ಮುಂದೆ ಆಗಬೇಕಾಗಿರುವ ಕೆಲಸವೇನು ? ಅದನ್ನು ಹೇಗೆ ಕಾರ್ಯಗತ ಮಾಡಬಹುದು ?—ಇಂತೆಲ್ಲ ವಿಷಯಗಳ ತುಲನೆ ಮತ್ತು ಪರ್ಯಾಲೋಚನೆ ಸುಲಭ ಸಾಧ್ಯವಾಗುತ್ತದೆ. ಈ ಮಾಲೆಯ ಭಾಷಣಗಳು ಕನ್ನಡ ಮತ್ತು ಇಂಗ್ಲಿಷ್ ಎರಡು ಭಾಷೆಗಳಲ್ಲಿಯೂ ನಡೆಯುತ್ತವೆ. ಲಿಖಿತಭಾಷಣಗಳನ್ನು ಅಚ್ಚುಹಾಕಿಸಲೂ ಅವಕಾಶ ವಿದೆ. ಇಂಗ್ಲಿಷ್ ಭಾಷಣಗಳು ಈಗಾಗಲೆ ಕೆಲವು ಅಚ್ಚಾಗಿವೆ. ಇದೆತಾನೆ ಕನ್ನಡದ ಭಾಷಣಗಳನ್ನು ಮುದ್ರಿಸಲು ನಿರ್ಧರಿಸಿದೆ. ಪ್ರೊ॥ ಸ. ಸ. ಮಾಳವಾಡರ " ಹರಿಹರನ ರಗಳೆಯಲ್ಲಿ ಜೀವನ ದರ್ಶನ " ಈ ಮಾಲೆಯಲ್ಲಿ ಮೊದಲನೆಯದು.

ಪ್ರೊ॥ ಮಾಳವಾಡರು ಕನ್ನಡನಾಡಿನ ಹಿರಿಯ ವಿದ್ವಾಂಸರಲ್ಲೊಬ್ಬರು ; ಉತ್ತಮ ಸಾಹಿತಿಗಳು, ನುರಿತ ವಿಮರ್ಶಕರು. ಕರ್ಣಾಟಕ ವಿಶ್ವವಿದ್ಯಾನಿಲಯದ ಕರ್ಣಾಟಕ ಕಾಲೇಜಿನಲ್ಲಿ ಕನ್ನಡದ ಪ್ರಾಧ್ಯಾಪಕರಾಗಿ ಧಾರವಾಡದ ಕನ್ನಡದ ಸಂಶೋಧನ ಸಂಸ್ಥೆಯ ಅಧ್ಯಕ್ಷರಾಗಿ ನಾನಾಮುಖವಾಗಿ ನಾನಾರೀತಿಯಲ್ಲಿ ಕನ್ನಡ ಸಾಹಿತ್ಯ ಸಂಸ್ಕೃತಿಗಳ ಮುನ್ನಡೆಗೆ ಸದಾ ನಿಷ್ಠೆಯಿಂದ ದುಡಿಯುತ್ತಿದ್ದಾರೆ. ಅವರ 'ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ ದರ್ಶನ' ಅವರ ಶಕ್ತಿ ಸಾಮರ್ಥ್ಯಗಳನ್ನು ತೋರಿಸುವ ಕೈಮರ. 'ಹರಿಹರನ ರಗಳೆಯಲ್ಲಿ ಜೀವನ ದರ್ಶನ' ಕವಿಯ ಲೌಕಿಕ ಮತ್ತು ಆಧ್ಯಾತ್ಮಿಕ ಜೀವನದ ಸಾಧನೆ ಸಿದ್ಧಿಗಳನ್ನೂ, ಆ ಜೀವನದ ಧ್ಯೇಯಾದರ್ಶ ಮಹತ್ತ್ವಗಳನ್ನೂ ವಿವರಿಸುತ್ತದೆ. ಹಲವಾರು ಸಂವತ್ಸರಗಳ ನಿರಂತರಾಭ್ಯಾಸದ ಪರಿಣಾಮವಾಗಿ ಅವರ ಈ ವಿಮರ್ಶಕೃತಿ ಹೊರಹೊಮ್ಮಿದೆ. ಕನ್ನಡ ಸಾಹಿತ್ಯಾಭ್ಯಾಸಿ ಗಳಿಗೆ ಈ ಕೃತಿ ತುಂಬ ಪ್ರಯೋಜನಕಾರಿಯಾಗುತ್ತದೆಂದು ನಂಬಿದ್ದೇನೆ.

ಮೈಸೂರು
೧೩–೩–೫೭

ಕೆ. ವಿ. ಪುಟ್ಟಪ್ಪ
ವೈಸ್ ಛಾನ್ಸಲರ್

ಅರಿಕೆ

ಮೈಸೂರು ವಿದ್ಯಾಪೀಠದ ವಿಶೇಷೋಪನ್ಯಾಸಗಳ ವ್ಯವಸ್ಥೆಯಲ್ಲಿ ಕನ್ನಡ ಉಪನ್ಯಾಸಗಳಿಗೂ ಸ್ಥಾನ ಕಲ್ಪಿಸಿದುದು ಸಮುಚಿತವಾಗಿದೆ. ಈ ಉಪನ್ಯಾಸಗಳಿಗಾಗಿ ನನ್ನನ್ನು ಆಮಂತ್ರಿಸುವ ಮೂಲಕ ಮೈಸೂರು ವಿದ್ಯಾಪೀಠದವರು ನನ್ನನ್ನು ಗೌರವಿಸಿದ್ದಾರೆ. ಪ್ರಥಮಸಲ ಏರ್ಪಟ್ಟ ಉಪನ್ಯಾಸ ಮಾಲೆಯಲ್ಲಿ 'ಹರಿಹರನ ರಗಳೆಯಲ್ಲಿ ಜೀವನ ದರ್ಶನ' ಎಂಬ ವಿಷಯವನ್ನು ಕುರಿತ ನನ್ನ ಮೂರು ಉಪನ್ಯಾಸಗಳಿಗೆ ಅವಕಾಶವೊದಗಿಸಿ, ಈ ಚಿಕ್ಕ ಹೊತ್ತಿಗೆಯು ಹೊರಹೊಮ್ಮುವುದಕ್ಕೆ ಕಾರಣರಾದ ವಿದ್ಯಾಪೀಠದ ಅಧಿಕಾರಿಗಳಿಗೆ ನನ್ನ ವಂದನೆಗಳನ್ನು ಸಲ್ಲಿಸುತ್ತೇನೆ. ಮುಖ್ಯವಾಗಿ ನಾನು ವಿದ್ಯಾಪೀಠದ ಉಪಸ್ಥಾನಪತಿಗಳಾದ ಡಾ|| ಕೆ. ವಿ. ಪುಟ್ಟಪ್ಪ ಅವರ ಹೆಸರನ್ನು ನೆನೆಯಬೇಕು. ಉಪನ್ಯಾಸಗಳ ಏರ್ಪಾಡು ಮುದ್ರಣಕಾರ್ಯ ಇವುಗಳಲ್ಲಿ ಆತ್ಮೀಯವಾದ ಆಸ್ಥೆಯನ್ನು ತೋರಿದ ಶ್ರೀ ಡಿ. ಜವರೇಗೌಡರ ಆಭಾರ ಮನ್ನಿಸಬೇಕು.

ಈ ಕೃತಿಯಲ್ಲಿಯ ವಿವೇಚನೆಯ ದೃಷ್ಟಿಯು ಪ್ರಯೋಜನಕಾರಿಯಾಗುವುದೆಂದು, ಈ ಬಗೆಯ ವ್ಯಾಸಂಗಕ್ಕೆ ಪ್ರಚೋದನೆಯನ್ನು ಒದಗಿಸುವುದೆಂದು ನಂಬುತ್ತೇನೆ.

ಪ್ರಾಧ್ಯಾಪಕ ನಿಲಯ
ಧಾರವಾಡ
೨೬-೧-೧೯೫೭

ಸ. ಸ. ಮಾಳವಾಡ

ವಿಷಯಸೂಚಿಕೆ

ಹರಿಹರ ಕವಿ

ಕನ್ನಡದ ಮಹಾಕವಿಗಳಲ್ಲಿ ಒಬ್ಬನಾದ ಹಂಪೆಯ ಹರಿಹರದೇವ ಪ್ರಾಚೀನ ಕನ್ನಡ ಕಾವ್ಯಪ್ರಪಂಚದಲ್ಲಿ ನವೀನ ಮಾರ್ಗದರ್ಶಕನೆಂಬುದು ಸರ್ವಶ್ರುತವಿದೆ. ಶೈವಭಕ್ತಿ ಮಾರ್ಗಾವಲಂಬಿಗಳಾದ ಕನ್ನಡ ಕವಿಗಣಕ್ಕೆ ಆಚಾರ್ಯಪುರುಷನಾದ ಈತನ ವ್ಯಕ್ತಿತ್ವವು ಪ್ರಭಾವಶಾಲಿಯಾದುದು. ಗಿರಿಜಾಕಲ್ಯಾಣ, ಅಷ್ಟಕ, ಶತಕಗಳು, ನೂರಾರು ರಗಳೆ ಇವುಗಳನ್ನು ರಚಿಸಿದ ಈತನು ಕನ್ನಡಕ್ಕೆ ವಿಪುಲವಾದ, ಅರ್ಥವತ್ತಾದ, ಸ್ವಾರಸ್ಯಕರವಾದ ಕಾಣಿಕೆಯನ್ನು ಸಲ್ಲಿಸಿದ್ದಾನೆ. ಹಿರಿಯಕವಿಯೂ, ಭಕ್ತನೂ, ಕ್ರಾಂತಿಪುರುಷನೂ ಆದ ಈತನು ವಿಜಯನಗರ ಸಾಮ್ರಾಜ್ಯದ ತೇಜಸ್ಸಿನ ಪೂರ್ವಸೂಚನೆಯಂತೆ ಹಂಪೆಯನ್ನು ತನ್ನ ಕಾರ್ಯರಂಗವನ್ನಾಗಿ ಮಾಡಿಕೊಂಡಿದ್ದ. ಈ ಕವಿಯ ಕಾಲ ೧೨೧೬ ಎಂದಿಟ್ಟುಕೊಳ್ಳಬೇಕಾಗಿದೆ.

ಪ್ರಾಚೀನ ಕನ್ನಡ ಕಾವ್ಯಸಂಪ್ರದಾಯಗಳಲ್ಲಿ ಸಂಸಾರಸಾರೋದಯನಾಗಿ, ಪಂಡಿತಮಾನ್ಯನಾಗಿ, ಕನ್ನಡದಲ್ಲ ಅಗ್ರಕವಿಯಾಗಿ, ಗುಣಾರ್ಣವಭೂಭುಜನ ಕಥೆಯನ್ನು ಕಿರೀಟಿಯೊಳ್ ತಗುಳ್ಚಿ ಚಂಪೂ ಕಾವ್ಯ ರಚಿಸಿದ ಪಂಪನ ಪ್ರಭಾವವೊಂದು. ವೀರವಿರಕ್ತನಾಗಿ, ಜನತೆಯ ಕವಿಯಾಗಿ, ನಿಸ್ಪೃಹನಾಗಿ, "ನುತಿಸೆನುಳಿದ ಸುರರಂ ನರರಂ" ಎಂಬ ಪ್ರತಿಜ್ಞೆಯೊಂದಿಗೆ "ಶಿವನಂ ಶಿವೈಕ್ಯರಂ" ನುತಿಸಿದ ರಗಳೆಗಳನ್ನು ರಚಿಸಿದ ಹರಿಹರನ ಪ್ರಭಾವವು ಇನ್ನೊಂದು. ಹಲವು ಬಗೆಯಲ್ಲಿ ಕ್ರಾಂತಿಕಾರನಾದ ಈ ಕವಿಯು ಅಂದು ಲೋಕಶಿಕ್ಷಣದ ಕಾರ್ಯವನ್ನು ಕೈಕೊಂಡನೆಂದು ತಿಳಿಯಬಹುದು. ಹಂಪೆಯ ವಿದ್ಯಾಪೀಠದಲ್ಲಿ ವಿದ್ಯಾಬೋಧೆ, ರಗಳೆಗಳ ರಚನೆ, ವಾಚನ ಇವುಗಳ ಮೂಲಕ ಭಕ್ತವೃಂದವನ್ನು ಆಕರ್ಷಿಸಿದ ಈತನು ಹಂಪೆಯ ವಿರೂಪಾಕ್ಷನ ನಿಸ್ಸೀಮ ಭಕ್ತನಾಗಿದ್ದ. ಕಾವ್ಯದೃಷ್ಟಿ, ವಸ್ತು, ಭಾಷೆ, ರೂಪ ಇವುಗಳ ನವೀನತೆಯನ್ನು ತೋರಿದ.

ಹರಿಹರನು ತನ್ನ ರಸವತ್ತಾದ ಕವಿತೆಯಿಂದ, ಅರ್ಥಪೂರ್ಣ ಕತೆಗಳಿಂದ, ಉದಾತ್ತ ಸಂದೇಶದಿಂದ, ಕನ್ನಡ ನುಡಿವೆಣ್ಣನ್ನು ಸಿಂಗರಿಸಿದ ನಿಸರ್ಗದೊಂದಿಗೆ ಸಮರಸವನ್ನು, ಆತ್ಮೀಯತೆಯನ್ನು ತೋರಿ ಶಿವನ ಮಹಿಮೆಯನ್ನು ಬಿತ್ತರಿಸಿದ. ಶಿವಶರಣರ ಹಿರಿಮೆಯನ್ನು ಸಾರಿದ. ಈ ಕವಿಯ ಭಕ್ತಿನಿರ್ಭರತೆ, ಭಾವಾವೇಶ, ರಸಾವಿಷ್ಕಾರದ ತಲ್ಲೀನತೆಗಳು ಕನ್ನಡ ಕಾವ್ಯಕ್ಕೆ ಮೆರುಗನ್ನು ತಂದಿವೆ. ಹೋಲಿಕೆ, ಕಲ್ಪನೆಗಳಲ್ಲಿ, ಅಲಂಕಾರಚಾತುರ್ಯದಲ್ಲಿ ಈತನು ಕವಿಗಣಕ್ಕೆ ಒಳ್ಳೆಯ ಮಾದರಿಗಳನ್ನು ಒದಗಿಸಿದ್ದಾನೆ. ಕಾವ್ಯದ ಮೂಲಕ ಹೊರಹೊಮ್ಮಿಸಿದ ದರ್ಶನವು ಆಧ್ಯಾತ್ಮಿಗಳಿಗೆ ಒಳ್ಳೆಯ ಆದರ್ಶವನ್ನು ಒದಗಿಸಿದೆ. ಈತನಿಂದಾಗಿ ಕನ್ನಡದ ಶಕ್ತಿ, ಸಂಪತ್ತು, ಸ್ವಾರಸ್ಯಗಳು

ಹೆಚ್ಚಿದವು. ಬಳಿಕೆಯು, ಪರಿಣಾಮಕಾರಿಯಾದ ಭಾಷೆಯು ಕಾವ್ಯಪ್ರಪಂಚವನ್ನು ಸೇರಿತು. ಕನ್ನಡ ಗದ್ಯಕ್ಕೆ ಈತನು ನೂತನಬ್ರಹ್ಮನಾದ. ದುಃಖಮಯವಾದ ಬದುಕನ್ನು ದಾಟಿ ಶಾಶ್ವತ ಸುಖದತ್ತ ಸಾಗುವ ಹಾದಿಯನ್ನು ಹರಿಹರನು ತನ್ನ ಕಾವ್ಯದಲ್ಲಿ ಬಿತ್ತರಿಸಿದ್ದಾನೆ. ಹಂಪೆಯ ವಿದ್ಯಾಪೀಠದಲ್ಲಿ, ಪಂಪಾಪತಿಯ ಸಾನ್ನಿಧ್ಯದಲ್ಲಿ ಹರಿಹರನು ಬೋಧಕನಾಗಿ ಕೀರ್ತಿಯನ್ನು ಪಡೆದ. ಭಕ್ತನಾಗಿ ಆತ್ಮೋನ್ನತಿ ಗಳಿಸಿದ. ಆತನ ಉದಾತ್ತಬೋಧೆಯು ಆತನ ಕೃತಿಗಳ ಮೂಲಕ ನಮಗಾಗಿ ಉಳಿದುಬಂದಿದೆ. ಆತನ ಕತೆಗಳ ಮೂಲಕ ವೈಯಕ್ತಿಕ ನೀತಿ, ಸಾಮಾಜಿಕ ಪ್ರಗತಿ, ಅಧ್ಯಾತ್ಮದ ಪ್ರತೀತಿ ಅಂದು ಬೆಳೆದುಬಂದವು.

ಹರಿಹರನ ಕಾವ್ಯದ ಕಮನೀಯತೆಯನ್ನು ವಿವೇಚಿಸುವುದು ಸ್ವತಂತ್ರವಾದ ವಿಷಯವೇ ಆಗುವುದು. ಈ ಉಪನ್ಯಾಸಗಳಲ್ಲಿ ಉದ್ಧರಿಸಿದ ರಗಳೆಗಳ ಭಾಗದಿಂದ ಅದನ್ನು ಸಹಜವಾಗಿಯೇ ಅರಿತುಕೊಳ್ಳಬಹುದಾಗಿದೆ. ಇಲ್ಲಿ ಕೆಲವೊಂದು ಅಂಶಗಳನ್ನು ಮಾತ್ರ ಉದಾಹರಣೆಯೆಂದು ಎತ್ತಿಕೊಳ್ಳಬಹುದು :

ಪ್ರಕೃತಿ-ಪರಮಾತ್ಮ :

‘ ಹರನ ಕರುಣೋದಯವಾದಂತೆ ’.
‘ ಹರಿದಳಾದೇಶದೊಳ್ (ಕಾವೇರಿ) ಹರಭಕ್ತಿರಸದಂತೆ ’.
‘ ಹರನ ಚರಣಂಗಂಡು ನೆಗೆದ ಸರಸಿಜಮಿಲ್ಲಿ ’.
‘ ಹರನ ಬಾಯ್ದೆರೆಗಂಡು ಬಿರಿದದಾಡಿಮಮಿಲ್ಲಿ ’.
‘ ಪಾರ್ವತಿಯ ಮುಡಿಗಂಡು ಬಳೆದ ಕೇಕಿಗಳಿಲ್ಲಿ ’.
‘ ಕೆಯ್ಗಳ್ ಶಿವಭಕ್ತನಂತೆ ತೆನೆಬಾಗಿ ತೂಗುತಿರಲು ’.

ಮಾನವ ಪರಮಾತ್ಮ :

‘ ಹರಲೀಲೆ ಶಿಶುವಾಗಿ ಬೆಳೆದಂತೆ.
ಲೋಕಕ್ಕೆ ಪರವಶನಲ್ಲ, ಹರವಶ ’.
ಏಱುಂಜವ್ವನಂ ಶಿವಪೂಜೆಗೆಂದರಳಲಿರ್ದ ಪರಿಮಳದ ಮೊಗ್ಗೆಯಂತಿಹುದು
ಶಿವಭಕ್ತಿ ಸೋಪಾನದಂತೆ ತೆರೆಗಳು ಮುಸಗೆ,
ಶಿವನಲ್ಲದಾರು ಇಲ್ಲವೆಂಬಂತೆ ತಲೆನಡುಗೆ.

ಶೃಂಗಾರ :

ಮುಖವೆಲ್ಲಂ ಕಣ್ಣೆ–ಬೆನ್ನೆಲ್ಲಂ ಮುಡಿ.
ಉರವೆಲ್ಲಂ ಮೊಲೆ, ನಡೆಯೆಲ್ಲಂ ಮೃದು.
ನುಡಿಯೆಲ್ಲಂ ನೋಟಂ, ನೋಟವೆಲ್ಲಂ ಬೇಟಂ.

ಭಾವದ ತೀಕ್ಷ್ಣತೆ : ಭಾಷೆಯ ಸೊಗಸು :

‘ ಮನದ ಮುಗ್ಗುಲೊಳಿರಿಸಿ ’.

‘ ಧನಂ ತೀರೆ, ಮನಂ ತೀರದಿರೆ ’.

‘ ಮನವನಪ್ಪಿದವರ್ಗೆ ತನುವಿನಾಲಿಂಗನವಗಲ್ಕೆ ’.

‘ ಅಂತಕಂ ಮಾಡಲಾರಂ, ಹರನ ಕಾರ್ಯವಿದು ’ (ಮರಣ).

‘ ದೇವನೊಲ್ಬನ ಕುಲಂ ಸತ್ಕುಲಂ ’.

‘ ಮಾಡಿತೆಲ್ಲಂ ಪೂಜೆ—ಆಡಿತೆಲ್ಲಂ ಸ್ತುತಿ ’.

‘ ನೆನೆವ ಬಯಕೆ ಮನವಾದಂತೆ.
ನೋಡುವ ರೂಪು ಕಣ್ಣಾದಂತೆ ’.

‘ ನಂಜಿನಗಾಳಿ ಬೀಸಿದಂತೆ
ಕೆಂಡದ ಮಳೆ ಕರೆದಂತೆ ’.

ಸಕಲ ಜಗದಾನಂದಂ ಮುಡುಗಟ್ಟಿ, ಚೋಳದೇಶಂ ಗುಡಿಗಟ್ಟಿ, ಭಕ್ತರ ಭಾಳಂ ಪಟ್ಟಂಗಟ್ಟಿ, ಭಕ್ತಿರಸಂ ಸೇತುಗಟ್ಟಿ, ಸತ್ಯದ ನುಡಿ ಕೆಚ್ಚುಗಟ್ಟಿ :

—ಹೀಗೆ ಹರಿಹರನ ಸೊಗಸಿನ ನುಡಿ ಬೆಲ್ಲದಚ್ಚಾಗಿ ಸಾಗುತ್ತಿದೆ. ಹರಿಹರನ ಕಾವ್ಯದ ಮಹಿಮೆಗೆ ಪಂಪಾಪತಿಯ ಕೃಪೆಯಂತೆ ಆತನ ವ್ಯಕ್ತಿತ್ವದ ಹಿರಿಮೆಯೂ ಕಾರಣವಾಗಿರಬೇಕು.

ಹರಿಹರನ ವ್ಯಕ್ತಿತ್ವವನ್ನರಿತುಕೊಳ್ಳಲು ಆತನ ಕೃತಿಗಳು ನಮಗೆ ನೆರವಾಗುತ್ತಿವೆ. ಮುಖ್ಯವಾಗಿ ಪಂಪಾಶತಕ, ರಕ್ಷಾಶತಕ ಇವುಗಳಲ್ಲಿ ಹರಿಹರನ ಆತ್ಮನಿವೇದನೆಯು ಸ್ಫುಟವಾಗಿ ಹೊರಹೊಮ್ಮಿದೆ.

ಸಂಸಾರದ ಆವ ಆವುವೋ ಆಶೆಗಳಿಗೆ ಪಕ್ಕಾಗಿ ಮನಸ್ಸು ಅತ್ತಲಿತ್ತ ಹರಿದು, ಮನದ ಶಾಂತಿ ಕದಡಿದಾಗ ಇಷ್ಟದೇವತೆಯನ್ನು ಮರೆಹೊಕ್ಕ ಪ್ರಾರ್ಥನೆಯಂತೆ ರಕ್ಷಾಶತಕದ ಆರಂಭವಿದೆ. ಈಶನ ಕರುಣೆಗಾಗಿ ಹಾತೊರೆದು ಆತನ ರಕ್ಷಣೆಯನ್ನು ಅಪೇಕ್ಷಿಸುವ ಕವಿಯ ಮನಸ್ಸಿನ ಸ್ಥಿತಿಯನ್ನು ನಾವಿಲ್ಲಿ ಕಾಣುತ್ತೇವೆ. ಮನಸ್ಸು ತನ್ನನ್ನು ಆಶಾವಹ್ನಿಯಲ್ಲಿ ನೂಕುತ್ತಿರುವಾಗ ಮನಸ್ಸನ್ನು ಸಯ್ತಿಟ್ಟು ರಕ್ಷಿಸೆಂಬ ಕೋರಿಕೆಯಿಲ್ಲಿದೆ. ‘ ಪಸರ ಬಲ್ಪಿಂಗೆ ಸಂತಾಪಿಸುವ, ಪರರಿಂದಂ ಮಿಕ್ಕು ಬಾಳಲ್ ಬಯಸಿ ಕುದಿದು ಬೇಳಾಗಿ ಬೆಂಬೀಳುತಿರ್ದ, ಪರಚಿಂತಾಕ್ಷೋಭೆಯಿಂದ ’ ಗಾಸಿಗೊಳ್ಳುವ ಮಾನವನ ಸ್ಥಿತಿಯನ್ನು ಹರಿಹರನು ಅಲ್ಲಿ ವರ್ಣಿಸಿದ್ದಾನೆ. ಧನಧಾನ್ಯ, ಭೂಷಣವಿತತಿ, ಪುತ್ರಸಂತಾನ, ಕಾಂತೆಯರ ತನುಸುಖಚ್ಛಾಯೆ–ಈಯೆಲ್ಲ ಆಸೆಗಳಲ್ಲಿ ನೆಟ್ಟಮನವವನಾದ ಮಾನವನನ್ನು ದೇವನತ್ತ ಹೊರಳಿಸಲು ಬೇಕಾಗುವ ಪ್ರಾರ್ಥನೆಯು ಈ ರಕ್ಷಾಶತಕದಲ್ಲಿದೆ. ಪ್ರಾರ್ಥನೆಯಿಂದ ಏನೆಲ್ಲವನ್ನೂ ಸಾಧಿಸಬಹುದೆಂಬುದು ಮನುಕುಲಕ್ಕೆ ತಿಳಿದ ಮಾತಾಗಿದೆ.

ಹರಿಹರನು ಮೊದಲು ದ್ವಾರಸಮುದ್ರದ ಅರಸನ ಆಸ್ಥಾನದಲ್ಲಿ ಕರಣಿಕನಾಗಿದ್ದನೆಂದು ತಿಳಿಯುತ್ತದೆ. ಅಲ್ಲಿ 'ಆರೇನಂ ಪೇಳ್ದೊಡಂ ಕೈಮುಗಿದು ಪೆರ್ಬಟ್ಟೆಯಂ ಪೊತ್ತು, ಸಂಸಾರಾರಂಭಗೆಯ್ದು ದುಃಖಕ್ಕೆ ಅಲಸುತಿದ್ದ' ಹರಿಹರನು ಪರಸೇವೆಯ ಕಷ್ಟವನ್ನು ಇಂತು ನಿರೂಪಿಸಿದ್ದಾನೆ:

'ನರರಂ ಸೇವಿಪ, ಜೀಯ ಜೀಯೆನುತಮಿರ್ಪೆನೆಂದೊಡಂ ದೈನ್ಯಮು
ಬ್ಬರಿಸುತ್ತಂ ತನುಗುಂದಿಯುಂ ತನಗೆ ತಾನೆಂತಕ್ಕೆಯುಂ ಬೇಡುತಿ
ರ್ಪಿರವಂ ಸುಟ್ಟು ಬಿಸುಟ್ಟು ಭಕ್ತಿಯೊಳಗೋಲಾಡಲ್ ಮನಂಪಂದು ಶಂ
ಕರನಂ ಶಾಶ್ವತನಂ ಕೃಪಾಜಲಧಿಯಂ ಕಂಡೆಂ ವಿರೂಪಾಕ್ಷನಂ'

'ಪೋಗೆನೆ ಪೋಪ, ಬಾರೆಲವೊ, ಬಾರೆನೆ ಜೀಯ ಪಸಾಯವೆಂದು
ಬೆಳ್ಳಾಗುತೆ ಬರ್ಪ, ಮಾಣೆಲವೊ ಸುಮ್ಮನಿರೆಂದೊಡೆ ಸುಮ್ಮನಿರ್ಪ, ಮ
ತ್ತಾಗಳೆ ಬಗ್ಗಿಸಲ್ ನಡುಗಿ ಬೀಳುವ, ಸೇವಿಪ ಕಷ್ಟವೃತ್ತಿಯಂ
ನೀಗಿದೆನೆಂದು ನಿಮ್ಮ ದಯೆಯಿಂ ಕರುಣಾಕರ ಹಂಪೆಯಾಳ್ದನೇ'

ಇಂತಹ ಕಷ್ಟವೃತ್ತಿಯನ್ನು ನೀಗಿದ ಕರಣಿಕ ಹರಿಹರ ಪಂಪಾಪುರದರಸ ವಿರೂಪಾಕ್ಷನ ಅಂಘ್ರಿಯಂ ಪೊರ್ದಿ ಹರಿಹರದೇವನಾದ; ಹಿರಿಯ ಭಕ್ತನಾದ; ಮಹಾಕವಿಯಾದ. ಎಲ್ಲೆಲ್ಲಿ ಅಲೆದರೂ ಶಾಂತಿ ದೊರೆಯುವಂತಿಲ್ಲವೆಂಬುದನ್ನು ಮನಗಂಡ ಹರಿಹರನು ಭಕ್ತವೃಂದೋತ್ಸವ ಕಲ್ಪವೃಕ್ಷ ಪಂಪಾಪುರದರಸನ ಚರಣಯುಗಳವನ್ನು ಹೊಂದಿದಾಗ ಪರಮಶಾಂತಿಯನ್ನು ಪಡೆದ. ಮಾನವರಿಗೆ ಹಲ್ಗಿರಿದು ಬಾಯಿಂದ ದೈನ್ಯಾಕ್ಷರ ಹೇಳಬೇಕಾಗಿದ್ದ ಪರಿಸ್ಥಿತಿಯಿಂದ ತಪ್ಪಿಸಿಕೊಂಡು, ಸೇವಾನರಕ ನದಿಯನ್ನು ದಾಟಿ ದೇವಮಾನವನಾದ. ಮನೆಯೆಂದು, ಮಕ್ಕಳೆಂದು, ಜನನಿ ಜನಕರೆಂದು, ಪತ್ನಿಯೆಂದು, ಧನಧಾನ್ಯವೆಂದು, ಸಕಲ ವಿಷಯ ತನ್ನದೆಂದು ತಾಪತ್ರಯದೊಳ್ ಕುದಿದು, ಬತ್ತಿ, ಬಾಡಿ ಯಾತನೆಗೊಳ್ಳುವ ಮನಸ್ಸು ದೇವನಡಿಯಲ್ಲಿ ಸಾಂತ್ವನ ಪಡೆಯುತ್ತಿದೆ. ರೋಗಗಳಿಂದ ನವೆದು, ಸೇವೆಯಿಂದ ಸೆಡೆದು ನಾನಾ ಆಸೆಗಳಿಂದ ಭಂಗಹೊಂದುವ ಹಾಗು ಕೋಪದಿಂದ ಅಳ್ಕಿ, ಮದದಿಂದ ಮುಂದುಗೆಟ್ಟಾಗ ಶಂಭುವಿನ ಕೃಪೆಯು ಹಾದಿಯ ಬೆಳಕಾಗುತ್ತಿದೆ.

ದ್ವಾರಸಮುದ್ರದಲ್ಲಿ ನರರನ್ನು ಸೇವಿಸುವಾಗ, ತನುಗುಂದಿ ದೈನ್ಯಬಟ್ಟು ಅಯ್ಯ, ಜೀಯ ಎಂದೆನ್ನುವಾಗ ಹರಿಹರನಿಗೆ ವ್ಯಥೆಯಾಗುತ್ತಿತ್ತು. ಹಂಪೆಗೆ ಬಂದು ನೆಲಸಿದಾಗ ಆ ಯಾಚಕನ ಇರವನ್ನು ಆತನು ಸುಟ್ಟುಹಾಕಿದ. ಭಕ್ತಿಶರಧಿಯೊಳೋಲಾಡಹತ್ತಿದ. ಕೃಪಾಜಲಧಿಯಾದ ಶಾಶ್ವತನಾದ ಶಂಕರನ ಪಾದಗಳನ್ನು ಹರಿಹರನು ಗಟ್ಟಿಯಾಗಿ ಹಿಡಿದುಕೊಂಡ. ನರಸೇವೆಯು ಕಷ್ಟ ಹರಿಯಿತು. ಭಕ್ತಿಯ ಆನಂದಾವೇಶ ಕೈಸಾರಿತು.

ಶಿವನ ಬಗೆಗಿರುವ ಹರಿಹರನ ನಿಷ್ಠೆ ಅನುಪಮವಾದುದು. 'ನಿಮ್ಮ ಪಾದಾಬ್ಜಮಂ ಬಿಡೆಂ, ಪೋಳ್ದೊಡಂ ಪೊಯ್ದೊಡಂ ಬಿಡೆಂ ಅಭವ ಬಲವಿಡಿದೆಂ ಮಾಣೆ, ಶಂಕರಾ' ಎಂಬುದು ಆತನ ವಾಣಿಯಾಗಿದೆ. 'ಮೃಡನಿರ್ದಂತಿರೆ ಕೋಟಿ ಕೂಳ ದೈವಕ್ಕಾಸೆಯಂ ಮಾಡಿ ಕಿಡದಿರ್ ಮಾನವಾ' ಎಂಬುದು ಆತನ ಸಂದೇಶವಾಗಿದೆ. ಶತಕಗಳಲ್ಲಿಯ ನುಡಿಗಳು, ದೃಷ್ಟಾಂತಗಳು ಮುಂದೆ ಆತನು ರಚಿಸಲಿದ್ದ ರಗಳೆಗಳಿಗೆ ಮುನ್ಸೂಚಿಯಂತೆ ತೋರುತ್ತಿವೆ. 'ನಿನ್ನ ಭಕ್ತಾವಳಿಯ ನಡೆವಳಿ ಘನಚೋದ್ಯಂ' ಎಂಬ ಪಂಪಾಶತಕದ ಉಕ್ತಿಯನ್ನು ರಗಳೆಯಲ್ಲಿ ವಿಶದೀಕರಿಸಲಾಗಿದೆ. ಹರಿಹರನ ಕೃತಿಗಳಲ್ಲಿ ಹರನಾಮ ಸ್ಮರಣೆ, ಹರಪೂಜೆಯ ತಲ್ಲೀನತೆ ಹೊರಸೂಸಿ ಹರಿದಂತಿವೆ. ಹರನಾಮವು ಕರ್ಣಮಂ ತಾಗಿದಾಗ ಆನಂದವು, ರೋಮಾಂಕುರವೆಳ್ದು ಅಶ್ರುಪ್ರವಾಹಂಗಳ್ ಇಳಿತಂದು ಅಂಗವು ಅಲ್ಲಾಡುತ್ತಿರುವ ಚಿತ್ರ ಶತಕಗಳಲ್ಲಿದೆ; ರಗಳೆಗಳಲ್ಲಿದೆ. ಪಂಪಾಶತಕದಲ್ಲಿ, ಗಿರಿಜಾಕಲ್ಯಾಣದಲ್ಲಿ ಶಿವನನ್ನು ಬಣ್ಣಿಸುವ ಬಗೆಯು ಭಕ್ತರ ಹೃದಯವನ್ನು ಸೂರೆಗೊಳ್ಳಬಲ್ಲದು. ಶಿವಶರಣರನ್ನು ಕುರಿತ ವರ್ಣನೆ ರಗಳೆಗಳಲ್ಲಿ ಬರುವುದುಂಟು. ಪಂಪಾಶತಕದಲ್ಲಿ ಶಿವಗಣಚಾರಿತ್ರ್ಯದ ರಚನೆಯ ಸೂಚನೆಗಳನ್ನು ಕಾಣುತ್ತೇವೆ. 'ಹಂಪೆಯಧಿನಾಥನ ಭಕ್ತರ ಸದ್ಗುಣಂಗಳ ಪೇಳ್ವೊಡೆನ್ನಳವೆ' ಎಂಬ ಮಾತಿನಲ್ಲಿ ಆ ಸೂಚನೆಯಿದೆ. 'ಅವರು ಹರಿದುದೆ ಗಂಗೆ, ನಿಂತುದೆ ತೀರ್ಥ' ಎಂಬ ನುಡಿಯು ರಗಳೆಗಳಲ್ಲಿಯ ಜೀವನ ಚಿತ್ರದ ಸೂತ್ರದಂತಿದೆ.

> ಪೆಱತೊಂದಂ ನುಡಿಯಂ ಪ್ರಪಂಚ ರಹಿತಂ ಕಾರ್ಪಣ್ಯಮಂ ಮಾಡನೊ
> ಲ್ದೆಱಗಂ ಕಾಮದ ಬಟ್ಟೆಯತ್ತಲೆಳಸಂ ತರ್ಕಕ್ಕೆ ಮಾತ್ಸರ್ಯವೆಂ
> ದೞಿಯಂ ಲೋಕದ ಮಾನವರ್ಗೆ ಮಣಿಯಂ ಸದ್ಭಕ್ತಸತ್ಸಂಗಮಂ
> ತೊಱೆಯಂ ಸತ್ಯಮನಲ್ಲದಾಡನಚಲಂ ಭಕ್ತಂ ವಿರೂಪಾಕ್ಷನಾ

ಎಂಬ ಪದ್ಯದಿಂದ ಹರಭಕ್ತನ ಲಕ್ಷಣವನ್ನು ಮತ್ತು ಹರಿಹರನ ವ್ಯಕ್ತಿತ್ವವನ್ನು ನಾವು ಅರಿತುಕೊಳ್ಳಬಲ್ಲೆವು.

ನರಸೇವೆಯನ್ನು ತೊರೆದ ಹರಿಹರ ಶಿವನ ಊಳಿಗಕ್ಕೆ ಅನುವಾದ. ಲೋಕದ ಕಷ್ಟವನ್ನು ಹರಿದುಕೊಂಡು ದೈವೀ ಆನಂದದ ಹಾದಿಯಲ್ಲಿ ಮುಂದುವರಿದ. ನಿಸ್ಪೃಹ ಮನೋಭಾವದಿಂದ ಉದಾತ್ತ ವ್ಯಕ್ತಿತ್ವ ಗಳಿಸಿದ. ಲೋಕಾನುಭವವು ದುಃಖಾನುಭವವೆಂಬುದನ್ನು ಅರಿತುಕೊಂಡು ಅದನ್ನು ಶಿವಾನುಭವಕ್ಕೆ ತಿರುಗಿಸಿಕೊಂಡ. ಸಂಸಾರದ ಉದ್ವೇಗದಿಂದ ಬೆಂದು ಬೇಯುತ್ತಿರುವಾಗ ಹಂಪೆಯರಸನ ಕೃಪೆಯ ಸಿಂಚನ ಪಡೆದ. ಕಾವ್ಯವು ಶಿವನನ್ನು ಒಲಿಸುವ ಸಾಧನವಾಗಿ ಪರಿಣಮಿಸಿತು.

> 'ಭಕ್ತಿಸುಖದಿಂದಿತರ ಸುಖವದೆಲ್ಲಿಯದೆನಿಸಿ....
> ಪರಮ ಭಕ್ತಿಯ ಸುಖದ ಸೊಕ್ಕೇರಿ'

ಭಕ್ತಗಣದ ಚರಿತ್ರರಚನೆಗೆ ತೊಡಗಿದ. ತನ್ನ ಆತ್ಮೋನ್ನತಿಯನ್ನು ಗಳಿಸಿ ಕೊಂಡ. ಹರಿಹರದೇವನು ಆತ್ಮೋನ್ನತಿಯನ್ನು ಪಡೆಯಬೇಕೆನ್ನುವವರಿಗೆ ತನ್ನ ಕಾವ್ಯ ಕೃತಿಗಳ ಮೂಲಕ ಒಳ್ಳೆಯ ಸಾಧನಗಳನ್ನು ಒದವಿಸಿದ್ದಾನೆ. ಭಕ್ತರ ಚರಿತೆಗಳನ್ನು ಮನದುಂಬಿ ಹಾಡಿದ್ದಾನೆ. ಶಿವಗಣಚಾರಿತ್ರದಲ್ಲಿ ಚಿತ್ರಿತರಾದ ವ್ಯಕ್ತಿಗಳು ನಿಸ್ಸೀಮ ಭಕ್ತರಾಗಿದ್ದಾರೆ. ಭಕ್ತಿ, ನಿಷ್ಠೆ, ಅರಿವುಗಳ ಬಲದಿಂದ ಮಾನವೀಯ ಮಟ್ಟದಿಂದ ಮೇಲಕ್ಕೇರಿದ ವಿಜ್ಞಾನಮಯ ಜೀವಿಗಳೆಂದು ಅವರನ್ನು ನಾವು ತಿಳಿಯಬೇಕಾಗಿದೆ.

ಮಾನವೀಯ ಭಾವನೆಗಳ ಮಹೋನ್ನತೀಕರಣ ಸಾಧಿಸುವುದರ ಆವಶ್ಯಕತೆ ಯನ್ನು ಹರಿಹರ ತನ್ನ ಕೃತಿಗಳಲ್ಲಿ ಮಾರ್ಮಿಕವಾಗಿ ಚಿತ್ರಿಸಿದ್ದಾನೆ. 'ಗಿರಿಜಾ ಕಲ್ಯಾಣ ಕಾವ್ಯವು ಮೊದಲು ಶೃಂಗಾರದ ಕುದುರೆಯನ್ನೇರಿ, ಅದನ್ನಿಳಿದು ಶಾಂತ ವೃಷಭವನ್ನೇರಿ ಕೈಲಾಸದ ಕಡೆಗೆ ಸಾಗುತ್ತಿದೆ', ಎಂಬ ವಿಮರ್ಶೋಕ್ತಿ ಸಮುಚಿತ ವಾಗಿದೆ. ತನ್ನ ಯೌವನ, ಸೌಂದರ್ಯ, ವೈಭವ, ಅಲಂಕಾರ ಇವುಗಳೊಂದಿಗೆ ಕಾಮನ ನೆರವನ್ನೂ ಪಡೆದ ಪಾರ್ವತಿಯು ಶಿವನನ್ನು ಆಕರ್ಷಿಸುವಲ್ಲಿ ವಿಫಲಳಾದುದರ ಚಿತ್ರವನ್ನು ಹರಿಹರನು ಗಿರಿಜಾಕಲ್ಯಾಣ ಕಾವ್ಯದಲ್ಲಿ ಸುಂದರವಾಗಿ ಬಿತ್ತರಿಸಿದ್ದಾನೆ. ಪಾರ್ವತಿಯ ಪಾತ್ರದಲ್ಲಿ ಮಾನವನ ಮಾನಸಿಕ ಮಟ್ಟದ ಭಾವನೆಗಳು ಪೋಷಣೆ ಗೊಂಡು ಅಹಂಕಾರಕ್ಕೆ ಪಕ್ಕಾದ ಚಿತ್ರವನ್ನು ಹರಿಹರನು ಸೂಚಿಸಿದ್ದಾನೆ. 'ನೀನಂಜದಿರ್ ಆನ್ ಇರ್ದಪೆಂ ರಕ್ಷೆಯಾನೆ ಸಹಾಯಂ' ಎಂದು ಪಾರ್ವತಿಯು ಮನ್ಮಥನಿಗಿತ್ತ ಆಶ್ವಾಸನವು ಫಲಿಸಲಿಲ್ಲ. ಇದಕ್ಕೆ ಕಾರಣವೆಂದರೆ ಶಿವಪೂಜೆಗೆಂದು ಬಂದ ಅಗಜೆಯಲ್ಲಿ ಅಹಂಕಾರದ ಭಾವವಿದೆ. ಮನ್ಮಥನ ನೆರವಿನಿಂದ ಶಿವನನ್ನು ಒಲಿಸಬೇಕೆಂದಿದ್ದಾಳೆ. ವಿಲಾಸಿನೀ ನಿಕರದಿಂದ ಒಡಗೂಡಿ ಬಂದಿದ್ದಾಳೆ. ಕೋಟ್ಯನು ಕೋಟಿ ಕುಸುಮಾಯುಧರನ್ನು ಪುಟ್ಟಿಸುವ ಶಕ್ತಿ ಅವಳ ನೋಟದಲ್ಲಿದೆ. ಆದರೇನು? 'ಮುಂತೆ ಮೆಯ್ಯಿಕ್ಕಿರ್ದ ಗಿರಿಜಾತೆಯಂ ಭೂತೇಶ್ವರಂ ಕಂಡು ಆನೇಕೆ ಈ ಮಾನಿನಿ ಯೇಕೆ?' ಎಂದುಕೊಳ್ಳುತ್ತಾನೆ. ನಿಟಿಲಾಕ್ಷದಿಂದ ಮನ್ಮಥನು ಸುಟ್ಟು ಬೂದಿ ಯಾಗುತ್ತಾನೆ. ಮುಂದೆ ನಿಂತ ಗಿರಿಜಾತೆಯನ್ನು ಈಕ್ಷಿಸದೆ, ನುಡಿಯಿಸದೆ ಶಿವನು ಅಂತರ್ಧಾನಕ್ಕೆ ಸಲ್ಲುತ್ತಾನೆ. ಇದರಿಂದಾಗಿ ಪಾರ್ವತಿಯ ಮಾನವೀಯ ಭಾವದ ಅಹಂಕಾರಕ್ಕೆ ಆಘಾತವೊದಗುತ್ತಿದೆ. ಇನ್ನುಮುಂದೆ ಅಹಂಕಾರದ ಕುದುರೆಯನಿಳಿದು ಶಾಂತ ವೃಷಭವನೇರಿ ಕೈಲಾಸದ ಕಡೆಗೆ ಸಾಗುವ ಕಾವ್ಯಲಹರಿ ಆರಂಭವಾಗುತ್ತಿದೆ. ನಿಸ್ಸೀಮಭಕ್ತಿಯಿಂದ, ಅಚಲಶ್ರದ್ಧೆಯಿಂದ, ನಿಷ್ಠುರ ನಿಷ್ಠೆಯಿಂದ ಪಾರ್ವತಿಯು ಸಾತ್ವಿಕಭಾವದಿಂದೊಡಗೂಡಿ ಶಿವನನ್ನು ಒಲಿಸುವ ಹಾದಿಯನ್ನು ಹಿಡಿಯುತ್ತಾಳೆ:

ತಾನಿರ್ದಲ್ಲಿಗೆ ನಡೆತಂ
ದಾನರ್ಚಿಸೆ ಕಾಮವೈರಿ ನುಡಿಯಿಸದಂತ ॥
ರ್ಧಾನಕ್ಕೆ ಸಂದನದಱಿಂ
ದಾನಿರ್ದಲ್ಲಿಗೆ ಸಮಂತು ತನ್ನನೆ ತರ್ಪೆಂ ॥

ಎಂದು ನಿಶ್ಚಯಿಸುತ್ತಾಳೆ. ತಾನಿರುವಲ್ಲಿಗೇ ಶಿವನು ಬರುವಂತೆ ಮಾಡುವ ಸಾಧನೆಯನ್ನು ಗಿರಿಜಾಕಲ್ಯಾಣದ ಗಿರಿಜಾಕಾಂತೆ ಕೈಕೊಂಡಳು. ರಗಳೆಯಲ್ಲಿಯ ಭಕ್ತರೆಲ್ಲ ಆ ಹಾದಿಯಿಂದಲೇ ಹೊರಟದ್ದಾರೆ.

ಲೋಕದ ಕಲ್ಯಾಣಕ್ಕಾಗಿ ಶಿವ-ಶಕ್ತಿಯರ ಮಿಲನವಾಗಬೇಕೆಂಬ ರೂಪಕ ಗಿರಿಜಾಕಲ್ಯಾಣದಲ್ಲಿದೆ. ಸಮರಸದಾಂಪತ್ಯವು ಅದಕ್ಕೆ ಪೋಷಕವಾಗುತ್ತಿದೆಯೆಂಬ ಮಾತೂ ಅಲ್ಲಿದೆ. ವಿಷಮದಾಂಪತ್ಯವು ತೊಡಕನ್ನು ತಂದಾಗ ಅದನ್ನು ನಿರಾಕರಿಸಿದ ಅಕ್ಕಮಹಾದೇವಿಯ ಚಿತ್ರವನ್ನು ಹರಿಹರನು ರಗಳೆಯಲ್ಲಿ ಬಳಸಿಕೊಂಡಿದ್ದಾನೆ. ಅಕ್ಕಮಹಾದೇವಿಗೆ ಇಷ್ಟದೇವತೆಯ (ಚೆನ್ನಮಲ್ಲಿಕಾರ್ಜುನ) ನಿಲಯ ಗಂಡನ ಮನೆಯಾಯಿತು. ಆದರೆ ಕಾರಿಕಾಲಮ್ಮೆಗೆ ಅದೇ ತವರುಮನೆಯಾಯಿತು. ದೇಹದ ಅಭಿಮಾನ ತೊರೆವಲ್ಲಿ, ಮನೆಬಿಟ್ಟು ಹೊರಡುವಲ್ಲಿ, ನಿಷ್ಠುರನೇಮ ಪಾಲಿಸುವಲ್ಲಿ ಎರಡೂ ಚಿತ್ರಗಳು ಒಂದೇ ಬಗೆಯಾಗಿ ಹರಿಹರನ ಆ ಎರಡು ರಗಳೆಗಳಲ್ಲಿ ಒಡಮೂಡಿವೆ. ವಿಷಮತೆಯಿಂದ ಕೂಡಿದ ಜೀವನದ ದುಃಖಾನುಭವವು ಶಿವಾನುಭವಕ್ಕೆ ಪ್ರಚೋದನೆಯನ್ನೊದಗಿಸಿದ ಮಾತೂ ಈ ಎರಡು ರಗಳೆಗಳಿಗೆ ಸಾಮಾನ್ಯವಾಗಿದೆ.

ಮಾನವನ ಭಾವನೆಗಳ ಮಹೋನ್ನತೀಕರಣದತ್ತ ದೃಷ್ಟಿಯನ್ನು ಹರಿಯಿಸುವ ಜೀವನದರ್ಶನವನ್ನು ನಾವು ಹರಿಹರನ ಕಾವ್ಯಕೃತಿಗಳಲ್ಲಿ ಮುಖ್ಯವಾಗಿ ರಗಳೆಗಳಲ್ಲಿ ಕಾಣುತ್ತೇವೆ. ಆ ದೃಷ್ಟಿಯಿಂದ ಹರಿಹರನ ರಗಳೆಗಳ ವಿವೇಚನೆಯನ್ನು ಈ ಉಪನ್ಯಾಸಗಳ ವಿಷಯವನ್ನಾಗಿ ಆರಿಸಿಕೊಳ್ಳಲಾಗಿದೆ.

ಹರಿಹರಕೃತ ರಗಳೆಗಳು

ಹರಿಹರನು ರಚಿಸಿದ ರಗಳೆಗಳ ಸಂಖ್ಯೆಯ ನಿರ್ಧಾರವು ಕನ್ನಡ ಸಾಹಿತ್ಯದ ಪ್ರೌಢವ್ಯಾಸಂಗವನ್ನು ಕೈಕೊಂಡವರಿಗೆ ಒಂದು ಸಮಸ್ಯೆಯಾಗಿ ಪರಿಣಮಿಸಿದೆ. ಹರಿಹರನು ತನ್ನ 'ಲಿಂಗಾರ್ಚನೆಯ ರಗಳೆ'ಯಲ್ಲಿ:

'ನಚ್ಚಿಸರುವತ್ತು ಮೂವರನಸಂಖ್ಯಾತರಂ
ಅಚ್ಚರಿಯೊಳೆಸೆವ ಭಕ್ತಾಂಗನೆಯರೆಲ್ಲರಂ
ಭಕ್ತಿಯಿಂದಿಂತು'

ಪಾಡಿದೆನೆಂದು ಹೇಳುತ್ತಾನೆ. ಇಲ್ಲಿ 'ಅಸಂಖ್ಯಾತರಂ' ಎಂಬ ಪದವು ಬಸವಣ್ಣನವರ ಕಾಲದ ಸಾವಿರಾರು ಶರಣರ ಚರಿತ್ರೆಗಳನ್ನು ಬರೆಯುವ ಮಹಾಯೋಜನೆಯನ್ನು ಹರಿಹರನು ಕೈಗೊಂಡಿರಬೇಕೆಂಬುದನ್ನು ಸ್ಪಷ್ಟಗೊಳಿಸುತ್ತಿದೆ. ಹರಿಹರನ ರಗಳೆಗಳ ಎಂಟು ಮಾತೃಕೆಗಳು ಈಗ ದೊರೆತಿವೆ:

೧	ಮೈಸೂರು ಓರಿಯಂಟಲ್ ಲಾಯಬ್ರರಿ	ಪ್ರತಿ	ಅ.
೨	,, ,, ,,	,,	ಬ
೩	,, ,, ,,	,,	ಕ
೪	ಚಿತ್ರಕಲ್‌ದುರ್ಗದ ಮಠದ	,,	
೫	ಶ್ರೀ ಫ-ಗು-ಹಳಕಟ್ಟಿಯವರ	,,	
೬	ದಾವಣಗೇರಿ	,,	
೭	ತುಮಕೂರು	,,	
೮	ತಿಪಟೂರು	,,	

ಈ ಎಲ್ಲ ಮಾತೃಕೆಗಳಲ್ಲಿ ಒಟ್ಟು ೧೫೪ ರಗಳೆಗಳಿವೆ. ಹೀಗೆ ದೊರೆಯುವ ಈ ೧೫೪ ರಗಳೆಗಳೆಲ್ಲವೂ ಹರಿಹರಕೃತವಾಗಿರಲಾರವು. ಈ ರಗಳೆಗಳನ್ನೆಲ್ಲ ವಿವರವಾಗಿ ಅಭ್ಯಾಸಮಾಡಿ ನೋಡಿದಾಗ ಕೆಲವು ರಗಳೆಗಳು ಹರಿಹರನವಲ್ಲವೆಂದು ಸಿದ್ಧವಾಗುತ್ತಿದೆ. ಭಾಷೆ, ಶೈಲಿ ಮತ್ತು ಕಥಾರಚನೆ ಇವುಗಳ ದೃಷ್ಟಿಯಿಂದ ಕೆಲವು ರಗಳೆಗಳು ಹರಿಹರನ ಕೃತಿಗಳ ತೂಕಕ್ಕೆ ಬರುವುದಿಲ್ಲ. ಭಿನ್ನಕವಿಕೃತ ರಗಳೆಗಳು ಪ್ರತಿ ಮಾಡುವವರ ತಪ್ಪು ಕಲ್ಪನೆಯಿಂದ ಈ ಕಟ್ಟುಗಳಲ್ಲಿ ಸೇರಿರಬೇಕು. ಒಮ್ಮೊಮ್ಮೆ ರಗಳೆಯನ್ನು ಬರೆದ ಕವಿಯ ಉಲ್ಲೇಖವಿಲ್ಲದಾಗ ರಗಳೆಗಳನ್ನು ಬರೆದು ಪ್ರಸಿದ್ಧಿಯನ್ನು ಪಡೆದ ಹರಿಹರನಿಗೆ ಈ ರಗಳೆಯ ಕರ್ತೃವೆಂದು ನಿರ್ದೇಶಿಸಿ ಪ್ರತಿಮಾಡಿರಬಹುದೆಂದು ಊಹಿಸಲೂ ಸಾಧ್ಯ

ವಿದೆ. ಈ ವಿಚಾರವನ್ನು ಹಿನ್ನೆಲೆಯಾಗಿಟ್ಟುಕೊಂಡು ಎಲ್ಲ ರಗಳೆಗಳನ್ನು ಕೂಲಂಕಷವಾಗಿ ಅಭ್ಯಾಸಮಾಡಿ ಕೇವಲ ೧೦೬ ರಗಳೆಗಳನ್ನು ಹರಿಹರನು ಬರೆದನೆಂಬ ನಿರ್ಧಾರವೊಂದು ಈಗ ಅಭ್ಯಾಸಿಗಳ ಮುಂದೆ ಬಂದಿದೆ. ಈ ವಿಷಯದಲ್ಲಿ ಸಂಶೋಧನ ಕೈಕೊಂಡಿದ್ದ ಡಾ|| ಕೆ. ಈಶ್ವರನ್ ಅವರು 'ಹರಿಹರನ ಕೃತಿಗಳು—ಸಂಖ್ಯಾ ನಿರ್ಣಯ' ಎಂಬ ಮಹಾಪ್ರಬಂಧವನ್ನು ರಚಿಸಿದ್ದಾರೆ. ಅದು ಕರ್ನಾಟಕ ವಿಶ್ವ ವಿದ್ಯಾಲಯದ ಪಿಎಚ್.ಡಿ. ಪದವಿಗಾಗಿ ಸ್ವೀಕೃತವಾಗಿದೆ. ಈ ಮಹಾಪ್ರಬಂಧದಲ್ಲಿ ಹರಿಹರನ ರಗಳೆಗಳ ಸಂಖ್ಯಾನಿರ್ಣಯದ ವಿವರಗಳನ್ನು ಕೂಲಂಕಷವಾಗಿ ಚರ್ಚಿಸ ಲಾಗಿದೆ. ಅವರಲ್ಲಿ ಹರಿಹರಕೃತ ರಗಳೆಗಳ ಸಂಖ್ಯೆ ೧೦೬ ಎಂದು ನಿರ್ಧರಿಸಲಾಗಿದೆ. ಅವುಗಳ ಪಟ್ಟಿಯನ್ನು ಮುಂದೆ ಕೊಡಲಾಗಿದೆ.

ಪುರಾತನರ ರಗಳೆಗಳು :

೧ ಅತಿಭಕ್ತ
೨ ಅಮರ ನೀತಿ
೩ ಅಯ್ಯಡಿ
೪ ಅರಿವಾಳ್ತಾಂಡ
೫ ಅಃಪೋತಿ
೬ ಆನಾಯನಾರ
೭ ಇರಿಭಕ್ತ
೮ ಇಹಃಪಗೆಯಾಂಡ
೯ ಇಳೆಯಾಂಡ ಗುಡಿಮಾರ
೧೦ ಎಡೆಗಣೆಯ ಪೆರುಮಾಳೆ
೧೧ ಏಣಾಧಿನಾಥ
೧೨ ಒಲಘಾಂಡ ಮೂರ್ತಿ
೧೩ ಕಡೆವೂರ ಕಾರಿ
೧೪ ಕಣಂಬುಲ್ಲನಂಬಿ
೧೫ ಕಣ್ಣಪ್ಪ
೧೬ ಕಲಿಕಂಪ
೧೭ ಕಲಿಕಾಮದೇವ
೧೮ ಕಲಿಯ ನಾಯ್ಯರ
೧೯ ಕಳೆಚಂಗ ಚೋಳ
೨೦ ಕಳೆಚಂಗ ಪೆರುಮಾಳ
೨೧ ಕಾರಿಕಾಲಮ್ಮೆ

೨೨ ಕುಲಚ್ಚರಿ
೨೩ ಕೊಂಗುಳಿಯ ಕಲಿಯ
೨೪ ಕೊಲ್ಪುಲಿ
೨೫ ಗಣನಾಥದೇವ
೨೬ ಚಂಡೇಶಪಿಳ್ಳೆ
೨೭ ಚೇರು ತೊಣೆಯಾಂಡ
೨೮ ಚೇರಮ
೨೯ ಜಡೆಯ ನಾಯನಾರ, ಸುಜ್ಞಾನಿದೇವಿ
೩೦ ತಿರುನೀಲಕಂಠ
೩೧ ತಿರುನೀಲಕಂಠಪಾಣ
೩೨ ತಿರುನೀಲನಕ್ಕ
೩೩ ತಿರುಕುರಂಡೆಯ ತೊಂಡ
೩೪ ತಿರುನಾಳ್ರೋವ
೩೫ ತಿರುಮೂಲದೇವ
೩೬ ನಂಬಿಯಣ್ಣ
೩೭ ನಮಃಶಿವಾಯ ಮುರುಘ
೩೮ ನಮಿನಂದಿ
೩೯ ನರಸಿಂಗಮುನಿ
೪೦ ನಿಡುಮಾರದೇವ
೪೧ ನೈಶ
೪೨ ಪೊಗಲ್ತೊಣೆಯಾಂಡ
೪೩ ಪಾಂಡ್ಯ ಮಹಾದೇವಿ
೪೪ ಪೊಸಲೆಯಾಂಡ
೪೫ ಪೆರುಮಳಲಿಯ ಕುರುಂಬ
೪೬ ಮಾನಕಂಜಾರ
೪೭ ಮೂರ್ಖ
೪೮ ಮೆರೆಮಿಂಡದೇವ
೪೯ ಮೊನಿ ಇಡವ
೫೦ ರುದ್ರ ಪಶುಪತಿ
೫೧ ವರದಂಡಿಭಕ್ತ
೫೨ ವರಕೃತಾಂತ
೫೩ ವರಶಕ್ತಿಯಾರ

೫೪ ವಾಗೀಶ್ವರ
೫೫ ವಾಯಿಲಾರ
೫೬ ಸಾಂಖ್ಯತೊಂಡ
೫೭ ಸಿರಿಯಾಳ
೫೮ ಸೇದಿರಾಜ
೫೯ ಸೋಮಾಸೀಮಾರ

ಪುರಾತನರ ಹೆಸರಿನಲ್ಲಿ ಇನ್ನೆರಡು ರಗಳೆಗಳು :

೬೦ ಚೆನ್ನಯ ಮಾದರ
೬೧ ನಂಬಿಯಕ್ಕ

ತಮಿಳುನಾಡಿನ ಇತರ ಶರಣರ ರಗಳೆಗಳು :

೬೨ ತಿಲ್ಲೈವೇಳಾಂಧರರು
೬೩ ಪೊಯ್ಯಡಿ
೬೪ ಮನುಚೋಳ

ಕೈಲಾಸದಲ್ಲಿ ನಡೆದ ಕಥೆಯ ರಗಳೆಗಳು :

೬೫ ದಕ್ಷಾಧ್ವರ
೬೬ ಭೃಂಗಿ

ನೂತನ ಶರಣರ ರಗಳೆಗಳು :

೬೭ ಅಮ್ಮವ್ವೆ
೬೮ ಆದಯ್ಯ
೬೯ ಉದ್ಭಟ
೭೦ ಏಕಾಂತ ರಾಮಿತಂದೆ
೭೧ ಓಹಿಲಯ್ಯ
೭೨ ಕುಂಬಾರ ಗುಂಡಯ್ಯ
೭೩ ಕೆಂಭಾವಿ ಭೋಗಣ್ಣ
೭೪ ಕೇಶಿರಾಜ ದಣ್ಣಾಯಕ
೭೫ ಕೋವೂರ ಬೊಮ್ಮಯ್ಯ
೭೬ ಕೋಳೂರ ಕೊಡಗೂಸು
೭೭ ತೆಲುಗು ಬೊಮ್ಮಣ್ಣ

೭೮ ಪ್ರಭುದೇವ
೭೯ ಬಸವೇಶ್ವರ
೮೦ ಬಾಣ
೮೧ ಬಾಹೂರ ಬೊಮ್ಮಯ್ಯ
೮೨ ಮಲುಹಣ
೮೩ ಮಹಾದೇವಿಯಕ್ಕ
೮೪ ಮಳೆಯ ದೇವರಾಜ
೮೫ ಮಾರುಡಗಿ ನಾಚಿತಂದೆ
೮೬ ಮಾಸೂಟೆ ಚೌಡಯ್ಯ
೮೭ ರೇವಣಸಿದ್ಧ
೮೮ ವೈಜಕವ್ವೆ
೮೯ ಶಂಕರ ದಾಸಿಮಯ್ಯ
೯೦ ಸಾಮವೇದಿ
೯೧ ಸುರಗಿ ಚೋಳಯ್ಯ
೯೨ ಹಲಾಯುಧ
೯೩ ಹಾವಿನಹಾಳ ಕಲ್ಲಯ್ಯ
೯೪ ಹೇರೂರ ಹೆಣ್ಣು

ಸಂಕೀರ್ಣ ರಗಳೆಗಳು :

(ಅ) ವ್ಯಕ್ತಿನಿಷ್ಠ

೯೫ ಪಿಂಡೋತ್ಪತ್ತಿ
೯೬ ಪುಷ್ಪ
೯೭ ಲಿಂಗಾರ್ಚನ
೯೮ ಹಂಪೆಯರಸ

(ಆ) ವಸ್ತುನಿಷ್ಠ

೯೯ ಗುಣಸ್ತೋತ್ರ
೧೦೦ ಜಯ
೧೦೧ ನಮಃಶಿವಾಯ
೧೦೨ ಪಂಚಾಕ್ಷರಿ
೧೦೩ ಪಂಪಾಕ್ಷೇತ್ರ
೧೦೪ ಮಹಿಮಾ
೧೦೫ ರುದ್ರಾಕ್ಷಿ
೧೦೬ ವಿಭೂತಿ

ಹರಿಹರನವೆಂದು ಒಪ್ಪಿಕೊಳ್ಳಬೇಕಾಗಿರುವ ೧೦೬ ರಗಳೆಗಳನ್ನು ಕೆಳಗಿನಂತೆ ವಿಭಾಗಿಸಲಾಗಿದೆ.

೧	ಪುರಾತನರ ರಗಳೆಗಳು		೬೧
೨	ತಮಿಳುನಾಡಿನ ಇತರ ಶರಣರ ರಗಳೆಗಳು		೩
೩	ನೂತನರ	,,	೨೮
೪	ಕೈಲಾಸದಲ್ಲಿ ನಡೆದ ಕಥೆಯ	,,	೨
೫	ಸಂಕೀರ್ಣ ರಗಳೆಗಳು :		
	ವಸ್ತುನಿಷ್ಠ	,,	೪
	ವ್ಯಕ್ತಿನಿಷ್ಠ	,,	೮
			೧೦೬

ಈ ನೂರಾರು ರಗಳೆಗಳಲ್ಲಿ ಪುರಾತನ ರಗಳೆಗಳ ಸಂಖ್ಯೆಯೇ ದೊಡ್ಡದಾಗಿದೆ. ಅಸಂಖ್ಯಾತರ ರಗಳೆಗಳ ರಚನೆಯನ್ನು ಹಮ್ಮಿದ ಹರಿಹರನಿಗೆ ಅದರಲ್ಲಿ ಕೆಲವು ರಗಳೆಗಳನ್ನು ರಚಿಸಲು ಸಾಧ್ಯವಾಗಿರಬೇಕು. ಆತನು ಕೈಕೊಂಡಿದ್ದ ಮಹಾಯೋಜನೆ ಪೂರ್ತಿಯಾಗದೆ ಉಳಿಯಿತು.

ವಿಪುಲವಾಗಿರುವ ಹರಿಹರನ ರಗಳೆಗಳನ್ನು ಕುರಿತು ಬೇರೆ ಬೇರೆ ದೃಷ್ಟಿಕೋನಗಳಿಂದ ವ್ಯಾಸಂಗ ಕೈಕೊಳ್ಳುವುದು ಸಾಧ್ಯವಿದೆ. ಶಿವಶರಣರ ಜೀವನವನ್ನು ಕಾಣುವ ಹರಿಹರನ ದೃಷ್ಟಿ ಹಾಗೂ ಜೀವನದ ಬಗೆಗಿರುವ ಆತನ ದರ್ಶನ ಇವುಗಳ ವಿವೇಚನೆಯು ಮಾತ್ರ ಈ ಉಪನ್ಯಾಸಗಳ ವಿಷಯವಾಗಿದೆ.

ಹರಿಹರ ನಿರ್ಮಿತ ಪ್ರಪಂಚ

ಹುಟ್ಟು ಸಾವುಗಳಿಂದ ಕೂಡಿದ ಕಷ್ಟಮಯವಾದ ಈ ಭವಮಾಲೆಯಲ್ಲಿ ಜೀವಿಯು ತಿರುಗುತ್ತಿರುವುದುಂಟು. ಅನೇಕ ಜನ್ಮಗಳಲ್ಲಿ ತಿರುಗಿ ಮಾನವಜನ್ಮಕ್ಕೆ ಬರಬೇಕಾದರೆ ಅನಂತಕಾಲ ಬೇಕು. ಮಾನವಜನ್ಮ ಶ್ರೇಷ್ಠತಮವಾದುದು. ಈ ಜನ್ಮದಲ್ಲಿಯೇ ಏನೆಲ್ಲ ಪ್ರಯತ್ನಗಳನ್ನು ಮಾಡಿ ಈ ಭವಮಾಲೆಯನ್ನು ನೀಗಬೇಕು. ಆತ್ಮವನ್ನು ಅರಿಯಬೇಕು. ಅನುಭಾವವನ್ನು ಅಳವಡಿಸಿಕೊಳ್ಳಬೇಕು. ಇಹವನ್ನು ಕರ್ತಾರನ ಕಮ್ಮಟವನ್ನಾಗಿ ಮಾಡಿಕೊಳ್ಳಬೇಕು. ಅಂತರಂಗ, ಬಹಿರಂಗ ಶುದ್ಧಿಯನ್ನು ಪಡೆದು, ದ್ವಂದ್ವವನ್ನಳಿದು ಇಹದಲ್ಲಿಯೇ ನಿತ್ಯತೃಪ್ತಿಯನ್ನು ಪಡೆಯುವಂತಾಗಬೇಕು. ನಿತ್ಯಸುಖವನ್ನು ಪಡೆಯುವದು ಶಿವಾನುಭಾವದಿಂದ ಸಾಧ್ಯವಾಗುತ್ತದೆ. ಆತ್ಮದ ಉನ್ನತಿಯಾಗಬೇಕಾದರೆ ಅರಿವು ಆಚರಣೆಗಳಲ್ಲಿ ಹೊಂದಿಕೆಯಿರಬೇಕು. ' ನುಡಿದಂತೆ ನಡೆದರೆ ಇದೇ ಜನ್ಮ ಕಡೆ ' ಎಂಬುದು ಆತ್ಮೋನ್ನತಿಯ ಸೂತ್ರದಂತಿದೆ. ಇದಕ್ಕೂ ಒಂದು ಹೆಜ್ಜೆ ಮುಂದುವರಿದು ಶರಣರು ' ನಡೆದಂತೆ ನುಡಿದರು.' ಅಂತಹ ಆಚರಣೆಯು ನಮಗೆ ಜೀವನದ ತತ್ತ್ವಜ್ಞಾನದ ಮಾರ್ಗವನ್ನು ತೋರಿಸುತ್ತಿದೆ. ಆತ್ಮೋನ್ನತಿಯ ಬೆಳಕಾಗುತ್ತಿದೆ. ಹೀಗೆ ಅರಿದು ಆಚರಿಸಿ ಅನುಭಾವಿಗಳಾಗಿ ಹೋದ ಶಿವಶರಣರ ಚರಿತ್ರೆಗಳನ್ನು ರಗಳೆಯಲ್ಲಿ ಹರಿಹರ ಕವಿಯು ಬರೆದು ತನ್ನ ಆತ್ಮೋನ್ನತಿಯನ್ನೂ ಸಾಧಿಸಿಕೊಂಡಿದ್ದಾನೆ. ಇತರರ ಆತ್ಮೋನ್ನತಿಗೆ ಹಾದಿ ತೋರಿದ್ದಾನೆ. ಪ್ರಭುದೇವರ ರಗಳೆಯಲ್ಲಿ :

' ನಡೆದುದೇ ಬಟ್ಟೆಯಾದುದು ಶಿವನ ಮುದಕರಿಗೆ
ನುಡಿದುದೇ ವೇದವಾದುದು ಲಿಂಗವಂತಂಗೆ '

ಎಂದು ಹೇಳುವ ಮಾತಿನಲ್ಲಿ ಶರಣರ ಆತ್ಮೋನ್ನತಿಯ ಉನ್ನತ ಮಟ್ಟವನ್ನು ಮಾರ್ಮಿಕವಾಗಿ ಹರಿಹರನು ವರ್ಣಿಸಿದ್ದಾನೆ. ಆತನ ಆತ್ಮವು ಭಕ್ತಿರಸದಲ್ಲಿ ಮಿಂದು ' ತೂಗಾಡುತೊಲೆದಾಡುತಾಹಾ ವಿರೂಪಾಕ್ಷಾ ' ಎಂದು ನಲಿನಲಿದು ಕುಣಿಕುಣಿದು ದೇವನನ್ನು ನೆನೆಯುತ್ತಿದೆ. ' ಉರವಣಿಪ ಪರಮ ಭಕುತಿಯ ಸೊಕ್ಕು ತಲೆಗೇರಿ ' ' ತವೆಗದ್ಗದವುಮುಣ್ಮೆ ಪೊಣ್ಮೆ ಕರಗುತೆ ಸಿಂದು, ವೀ ವಿ–ರೂ–ರೂ–ಪಾ–ಕ್ಷ–ಕ್ಷ' ಎಂದು ನೆನೆಯುತ್ತಿದೆ. ಹೀಗೆ ದೇವನಿಗಾಗಿ ಆತ್ಮನ ಆತ್ಮ ಹಂಬಲಿಸುತ್ತಿದೆ; ಇನ್ನು ' ಹರನಿಂದಲಧಿಕರ್ ಶರಣರ್ ' ಎಂಬ ಮಾತು ಆತನು ಅವರನ್ನು ಬಗೆ ಬಗೆಯಾಗಿ ಹಾಡಿರುವ ಆತನ ಶಿವಗಣದ ರಗಳೆಗಳನ್ನವಲೋಕಿಸಿದಾಗ ಮನದಟ್ಟಾಗುತ್ತಿದೆ. ಆತನ ಕೃತಿಗಳನ್ನು ತುಂಬುಹೃದಯದಿಂದ ಓದಿದಾಗ ಹರಿಹರನು ಗಳಿಸಿಕೊಂಡ ಆತ್ಮೋನ್ನತಿಯನ್ನು ನಾವು ಸ್ಪಷ್ಟವಾಗಿ ಅರಿತುಕೊಳ್ಳುತ್ತೇವೆ. ಹರಿಹರನು ತನ್ನ

ಆತ್ಮೋನ್ನತಿಯನ್ನು ಸಾಧಿಸಿಕೊಳ್ಳುವದರ ಜೊತೆಗೆ ಅದನ್ನು ಸಾಧಿಸಿಕೊಂಡ ಶರಣರ ಕಥೆಗಳನ್ನು ರಗಳೆಯಲ್ಲಿ ಸರಸವಾಗಿ, ಸುಂದರವಾಗಿ, ಅರ್ಥವತ್ತಾಗಿ ಬಿತ್ತರಿಸಿದ್ದಾನೆ. ಭಕ್ತಿಯ ಆವೇಶದಲ್ಲಿ ಉಬ್ಬಿ ನವಿರೆದ್ದು ಕುಣಿಕುಣಿದು ಹರಿಹರನು ಶಿವಗಣದ ಚರಿತೆಯನ್ನು ಹೇಳುತ್ತಾನೆ. ಪ್ರಾರಂಭವಾದ ಕಥೆ ಮುಗಿಯುವವರೆಗೂ ತಡೆಯಿಲ್ಲದೆ ಓಡುತ್ತಿದೆ. ಒಂದರ ನಂತರ ಇನ್ನೊಂದು ಕಥೆ ಕೇಳುವವರಿಗೆ ಬೇಸರವಾಗದಂತೆ ಮುಂದುವರಿಯುತ್ತದೆ. ಜನಸಾಮಾನ್ಯರ ಹಂಬಲವನ್ನು ಪೂರೈಸಲೆಂದು, ಭಾವುಕರ ಭಕ್ತಿಯನ್ನು ಪ್ರಚೋದಿಸಲೆಂದು, ಕಾವ್ಯಪ್ರೇಮಿಗಳ ಹೃದಯವನ್ನು ಸೂರೆಗೊಳ್ಳಲೆಂದು, ಗಂಭೀರ ದರ್ಶನವನ್ನು ನಿರೀಕ್ಷಿಸುವವರಿಗೆ ಅರ್ಥಪೂರ್ಣವಾಗಲೆಂದು, ಹರಿಹರನು 'ನಚ್ಚಿನರುವತ್ತು ಮೂವರ' ಹಾಗು 'ಅಸಂಖ್ಯಾತ' ಶಿವಶರಣರನ್ನು ಕುರಿತು ರಗಳೆಗಳನ್ನು ರಚಿಸಿದ್ದಾನೆ. 'ಇಲ್ಲಿ ಜಗಕ್ಕೆ ಪೂಜಿತರುಂ ಅಲ್ಲಿ ಪರಕ್ಕೆ ವಿಶೇಷ ಪೂಜಿತರ್ ಇಂತು ಇಲ್ಲಿಯುಂ ಅಲ್ಲಿಯುಂ ಮೆರೆವ' ಶಿವಶರಣರ ಜೀವನ, ಹಾಗು ಸಿದ್ಧಿಗಳು ಈ ರಗಳೆಗಳಿಗೆ ವಸ್ತುವನ್ನು ಒದಗಿಸಿವೆ.

ರಗಳೆಗಳಲ್ಲಿ ಹರಿಹರನು ತನ್ನದೇ ಆದ ಒಂದು ಪ್ರಪಂಚವನ್ನೇ ನಿರ್ಮಿಸಿದ್ದಾನೆ. ಆ ಪ್ರಪಂಚದಲ್ಲಿ ವಿವಿಧ ವೃತ್ತಿಯನ್ನು ಅವಲಂಬಿಸಿದವರಿದ್ದಾರೆ. ಸ್ಥಾನಮಾನಗಳ ವ್ಯತ್ಯಾಸದಂತೆ ಅವರ ಮನೋಭಾವಗಳೂ ಭಿನ್ನವಾಗಿವೆ. ಅಭಿರುಚಿಗಳು ಬೇರೆ ಬೇರೆ ಇರುವದಂತೂ ಸರಿಯೇ ಸರಿ.

ಮಾನವಸ್ವಭಾವದ ವೈಲಕ್ಷಣ್ಯದ ವಿವಿಧ ಪರಿಗಳನ್ನು ನಾವು ಇಲ್ಲಿ ಕಾಣುತ್ತೇವೆ. ಐಹಿಕ-ಜೀವನದಲ್ಲಿ ತೊಡಗಿದ ಮಾನವರ ಬಗೆ ಬಗೆಯ ಚಿತ್ರಗಳನ್ನು ಜಗತ್ತಿನ ಮಹಾಕವಿಗಳು ತಮ್ಮ ಲೌಕಿಕ ಸಾಹಿತ್ಯಕೃತಿಗಳಲ್ಲಿ ಒದಗಿಸಿರುವುದುಂಟು. ಷೇಕ್ಸ್‌ಪಿಯರನ ನಾಟಕಗಳಲ್ಲಿಯ ಪ್ರಪಂಚವನ್ನು ನಾವು ಈ ಸಂದರ್ಭದಲ್ಲಿ ನೆನೆಯಬಹುದು. ಹರಿಹರನ ರಗಳೆಯಲ್ಲಿಯ ಪ್ರಪಂಚವನ್ನು ಚಾಸರ್ ಕವಿಯ 'ಕ್ಯಾಂಟರಬರಿ ಟೇಲ್ಸ್' ಎಂಬ ಕೃತಿಯಲ್ಲಿಯ ಪ್ರಪಂಚಕ್ಕೆ ಹೋಲಿಸಿ ವಿಮರ್ಶಿಸಿದುದುಂಟು. ಇದು ಲೌಕಿಕ ದೃಷ್ಟಿಯ ಹೋಲಿಕೆ ಮಾತ್ರ. ಪಾರಮಾರ್ಥಿಕ ದೃಷ್ಟಿಯಿಂದ ದೈವೀಕೃಪೆಯನ್ನು ಇಹ ಜೀವನದಲ್ಲಿ ಅಳವಡಿಸಿಕೊಳ್ಳುವಲ್ಲಿ ಪರಮಾತ್ಮನ ಸಾಕ್ಷಾತ್ಕಾರದ ಸಾಧನೆಯಲ್ಲಿ ತೊಡಗಿದ ಭಕ್ತರ ವಿಶಾಲ ಪ್ರಪಂಚವನ್ನು 'ಕಾವ್ಯಚ್ಛಲ'ದಿಂದ ನಿರ್ಮಿಸಿದವರಲ್ಲಿ ತಮಿಳಿನ ಶೆಕ್ಕಿಲಾರ ಕವಿಯೊಂದಿಗೆ ಹರಿಹರನನ್ನು ಹೋಲಿಸಬೇಕಾದೀತು. ಆ ಕವಿಯ ಪೆರಿಯ ಪುರಾಣವು ಹರಿಹರನ ಕೃತಿಗಳಿಗೆ ವಸ್ತುವನ್ನು ಒದಗಿಸಿರುವುದೂ ನಿಜ. ಆದರೆ ಜೀವನದ ದರ್ಶನವನ್ನು ಒದಗಿಸುವಲ್ಲಿ ಹರಿಹರನು ಸ್ವತಂತ್ರನಾಗಿಯೇ ಮುಂದುವರಿದಿದ್ದಾನೆ. ಶ್ರೇಷ್ಠ ಶಿವಾನುಭಾವಿ ಬಸವಣ್ಣನವರ ಹಾಗು ಇನ್ನಿತರ ಶಿವಶರಣರ ಪ್ರಭಾವದಿಂದ ಪ್ರೇರಿತನಾದ ಹರಿಹರನು ಉತ್ಕಟವಾದ ಅನುಭಾವದ ದೃಷ್ಟಿಯನ್ನಿಟ್ಟುಕೊಂಡು ವ್ಯಾಪಕವಾದ ಪ್ರಪಂಚವನ್ನು ನಿರ್ಮಿಸಿದ್ದಾನೆ.

ಹರಿಹರನು ನಿರ್ಮಿಸಿದ ವ್ಯಾಪಕವಾದ ಪ್ರಪಂಚವನ್ನೆಲ್ಲ ಈ ಉಪನ್ಯಾಸಗಳ ಪರಿಮಿತಿಯಲ್ಲಿ ಅಳವಡಿಸುವುದು ಸಾಧ್ಯವಲ್ಲ. ಆದುದರಿಂದ ಅದರಲ್ಲಿ ಕೆಲವೊಂದು ರಗಳೆಗಳನ್ನು ಆರಿಸಿಕೊಂಡು, ಅವುಗಳನ್ನು ಒಂದು ಕ್ರಮದಲ್ಲಿ ವಿಭಾಗಿಸಿ, ಆ ಆ ವಿಭಾಗಗಳಲ್ಲಿ ಕೆಲವು ರಗಳೆಗಳ ಪರಿಚಯವನ್ನು ನಾವು ಮಾಡಿಕೊಳ್ಳಬೇಕಾಗಿದೆ. ಅಂತಹ ಪರಿಚಯದಿಂದ ಹರಿಹರ ಕವಿಯ ಪ್ರತಿಭೆ, ವರ್ಣನೆಯ ಕೌಶಲ್ಯ, ಮಾತಿನ ಸೊಗಸು, ಭಕ್ತಿಯ ತನ್ಮಯತೆ ಇವುಗಳನ್ನೂ ನಾವು ಕಂಡುಕೊಳ್ಳುತ್ತೇವೆ. ಅಲ್ಲದೆ ಹರಿಹರ ಕವಿಯು ಜೀವನದ ಬಗೆಗೆ ಇಟ್ಟುಕೊಂಡ ದೃಷ್ಟಿ, ಆ ಮೂಲಕ ನಮಗೆ ದೊರೆಯುವ ದರ್ಶನ ಇವುಗಳನ್ನು ನಾವು ಅರಿತುಕೊಳ್ಳುತ್ತೇವೆ.

ಹರಿಹರನ ಶಿವಗಣಪ್ರಪಂಚವು ವ್ಯಾಪಕ ಹಾಗೂ ವೈವಿಧ್ಯಯುಕ್ತವಾಗಿದೆ. ಈ ಪ್ರಪಂಚದಲ್ಲಿ ಮಾನವೀಯ ಅಂತಸ್ತಿನ ಜೀವನದಲ್ಲಿಯೇ ದೈವೀ ಸಾಹಸಗಳನ್ನು ಕೈಕೊಂಡು ಸಫಲರಾದ ದೈವೀಮಾರ್ಗದ ಯೋಧರಿದ್ದಾರೆ. ಮುಗ್ಧಭಕ್ತಿಯಿಂದ ಅಸಾಮಾನ್ಯ ಕಾರ್ಯದಲ್ಲಿ ತೊಡಗಿ ಕೃತಕೃತ್ಯರಾದ ರುದ್ರಪಶುಪತಿ, ಕೋಳೂರು ಕೊಡಗೂಸು ಇವರ ಚಿತ್ರಗಳಿವೆ. ಉಗ್ರನಿಷ್ಠಾವಂತರಾಗಿ ಸುತ್ತಲಿನ ಮಾನವರನ್ನು ಬೆರಗುಗೊಳಿಸಿ ಶಿವನ ಮೆಚ್ಚುಗೆಯನ್ನು ಪಡೆದ ಓಹಿಲಯ್ಯ, ಕಾರಿಕಾಲಮ್ಮ, ತಿರುನೀಲಕಂಠರಂತಹರಿದ್ದಾರೆ. ವೇಶ್ಯಾ–ವಿಟಜೀವನದಲ್ಲಿ ಮೊದಲುಗೊಂಡ ಚಿತ್ತದಾತುರದ ಮಹೋನ್ನತೀಕರಣವನ್ನು ಸಾಧಿಸಿ ದೈವೀಕೃಪೆಗೆ ಪಾತ್ರರಾದ ಮಲುಹಣ, ನಂಬಿಯಣ್ಣರಿದ್ದಾರೆ. ಮಾನವಜೀವನದಲ್ಲಿ ಸಾವಿನ ಭೀತಿಯನ್ನು ಅಳಿಸಿದ ಓಹಿಲಯ್ಯ, ಮಳೆಯ ರಾಜರಂತಹರಿದ್ದಾರೆ. ದೈವೀಶಕ್ತಿಯ ಪ್ರದರ್ಶನದ ಸ್ಪರ್ಧೆಯಲ್ಲಿ ಸಜೀವವಾಗಿ ವಿಮಾನದಲ್ಲಿ ಕೈಲಾಸಕ್ಕೆ ಹೋದವರಿದ್ದಾರೆ. ತಮ್ಮೊಂದಿಗೆ ತಮ್ಮ ಕುಟುಂಬದ ಜನರನ್ನೋ, ಒಂದು ಪುರವನ್ನೋ, ಒಂಬತ್ತು ಪುರಗಳನ್ನೋ ಇಡಿಯ ದೇಶವನ್ನೋ ವಿಮಾನದಲ್ಲಿ ಕೈಲಾಸಕ್ಕೆ ಕರೆದುಕೊಂಡು ಹೋದ ಸಾಹಸಿಗಳಾದ ಉದ್ಭಟದೇವ, ಹಲಾಯುಧ, ಅಮರನೀತಿಯಂತಹರಿದ್ದಾರೆ. ಈ ಬಗೆಯ ಸ್ಪರ್ಧೆಯಂತೂ ಹೋಗಲಿ, ಭೂಲೋಕದ ಸುಖ ದೇವಲೋಕವಲ್ಲಿ ದೊರೆಯಲು ಸಾಧ್ಯವೇ? ಎಂದು ಶಿವನನ್ನೇ ಕೇಳುವ ಮಹಾನುಭಾವಿ ಬಸವಣ್ಣನ ಚಿತ್ರವು ಹರಿಹರನ ರಗಳೆಯಲ್ಲಿ ರೂಪುಗೊಂಡಿದೆ.

ಹರಿಹರನ ಶಿವಗಣಪ್ರಪಂಚವು ವೈವಿಧ್ಯಯುಕ್ತವಾಗಿರುವಂತೆ ಸ್ವಾರಸ್ಯಕರವೂ ಆಗಿದೆ. ಅಲ್ಲಿ ಪಚ್ಚಪಸಿಯ ಒಕ್ಕಲುಮಕ್ಕಳಿದ್ದಾರೆ. ವರಕವಿಗಳಾದ ಕಾಳಿದಾಸನಂತಹರ ಚಿತ್ರಗಳೂ ರೂಪುಗೊಂಡಿವೆ. ಕೂಸುಗಳು, ನಡುಹರೆಯದವರು, ಮುದುಕರು, ಗಂಡಸರು, ಹೆಣ್ಣುಮಕ್ಕಳು, ಸಂಸಾರಿಗಳು, ವಿರಕ್ತರು, ಮುಕ್ತರು ಇವರೆಲ್ಲರಿಗೂ ಸ್ಥಾನವಿದೆ. ಕವಿಗಳಂತೆ ಕೂಲಿಮಾಡುವವರೂ ಇದ್ದಾರೆ. ಕವಿಗಳು ಮಾತ್ಸರ್ಯದ ಸ್ವಭಾವ ತೋರಿದ್ದಾರೆ. ಕೂಲಿಮಾಡುತ್ತಿರುವ ವ್ಯಕ್ತಿಯು ಕಾಯಕದ ಪಾವಿತ್ರ್ಯ ಕಾಯ್ದುಕೊಳ್ಳುವಲ್ಲಿ ನಿಷ್ಠೆ ತೋರಿಸುವ ಚಿತ್ರಣ ಬರುತ್ತಿದೆ.

ಪೆರಿಯಪುರಾಣದಲ್ಲಿ ಶೇಕ್ಕಿಲಾರನು ಶಿವಭಕ್ತರ ಪ್ರಪಂಚವನ್ನು ನಿರ್ಮಿಸಿರುವುದು ನಿಜ. ಐತಿಹಾಸಿಕವೆನ್ನಬಹುದಾದ ವ್ಯಕ್ತಿಗಳ ಜೀವನಚಿತ್ರವನ್ನೂ, ಅವರ ಸಿದ್ಧಿಯನ್ನೂ ಆತನು ಬಣ್ಣಿಸಿದ್ದಾನೆ. ಅದರಲ್ಲಿ ನೈತಿಕ ಹಾಗೂ ಧಾರ್ಮಿಕ ಸಂಸ್ಕೃತಿಯು ಹೊರ ಹೊಮ್ಮಿದ ಬಗೆಯನ್ನು ಆತನು ವಿವರಿಸಿದ್ದಾನೆ; ವಿವಿಧ ರೀತಿಯ ಜನರನ್ನು ಕುರಿತು ಆತನು ಬರೆದಿದ್ದಾನೆ. ದೇವರಲ್ಲಿ ತಮ್ಮ ಕೇಂದ್ರಬಿಂದುವನ್ನು ಕಂಡುಕೊಂಡವರನ್ನು ಆತನು ಮನನುಂಬಿ ಹಾಡಿದ್ದಾನೆ. ಅತಿ ಕಠಿಣವೆನ್ನುವ ನೇಮವನ್ನು ಪಾಲಿಸಿದ, ತ್ಯಾಗ ವನ್ನು ಮಾಡಿದ ಭಕ್ತರ ಬಗೆಗೆ ನಮ್ಮ ಗೌರವವು ಹೆಚ್ಚುವುದೂ ಉಂಟು. ಆದರೆ ಹರಿಹರನ ಪ್ರಪಂಚ ಶೇಕ್ಕಿಲಾರನ ಪ್ರಪಂಚಕ್ಕಿಂತ ಹೆಚ್ಚು ವ್ಯಾಪಕವಾಗಿದೆ. ಆತನ ದೃಷ್ಟಿಯ ವ್ಯಾಪಕತೆಯೂ ಇದಕ್ಕೆ ಕಾರಣವಾಗಿದೆ. ಹಂಪೆಯ ಪ್ರತ್ಯೇಕವಾದ ಕಾಣಿಕೆಯೊಂದನ್ನು ನಾವು ರಗಳೆಗಳಲ್ಲಿ ಗುರುತಿಸುತ್ತೇವೆ. ಅಂದರೆ ಜೀವನದಲ್ಲಿ ಕೈಕೊಂಡ ವೃತ್ತಿಗಳನ್ನೇ ಆಧ್ಯಾತ್ಮಕ್ಕೆ ಅಳವಡಿಸಿಕೊಳ್ಳುವ ಕೌಶಲ್ಯ. ಈ ದೃಷ್ಟಿ ಶೇಕ್ಕಿಲಾರನ ಕೃತಿಯಲ್ಲಿಲ್ಲ. ಇದು ಹರಿಹರನ ಸ್ವತಂತ್ರಪ್ರತಿಭೆಯ ಗುರುತು. ಬಸವಣ್ಣ ನವರ ಕಾಯಕತತ್ತ್ವ ಹಾಗು ೧೨ನೆಯ ಶತಮಾನದ ಶಿವಶರಣರ ಜೀವನದೃಷ್ಟಿ ಇವುಗಳ ಮೂಲಕ ಹರಿಹರನಲ್ಲಿ ಈ ಬಗೆಯ ದೃಷ್ಟಿ ಮೂಡಿರುವುದು ಸಹಜವಾಗಿದೆ. ಈ ದೃಷ್ಟಿಯಿಂದ ಹರಿಹರನ ಶಿವಗಣ ಪ್ರಪಂಚವು ಸ್ವತಂತ್ರಸೃಷ್ಟಿಯೆಂದು ತಿಳಿಯ ಬೇಕಾಗುತ್ತದೆ. ಸಂಸಾರವು ಹೇಯವೆಂದು ತಿಳಿಯುವ ನಿಲುವುಯೊಂದೆಡೆಗೆ. ಆದರೆ ಆ ಸಂಸಾರದ ಹಾದಿಯನ್ನೇ ಅಧ್ಯಾತ್ಮಕ್ಕೆ ಅನುಕೂಲಿಸಿಕೊಳ್ಳುವ ನಿಲುವೆ ಹಿರಿ ದಾದುದೇ ಸರಿ. ಇಂತಹ ಹಿರಿಯ ನಿಲುವೆಯನ್ನು ತೋರುವ ಕೆಲವು ಶರಣರ ಜೀವನ ವನ್ನು ಹರಿಹರನು ಬಿತ್ತರಿಸಿದುದು ಸ್ವಾರಸ್ಯಕರವಾಗಿರುವಂತೆ ಅರ್ಥಪೂರ್ಣವೂ ಆಗಿದೆ. ಸಂಸಾರದ ಜಂಜಡದಲ್ಲಿ ದೇವರನ್ನು ಮರೆಯುವುದು ಮಾನವರಿಗೆ ಸಹಜವಾಗಿದೆ. ಆದರೆ ಹಾಗೆ ಮರೆಯದೆ, ಅರಿತು ತಮ್ಮ ತಮ್ಮ ಜೀವನವೃತ್ತಿಗಳನ್ನೇ ಪರಮಾತ್ಮನ ಸಾಕ್ಷಾತ್ಕಾರದ ಸಾಧನಗಳನ್ನಾಗಿ ಬಳಸಿಕೊಂಡ ಶಿವಭಕ್ತರ ಪ್ರಪಂಚವನ್ನು ಹರಿಹರನು ನಿರ್ಮಿಸಿದ್ದಾನೆ. ಈ ಜಗತ್ತು ಕರ್ತಾರನ ಕಮ್ಮಟ. ಇಲ್ಲಿ ಸಲ್ಲುವವರೇ ಅಲ್ಲಿಯೂ ಸಲ್ಲಬಲ್ಲರೆಂಬ ಸೂತ್ರವನ್ನು ಒಪ್ಪಿಕೊಂಡ ಹರಿಹರನು ತನ್ನ ಶಿವಗಣ ಪ್ರಪಂಚದಲ್ಲಿ ಆಕಳ ಕಾಯುವ ಆನಯನಾರ, ಒಕ್ಕಲುಮಗ ಇಳೆಯಾಂಡ ಗುಡಿಮಾರ, ಬೇಡರವ ನಾದ ಕಣ್ಣಪ್ಪ, ಭತ್ತಕೊಯ್ಯುವ ಅರಿವಾಳ್ತಾಂಡ, ಬಟ್ಟೆ ಹಸನುಮಾಡುವ ತಿರು ಕುರುಂಪೆತೊಂಡ, ಕುಂಬರ ಗುಂಡಯ್ಯ ಇವರನ್ನು ಚಿತ್ರಿಸಿದ್ದಾನೆ.

ಹರಿಹರನ ಶಿವಗಣ ಪ್ರಪಂಚದ ವಿಭಿನ್ನ ವ್ಯಕ್ತಿಗಳ, ಸ್ವಭಾವದ, ಸ್ಥಾನಮಾನದ, ವೃತ್ತಿಗಳ ನಿರೂಪಣೆಯಲ್ಲಿ ಅವರಿವರೆನ್ನದೆ ಎಲ್ಲರಿಗೂ ಸ್ಥಾನವಿದೆ, ಮನ್ನಣೆಯಿದೆ. ಅನೇಕ ವೈವಿಧ್ಯಗಳಿಂದ ಕೂಡಿದ ಭಿನ್ನ ಭಿನ್ನ ವ್ಯಕ್ತಿಗಳ ಸ್ವಾರಸ್ಯಕರವಾದ ಮೆರವಣಿ ಗೆಯು ಹರಿಹರನ ರಗಳೆಯಲ್ಲಿ ರೂಪುಗೊಂಡಿದೆ. ಇವರನ್ನೆಲ್ಲ ಬಂಧಿಸುವ ಏಕಸೂತ್ರ ವೆಂದರೆ, ಅವರೆಲ್ಲರೂ ಭಕ್ತರು, ನಿಷ್ಕಾಮಂತರು, ಪರಮಾತ್ಮನಲ್ಲಿ ಅಚಲನಿಷ್ಠೆಯುಳ್ಳ

ವರು, ಸಮರ್ಪಣಭಾವವುಳ್ಳವರು, ದೈವೀಕೃಪೆ ಪಡೆಯುವಲ್ಲಿ ಎಂಥ ಸಾಹಸಕ್ಕೂ, ಕಷ್ಟಸಹಿಷ್ಣುತೆಗೂ, ತ್ಯಾಗಕ್ಕೂ ಹಿಂಜರಿಯದವರು. ಕೊನೆಗೆ ದೇವೀಕೃಪೆಗೆ ಪಾತ್ರರಾಗುವರು.

ಹರಿಹರನ ಈ ಪ್ರಪಂಚದ ಕೆಲವೊಂದು ವ್ಯಕ್ತಿಗಳನ್ನಾರಿಸಿಕೊಂಡು ಅವರ ಜೀವನ, ಅವರ ಜೀವನದ ಮೂಲಕವಾಗಿ ಹರಿಹರನು ಬಿಂಬಿಸುವ ದರ್ಶನ, ಇವುಗಳನ್ನು ನಾವೀಗ ಅರಿತುಕೊಳ್ಳಬೇಕಾಗಿದೆ. ಈ ದೃಷ್ಟಿಯಿಂದ ಕೆಲವು ರಗಳೆಗಳನ್ನು ನಾನೀಗ ವಿವೇಚಿಸಬೇಕೆಂದಿದ್ದೇನೆ.

ಮುಗ್ಧರು

ರುದ್ರಪಶುಪತಿ :

ಚೋಳದೇಶದ ಶಿವಪುರದಲ್ಲಿ 'ರುದ್ರಪ್ರಭು' ಎಂಬ ಶಿವಭಕ್ತನಿದ್ದ. ಆತನ ಹೆಂಡತಿ ಶುಚಿ. ಅವಳ ಗರ್ಭದಲ್ಲಿ ಭವನ ಭಕ್ತಿಯುದಯಿಸುವಂತೆ, ಶಶಿಧರನ ಸಾಮರ್ಥ್ಯವುದಯಿಸುವಂತೆ ರುದ್ರಪಶುಪತಿಯು ಜನ್ಮ ತಾಳುತ್ತಾನೆ. ಹುಟ್ಟುತ್ತಲೇ ಜೋಯಿಸರು ಬಂದು 'ಇವನು ಭಕ್ತಿಯಂ ಒಲಿಸುವಂ, ನಿಷ್ಠೆಯಂ ಬಲಿಸುವಂ, ಧರೆಗೆ ಈಶನ ಭಕ್ತಿ ಬಟ್ಟೆಯಂ ಕಲಿಸುವಂ' ಎಂದು ಭವಿಷ್ಯ ಹೇಳುತ್ತಾರೆ.

ಆತ ಇಂದುಕಳೆಯಂತೆ ಬೆಳೆಯುತ್ತಾನೆ. ಬಾಲ್ಯವನ್ನು ದಾಟಿ ಹದಿನಾರರ ಹರೆಯವಲ್ಲಿ ಕಾಲಿಡುತ್ತಾನೆ. 'ಹರೆಯದೊಡನೆ ಹರಭಕ್ತಿ ದಳವೇರುತ್ತಿದೆ. ಹರಭಕ್ತಿಯೊಡನೆ ರೂಪು ದಳವೇರುತ್ತಿದೆ'. ಅಲ್ಲದೆ :

'ಮನವೆಂಬ ಭೂಮಿಯೊಳ್ ಭಕ್ತಿ ಬೀಜವನಿರಿಸಿ
ಅನುನಯದಿ ಪಂಚಾಕ್ಷರಿಯ ವೃಕ್ಷವವತರಿಸಿ
ಶಿವನ ನೆನಹೆಂಬ ಫಲವಂ ಪಡೆದು ಜೀವಿಪಂ
ಶಿವನ ಪರಮ ಸ್ನೇಹರಸಮುಮಂ ಸೇವಿಪಂ'

ರುದ್ರಪಶುಪತಿ ಮುಗ್ಧ. ಆದರೆ ಆತನ ಮನಸ್ಸು ಪವಿತ್ರ. ಭಕ್ತಿ ಅಚಲ. ದಿನದಿನವೂ ಶಿವಧ್ಯಾನದಲ್ಲಿ ತಲ್ಲೀನನಾಗಿರುತ್ತಿದ್ದ. ಈ ಮುಗ್ಧನು ಶಿವನ ಪರಮ ಸ್ನೇಹರಸವನ್ನು ಸೇವಿಸುತ್ತ ನಿತ್ಯಾನಂದದಲ್ಲಿದ್ದ ಶಿವಲಿಂಗವನ್ನು 'ಪುಟವೇಳ್ದ ಪುಳಕದಿಂ' 'ಉರವಣಿಪ ನಿಷ್ಠೆಯಿಂ' ಪೂಜಿಸುತ್ತಿದ್ದ. ಒಮ್ಮೆ ಶಿವಪುರಾಣ ಕೇಳಲು ನೆರೆದ ಸಭೆಯನ್ನು ಕಂಡು ತಾನೂ ಕೇಳತೊಡಗಿದ. ಆತನು :

'ಎಂದುಂ ಪುರಾಣಮಂ ಕೇಳ್ದುವರಿಯದ ಸಾಧು
ಎಂದುಂ ಕಥಾಗೋಷ್ಠಿಯೊಳಗೆ ಸಲ್ಲದ ಸಾಧು'

ಅಂದಿನ ಪುರಾಣದಲ್ಲಿ ಸಮುದ್ರಮಥನದಿಂದ ಹುಟ್ಟಿದ ಹಾಲಾಹಲವನ್ನು ವನ್ನು ಶಿವನು ಕುಡಿದನೆಂದೂ, ಅದು ಇನ್ನೂ ಶಿವನ ಕಂಠದಲ್ಲಿದೆಯೆಂದೂ ಹೇಳಿದ್ದನ್ನು

ಕೇಳಿ ಮುಗ್ಧನಾದ ರುದ್ರಪಶುಪತಿಯು ಚಕಿತನಾದ. ವಿಷವನ್ನು ಕುಡಿದ ಶಿವನು ಇನ್ನು ಉಳಿಯಲಾರನೆಂದು ಬಗೆದು ಪ್ರಲಾಪಿಸಹತ್ತಿದ:

‘ ಉರಿಯೇಕೆ ಹೂವೇಕೆ ವಿಷವೇಕಮೃತವೇಕೆ
ಹರನೇಕೆ ಗರಳವೇಕಾನಿತ್ತ ಬರಲೇಕೆ
ಅಳ್ದಂಗೆ ವಿಷಧರತ್ವಂ ಬಂದುದೆಂತಯ್ಯ
ಇನ್ನವರವೆಂತಪ್ಪುದೋ ’

ಎಂದು ಮರುಗಿದ. ‘ ಹರಿವಿರಂಚಿಗಳು ವಿಷವನ್ನು ಕುಡಿದ ಶಿವನನ್ನು ಉಳಿಸದೆ ಹೋದರಲ್ಲಾ ’ ಎಂದು ಚಿಂತಿಸಿದ. ಕಡೆಗೆ ತಾನೇ ಅವನನ್ನು ಉಳಿಸಬೇಕೆಂದು ನಿರ್ಧರಿಸಿದ. ಮೃಡನನ್ನು ಅವನಿತ್ತ ಪಂಚಾಕ್ಷರಿಯಿಂದ ಜಪಿಸಿ, ‘ ನೆಲನರಿಯೆ ಸುಖ ದಿಂದಲಿರಿಸುವೇಂ ಇರಿಸುವೇಂ ’ ಎಂದು ಪಣತೊಟ್ಟು ಸಮುದ್ರದ ದಡಕ್ಕೆ ಬಂದ. ಅಲ್ಲಿ ಆತನು ಕಂಠಪ್ರಮಾಣ ನೀರಿನಲ್ಲಿಳಿದು ಹೋಗಿ ಪಂಚಾಕ್ಷರಿ ಮಂತ್ರವನ್ನು ಪಠಿಸುತ್ತಾ ನಿಲ್ಲುತ್ತಾನೆ. ಅವನ ಮುಗ್ಧಮನಸ್ಸನ್ನು ಕವಿಯು ಹೃದಯಂಗಮವಾಗಿ ಹೀಗೆ ಚಿತ್ರಿಸಿದ್ದಾನೆ:

‘ ಜ್ವಲನಂ ಜ್ವರಂಗೊಂಡನೆಂದು ಮಂತ್ರಿಸುವಂತೆ
ಜಲಕೆ ಶೀತಂ ಬಂದುದೆಂದು ಭಾವಿಸುವಂತೆ
ಮಾರುತಂಗುರಿ ಪತ್ತಿತೆಂದು ಮಾಣಿಸುವಂತೆ........’

ಅಗ್ನಿಗೆ ಜ್ವರ ಬಂದುದೆಂದು, ನೀರಿಗೆ ಚಳಿ ಬಂದುದೆಂದು, ಗಾಳಿಗೆ ಉರಿ ಹತ್ತಿತೆಂದು ರುದ್ರ ಪಶುಪತಿಯಂತಹ ಮುಗ್ಧರು ಮಾತ್ರ ನಂಬಬಹುದು. ಇಂತಹ ಮುಗ್ಧನ ನಿಷ್ಠಾಭಕ್ತಿ ಅನುಪಮವಾದುದು. ‘ ಕಣ್ಮುಚ್ಚಿ ನೆರೆ ನಚ್ಚಿ ಮೆಚ್ಚಿ’ ಅತ್ತಿತ್ತ ಜಾರದೆ ‘ ಉಣ್ಮಮಾನಂದದಿಂ ನಿಂದು ’ ಧ್ಯಾನಮಾಡುತ್ತಿರುತ್ತಾನೆ. ಹೀಗೆ ಧ್ಯಾನಾ ಸಕ್ತನಾಗಿ ಕಂಠಪ್ರಮಾಣ ನೀರಿನಲ್ಲಿ ನಿಂತಿರಲು ಜಲಚರಂಗಳು ಮಜ್ಜಮಾಂಸಗಳನ್ನೆಲ್ಲ ಹರಿದು ತಿಂದುಬಿಡುತ್ತವೆ. ಎಲುವಿನ ಹಂದರ ಮಾತ್ರ ಉಳಿಯುತ್ತಿದೆ. ಈ ವರ್ಣನೆ ಯನ್ನು ಕವಿಯ ಮಾತುಗಳಲ್ಲಿಯೇ ಕೇಳೋಣ:

‘ ಅಸ್ತಿಯುಳಿದುದು ಪುಣ್ಯರೂಪು ತಾನೆಂಬಂತೆ
ಅಸ್ತಿಮಾಲಾಧರಂಗರ್ಪಿತವಿವೆಂಬಂತೆ
ಆಯು ತೀರ್ದೊಡೆ ನಿಷ್ಠೆ ತೀರಲೀಯದೆ ಪಿಡಿಯೆ
ಕಾಯವಳಿದೊಡೆ ಮನಂ ನೇಹವಾರದೆ ಪಿಡಿಯೆ ’

ಪಾಪವೆಲ್ಲ ನಾಶವಾಗಿ ಪುಣ್ಯ ಮಾತ್ರ ಉಳಿದಂತೆ ಅಸ್ತಿಗಳು ಕಂಡವು. ಆಯುಷ್ಯವೆಲ್ಲ ಕ್ಷಯವಾದರೂ ಆತನ ನಿಷ್ಠೆ ತೀರಲಿಲ್ಲವೇನೋ ಎನ್ನುವಂತೆ ಅಸ್ಥಿಪಂಜರ ಉಳಿಯಿತು. ರಕ್ತಮಾಂಸಗಳೆಲ್ಲ ಜಲಚರಗಳ ಪಾಲಾದರೆ ಎಲುವುಗಳೆಲ್ಲ ಶಿವನಿಗರ್ಪಿತವೆನ್ನುವಂತೆ ಆ ಎಲುವಿನ ಹಂದರವಿತ್ತಂತೆ. ಶರೀರವಳಿದರೂ ಶಿವನ ಪರಮಸ್ನೇಹವನ್ನು ಬಯಸಿ

ಮನ ಅಗಲಲಾರದಾಗಿತ್ತಂತೆ. ಎಂತಹ ಸುಂದರವಾದ ಕಲ್ಪನೆ! ಅದೆಷ್ಟು ಅದ್ಭುತವಾದ ನಿಷ್ಠಾಭಕ್ತಿ!

ಕಷ್ಟನಿಷ್ಠುರಗಳೆನ್ನದೆ ಧ್ಯಾನಾಸಕ್ತನಾದ ಮುಗ್ಧ ರುದ್ರಪಶುಪತಿಯನ್ನು ಶಿವನು ಇನ್ನೂ ಪರೀಕ್ಷಿಸಬೇಕೆನ್ನುತ್ತಾನೆ. ಪಾರ್ವತಿಯೊಂದಿಗೆ ಭಕ್ತನೆಡೆಗೆ ಬರುತ್ತಾನೆ. ಗಿರಿಜೆಯನ್ನು ಕಾಣದಂತಿರಿಸಿ ತಾನೊಂದು ವೇಷವನ್ನು ಧರಿಸಿ ಬಂದು 'ಭಕ್ತ, ನೀನೇಕೆ ನಡುನೀರೊಳಿರ್ದಪೆ, ಜಲಧಿಯೊಳ್ ಮಾಳ್ಪ ತಪವಾವುದು' ಎಂದು ಕೇಳುತ್ತಾನೆ. ಆಗ ರುದ್ರಪಶುಪತಿಯು 'ಶಂಕರನ ಕೊರಲ ಗರಳಮಂ ಇಂದು ಪರಿಹರಿಸಿದಲ್ಲದೆ ಚಲಿಸೆಂ' ಎಂದು ಉತ್ತರಿಸುತ್ತಾನೆ. ಕಪಟ ವೇಷದ ಶಿವನು 'ಹರಂ ಧರಿಸಿರ್ಪ ಕೈಯ್ಯ ತಲೆಯಂ ಬಿಡಿಸು, ತೊಟ್ಟ ಹಾವಂ ಬಿಡಿಸು. ಸುರರ ಸಿರಮಂ, ಗಜಚರ್ಮಮಂ ಬಿಡಿಸು....ನೀನೇಕೆ ವಿಷವೇಕೆ? ಬಿಡಿಸುವಾಯಸವೇಕೆ?' ಎಂದು ಕಟಕಿಮಾತುಗಳನ್ನಾಡುತ್ತಾನೆ. ಶಿವನಿಂದೆಯನ್ನು ಕೇಳಿದ ರುದ್ರಪಶುಪತಿಗೆ ಕೋಪಬಂದು ಶಿವನನ್ನು ನೆನೆದು ಜಲವನಭಿಮಂತ್ರಿಸುತ್ತ 'ಎಲೆಲೆ ಶಿವನಿಂದಕನೆ ಅಡಗಡಗೆಂ'ದು ಚಿಮುಕಿಸುತ್ತಾನೆ. 'ಕೈಸಾರ್ದ ತಪವನೀಶ್ವರನಲ್ಲಿ ಬಿಡುವಂತೆ ಪೈಸಾರ್ದ ನಿಷ್ಠೆಯಂ ರುದ್ರಂಗೆ ಕೊಡುವಂತೆ' ಇತ್ತು ಈ ದೃಶ್ಯ.

ಭಕ್ತನ ಅಚಲನಿಷ್ಠೆಗೆ, ಅಚ್ಚಭಕ್ತಿಗೆ ಮೆಚ್ಚಿ ಶಿವನು ತನ್ನ ನಿಜರೂಪವನ್ನು ತೋರಿಸುತ್ತಾನೆ.

'ಆವನಾದೊಡೆ ಏನು ಕೃತ್ಯವುಂ ಗೆಲ್ವುದೇ
ದೇವನಾದೊಡೆ ಏನು ಸಟೆ ದಿಟಕೆ ನಿಲ್ವುದೇ'

ಎಂದು ಹರಿಹರ ಕೇಳುತ್ತಾನೆ. ಇಂತಹವೇ ಮಾತು ಗಿರಿಜಾಕಲ್ಯಾಣದಲ್ಲಿಯೂ ಬಂದಿವೆ. ಶಿವನನ್ನು ಕಂಡ ರುದ್ರಪಶುಪತಿಗೆ ಅಮಿತಾನಂದವಾಗುತ್ತದೆ. ಕೂಡಲೇ ಆವನ ಕೊರಳಲ್ಲಿ ವಿಷವಿರುವದೇ? ಎಂದು ತಾಯಿಯು ಮಗುವನ್ನು ವಿಚಾರಿಸಿಕೊಳ್ಳುವಂತೆ ಮೃಡನನ್ನು ಕೇಳುತ್ತಾನೆ. ಕೊರಳಲ್ಲಿ ವಿಷವು ಇಲ್ಲದ್ದನ್ನು ಕಂಡು ಹರ್ಷಿತನಾಗುತ್ತಾನೆ. ಶಂಕರನು ಕುತ್ತದಿಂದ ಉಳಿದನಲ್ಲಾ ಎಂದು ಸಮಾಧಾನ ಪಡುತ್ತಾನೆ.

ಮುಗ್ಧನಾದರೇನಾಯಿತು? ಭಗವಂತನು ಒಲಿಯುವದು ಶುದ್ಧ ಹೃದಯಕ್ಕೆ, ದೃಢಭಕ್ತಿಗೆ. ಮನುಷ್ಯನ ಆಯುಷ್ಯ ತೀರಬಹುದು. ಆದರೆ ಆತನ ನಿಷ್ಠೆ ತೀರಬಾರದು. ಕಾಯವಳಿಯಬಹುದು, ನೇಹವಾರಬಾರದು. ಮಾನವ ಜೀವನವನ್ನು ಕುರಿತು ಹರಿಹರನು ಇಟ್ಟುಕೊಂಡ ದರ್ಶನವಿದು.

ಕೋಳೂರ ಕೊಡಗೂಸು:

ಕೋಳೂರಿನ ಶಿವಭಕ್ತಳ ಮಗಳು ಕೊಡಗೂಸು.

ಕೊಡಗೂಸಿನ ತಾಯಿ ತನ್ನೂರಿನ ಕಲ್ಲಿನಾಥನಿಗೆ ಹಾಲಿನ ಅಭಿಷೇಕಮಾಡುವ ನೇಮವನ್ನಿಟ್ಟುಕೊಂಡಿದ್ದಳು. ಒಮ್ಮೆ ಕೊಡಗೂಸು ತಾಯಿಯನ್ನು ಕುರಿತು:

‘ ಗಡಿಗೆವಾಲಂ ಕೊಂಡು ಪೋದಿರೆಲ್ಲಿಗೆ ತಾಯೆ
ಆರ್ಗೆರೆದು ಬಂದೆನೊರೆವಾಲನೆನಗರುಪವ್ವ
ಆರ್ಗೆ ಸವಿವಾಲನೆರೆದೆ ಎನಗೆ ಹೇಳವ್ವ’

ಎಂದು ಪ್ರಶ್ನಿಸಿದಳು. ‘ ಶಂಕರಗೆ ಹಾಲನೊಯ್ದು ಎರೆದು ಬಂದೆ ’ ಎಂಬುದು ತಾಯಿಯ ಉತ್ತರ. ಮಗಳು ‘ ಶಂಕರನೆಂದರೆ ಯಾರು ? ಅವನು ಹೇಗಿದ್ದಾನೆ.... ? ’ ಎಂದು ಕೇಳಿದಳು. ‘ ಐದು ಮುಖ ಹತ್ತು ಕೈಗಳುಳ್ಳ ಸರ್ವಜ್ಞನವನು. ಗಜಚರ್ಮವನ್ನು ಹೊದ್ದುಕೊಂಡಿದ್ದಾನೆ. ಪುಲಿದೊಗಲನುಟ್ಟುಕೊಂಡಿದ್ದಾನೆ. ಡಮರು ತ್ರಿಶೂಲಗಳನ್ನು ಹಿಡಿದಿದ್ದಾನೆ. ಬ್ರಹ್ಮಾಂಡವನ್ನು ಹೆತ್ತ ತಂದೆಯಾತ ’ ಎಂದು ತಾಯಿಯು ಶಿವನ ರೂಪವನ್ನು ವರ್ಣಿಸುತ್ತಾಳೆ.

ಇದನ್ನು ಕೇಳಿದ ಕೊಡಗೂಸಿನ ಮನದೊಳಗೆ ಮೃಡನ ನೆನಹು ಪಡಿಮೂಡುತ್ತಿದೆ.

‘ ಆನೊಮ್ಮೆ ಹಾಲನೆರೆವುದನೆಂದು ಕಾಣ್ಬೆನೋ
ಆನೊಮ್ಮೆ ಶಿವನ ಚರಣವನೆಂದು ಕಾಣ್ಬೆನೋ ’

ಎಂದು ಹಾರೈಸುತ್ತಾಳೆ. ಆಟ–ಪಾಠದಲ್ಲಿ ಶಿವನ ಧ್ಯಾನವೇ ಧ್ಯಾನ ಅವಳಿಗೆ. ಶಿವನಲ್ಲಿ ಮನವನ್ನು ತಲ್ಲೀನಗೊಳಿಸಿದ ಕೊಡಗೂಸು ಹತ್ತು ವರುಷದವಳಾಗಿ ಬೆಳೆಯುತ್ತಾಳೆ. ಒಮ್ಮೆ ತಾಯಿಯು,

‘ ಮಗಳೆ, ಎನ್ನವ್ವ ನಲವಿಂ ಕಲ್ಲಿನಾಥಂಗೆ....
ಹಾಲನೆರೆ ಹೋಗವ್ವ ಸದ್ಗುಣ ನಿ ಕಾಯಂಗೆ ’

ಎಂದು ಹೇಳುತ್ತಾಳೆ. ‘ ದೇವರಿಗೆ ಹಾಲನೆರೆಯುವ ಭಾಗ್ಯ ನನ್ನದಾಯಿತಲ್ಲಾ ’ ಎಂದು ಆಕೆ ಹರುಷಪಡುತ್ತಾಳೆ. ಸ್ನಾನಮಾಡಿ ‘ ಬಯ್ತಲೆಯನಳವಡಿಸಿ ಹೊಸ ಹೂವಿನೋಲೆಯಿಂ ತಿರುಹಿ ’ ಮಡಿ ಬಟ್ಟೆ ತೊಟ್ಟು ಹಾಲು ಗಡಿಗೆಯ ಮೇಲೆ ಬಟ್ಟಲವನ್ನು ಮುಚ್ಚಿಕೊಂಡು ‘ ಕೈಲಾಸಪುರಕಿದೇ ಪ್ರಸ್ಥಾನವೆಂಬಂತೆ ’ ಶಿವಾಲಯಕ್ಕೆ ಹೊರಡುತ್ತಾಳೆ ಕೊಡಗೂಸು.

ಅಲ್ಲಿ ಶಿವಲಿಂಗದ ಮುಂದೆ ನಿಂತು :

‘ ಎನ್ನ ರನ್ನವೆ ಎನ್ನ ಹೊನ್ನೆ ಹಾಲ್ಗುಡಿಯಯ್ಯ
ಎನ್ನ ಪರಿಸವೆ ಎನ್ನ ಚೆನ್ನೆ ಹಾಲ್ಗುಡಿಯಯ್ಯ
ಎಮ್ಮವ್ವೆ ಕಳುಹಿದಳದೇಕುಸಿರದಿರ್ದಪೆ
ಎಮ್ಮಯ್ಯ ದಮ್ಮಯ್ಯ ಸುಮ್ಮನೇಕಿರ್ದಪ್ಪೆ
ನೊರೆಯಾರಿ ಬಿಸಿಗುಂದಿ ಸವಿಗೆಡುವುದೆಲೆದೇವ
ನೊರೆವೆರಸಿ ಸವಿವಾಲನಾರೋಗಿಸೆಲೆದೇವ ! ’

ಎಂದು ನಾನಾಬಗೆಯಾಗಿ ಬೇಡಿಕೊಳ್ಳುತ್ತಾಳೆ. ಹಾಲಿನ ರುಚಿಗಿಂತಲೂ ಆ ಮುಗ್ಧ ಬಾಲೆಯ ನುಡಿಯು ಸವಿ ಪಿರಿದೆಂದು ಶಂಕರ ಸುಮ್ಮನಿರುತ್ತಾನೆ. ಕೊಡಗೂಸಿಗೆ ಶಿವನ ಮೌನ ದುಃಖವನ್ನುಂಟುಮಾಡುತ್ತಿದೆ. ನೊಂದು ಕಂದಿ ಕುಂದುತ್ತಾಳೆ. ದುಃಖವು ಕಂಠವನ್ನು ಬಿಗಿದು ಬರುತ್ತದೆ. ಬಿಕ್ಕುತ್ತಲೇ,

‘ ಹಾಲ್ಗುಡಿಯದಿರ್ದೊಡೆಮ್ಮವ್ವೆ ಬಡಿದಪಳಯ್ಯ
ಹಾಲ್ಗುಡಿಯದಿರೆ ಮನೆಗೆ ಹೋಗಲಂಜುವೆನಯ್ಯ
ಹಾಲನೆರೆಯದೆ ತಾಯನೆಂತು ನೋಡುವೆನಯ್ಯ
ಹಾಲನೆಂತಾದೊಡಂ ಕುಡಿಯಯ್ಯ ಕುಡಿಯಯ್ಯ ’
‘ ಎಂದತ್ತು ನಿಂದತ್ತು ನೆನೆದತ್ತು ಮುನಿದತ್ತು
ಸಂದಣಿಪ ನೇಹದಿಂದತತ್ತು ಮತ್ತತ್ತು ’

ಅಳುತಿರ್ಪ ಮುಗ್ಧೆಯನ್ನು ಕಂಡು ಈಶ್ವರನು ಮರುಗಿ ಕರುಣೆಪಟ್ಟು ‘ ಭಕ್ತಿವೆರಸಿದ ಸುಧೆಯಲ್ಲಿ ಸವಿನೋಳ್ಪಂತೆ ’ ಕೂಸಿನ ಕೈಯ ಬಟ್ಟಲವನ್ನು ತೆಗೆದುಕೊಂಡು ಹಾಲು ಕುಡಿಯುತ್ತಾನೆ. ಅವಳ ಮುಗ್ಧಭಕ್ತಿಗೆ ಮೆಚ್ಚಿದ ಶಿವನು ಅವಳಿಗೆ ಮುಕ್ತಿಯನ್ನು ದಯಪಾಲಿಸುತ್ತಾನೆ.

ಸಣ್ಣ ಮಕ್ಕಳ ಸರಳ ಹೃದಯದಲ್ಲಿ ದೇವಭಾವವು ಅಳವಟ್ಟುದನ್ನು ಈ ರಗಳೆಯಲ್ಲಿ ಚಿತ್ರಿಸಲಾಗಿದೆ. ಹಿರಿಯರ ಹಾಲನೇಮ, ನೀರನೇಮ ಕೇವಲ ತೋರಿಕೆಯಾಗಬಲ್ಲದು. ಹಸುಳೆಯ ಶುದ್ಧಹೃದಯದ ನೇಮ ದೇವನನ್ನೊಲಿಸಬಹುದು. ಬಾಹ್ಯವೃತ್ತಿ ನೇಮಗಳೇ ಧರ್ಮವಲ್ಲ. ನಿರ್ಮಲವಾದ ಅಂತಃಕರಣವೇ ದೇವನನ್ನು ಒಲಿಸುವ ಪರಿಯೆಂಬುದು ಹರಿಹರನ ದೃಷ್ಟಿಯಾಗಿದೆ ಈ ರಗಳೆಯಲ್ಲಿ.

ಉಗ್ರನಿಷ್ಠಾವಂತರು

ಓಹಿಲಯ್ಯ :

ಉತ್ತರ ದಿಶಾಭಾಗದಲ್ಲಿ ನಿಃಕುಂಭ ರಾಜನ ಮಗ ಓಹಿಲಯ್ಯನು ‘ ವಿರಕ್ತಿ ಬೆಳೆವಂದದಿಂ ’ ಬೆಳೆಯುತ್ತಾನೆ. ಹುಟ್ಟುತ್ತಲೇ ಹರಭಕ್ತಿ ಆತನಲ್ಲಿ ಅಳವಟ್ಟಿರುತ್ತದೆ. ‘ ಎಡಬಲಂ ಹಿಂದು ಮುಂದಾವುದೇನೆಂದರಿಯ ’, ಸುಖದುಃಖಗಳಂತೂ ಆತನಿಗೆ ಮೊದಲೇ ಗೊತ್ತಿಲ್ಲ. ಬೇಕು ಬೇಡೆಂಬ ಇಚ್ಛೆಗಳಿಲ್ಲ. ವೈರಾಗ್ಯನಿಧಿ ; ನಾಗಭೂಷಣನ ಪರಮಜ್ಞಾನಿ.

ಓಹಿಲಯ್ಯನು ಹದಿನಾರು ವರುಷದವನಾದಾಗ ನಿಃಕುಂಭ ರಾಜನು ಶಿವೈಕ್ಯನಾಗುತ್ತಾನೆ. ಪರಿಜನರು, ಮಂತ್ರಿಗಳು, ತಂತ್ರಿಗಳು, ಇಷ್ಟರು, ಬಂಧುಗಳು, ಶಿಷ್ಟರು, ಸೇವ್ಯರು ನಾನಾಬಗೆಯಾಗಿ ದುಃಖಿಸುತ್ತ ಬಂದು ಓಹಿಲಯ್ಯನಿಗೆ ‘ ನಿನ್ನ ಪಿತಂ ಸತ್ತಂ, ಎಲೆ ಕುಮಾರ ’ ಎಂದು ಹೇಳುತ್ತಾರೆ. ಸತ್ತಂ ಎಂಬಂತೆ ಪರಿ ಏನೆಂದು ಬೆಸಗೊಳ್ಳು

ತ್ತಾನೆ ಓಹಿಲಯ್ಯ. ಅಂತ್ಯಕ್ರಿಯೆಯ ಎಲ್ಲಾ ಕಾರ್ಯಗಳೂ ಓಹಿಲಯ್ಯನಿಗೆ ವಿಚಿತ್ರವಾಗಿ ಕಾಣುತ್ತವೆ. 'ಎಂದು ಬರ್ಪಂ ಪಿತಂ' ಎಂದು ಅಲ್ಲಿ ನೆರೆದವರನ್ನು ಕೇಳುತ್ತಾನೆ. 'ಮನದೊಳೆರಡಿಲ್ಲದ ಅತ್ಯಂತ ಮುಗ್ಧನೆ ಕೇಳ ನಿಮ್ಮಯ್ಯ ಎಂದುಮಂ ಬಾರನೈ. ಸತ್ತಂ ಉರಿದಂ ಭಸ್ಮವಾದಂ ಎಂದುಂ ಇನ್ನುಂ ಬಾರ' ಎಂದು ಹಿರಿಯರು ಹೇಳುತ್ತಾರೆ. ಓಹಿಲಯ್ಯನ ಮನೋಗತವನ್ನರಿತ ಒಬ್ಬನು 'ಈ ಸಾವುದಂ ಮಾಣಿಸಲ್ಕೆ ಶಿವನೊಬ್ಬನಿಗೆ ಸಾಧ್ಯ. ಇಲ್ಲಿಗೆ ಇಪ್ಪತ್ತು ಯೋಜನಾಂತರದಲ್ಲಿದ್ದ ಸೌರಾಷ್ಟ್ರ ಸೋಮನಾಥನನ್ನು ಮೊರೆಹೊಕ್ಕರೆ ಆತನು ರಕ್ಷಿಸುವನು. ಆತನನ್ನು ಮೊರೆಹೋಗು' ಎಂದು ಉಪದೇಶಿಸುತ್ತಾನೆ. ರಾಜಕುಮಾರನಾದ ಓಹಿಲಯ್ಯನು, 'ರಾಜ್ಯಮಂಹಾರಲೊದೆದು' ಮಾಯವಿಮರ್ದನನಾಗಿ, ವೈರಾಗ್ಯಸಿಧಿಯಾಗಿ ಸೋಮನಾಥನಲ್ಲಿಗೆ ಬರುತ್ತಾನೆ:

'ಸಾವಿಂಗೆ ಭೀತಿಗೊಂಡ್ಶೈತಂದೆನೆಲೆ ತಂದೆ
ಸಾವರಂ ಕಂಡಂಜಿ ಬಂದೆನಾನೆಲೆ ತಂದೆ
ನಂಬಿ ನಿನ್ನಂಘ್ರಿಯಂ ಮರೆಹೊಕ್ಕೆನೆಲೆತಂದೆ
ಸಾಯಲೀಯದೆ ಸಲಹು ಸಾಯಲಾರೆಂ'

ಎಂದು ನೊಂದು ಸೋಮನಾಥನನ್ನು ಬಿನ್ನವಿಸುತ್ತಾನೆ. ಸಾವು ಮಾನವರಿಗೆ ಒಂದು ಒಡೆಯಲಾರದ ಒಗಟು. ಮಾನವರಿಗೆ ಜೀವನದಲ್ಲಿ ಸಾವು ಭೀಕರತೆಯನ್ನು ತಂದೊಡ್ಡುತ್ತದೆ. ಸಾವಿನ ಭೀತಿ ತಪ್ಪಬೇಕಾದರೆ ಮಾನವನು ಪರಮಭಕ್ತನಾಗಬೇಕು. ಪರಮಾತ್ಮನನ್ನು ಮೊರೆಹೋಗಬೇಕೆಂದು ತಿಳಿದುಕೊಂಡು ಸಾವಿನ ಭೀತಿಯಿಂದ ವಿರಕ್ತಿ ಬೆಳೆದು ಭಕ್ತಿ ಬೀಗಿ ಓಹಿಲಯ್ಯನು ಶಿವನನ್ನು ಸಾಕ್ಷಾತ್ಕರಿಸಿಕೊಂಡು ಅಮರನಾಗುತ್ತಾನೆ. ಅಮರತ್ವಕ್ಕೆ ಅರ್ಹನಾಗಬೇಕಾದರೆ ಅಸಾಮಾನ್ಯವಾದ ಉಗ್ರನಿಷ್ಠೆ ಬೇಕು; ಛಲ ಬೇಕು; ಅಚಲ ಭಕ್ತಿಬೇಕು.

ಸಾವಿಗಂಜಿದ ಓಹಿಲಯ್ಯನು ಶಿವಲಿಂಗವನ್ನಪ್ಪಿಕೊಂಡು ಅತ್ತತ್ತು ಬಿಕ್ಕಿ ಬಿಕ್ಕಿ, ಲಲ್ಲೆಗರೆದು 'ಅಭವಾ ಶಂಕರಾ ಶಿವನೆ ಭವನೆ ಗುರುವೆ, ತಾಯೆ ತಂದೆಯೆ ತವರೆ ಪುಣ್ಯವೆ ಗತಿಯೆ ಮತಿಯೆ ಪತಿಯೆ ಕಣ್ಣೆ' ಎಂದು ಮೊರೆಯಿಡುತ್ತಾನೆ; ಸೋಮನಾಥನನ್ನು 'ತೆಗೆದಪ್ಪಿ ಬಿಗಿದಪ್ಪಿಯುಮರ್ದಪ್ಪಿ ಸೋಂಕಿನೊಳಪ್ಪಿ ಮೆಯ್ಯೊಳಪ್ಪಿ ಕಣ್ಣೊಳಪ್ಪಿ ಮನದೊಳಪ್ಪಿ ಚಿತ್ತದೊಳಪ್ಪಿ ತಣಿವಿಡಿದು ಸುಖಂಬಡೆದು ಕಂಡು ಕಂಡು ಶಿವಮರುಳ್ಗೊಂಡು ಆಲಿಂಗನಮಂ ಸಡಿಲ್ಚಿ ಪ್ರಟವೆಳ್ದು ಹೊಮ್ಮಿ ಪೊರಳ್ದು ಜುಮ್ಮನೆ ಬೆಮರ್ತು ಕೊರ್ಬಿ ಕೊನರ್ತು ಉರ್ಬಿಯುರುಳ್ಬ್ಬರಿಸುತಿರ್ಪ' ಓಹಿಲಯ್ಯನಿಗೆ ಸೋಮನಾಥನು 'ಎಲೆ ಕಂದ ನಿನ್ನ ಮನವಾರೆ ಪನ್ನೆರಡು ಬರಿಸಂ ಪೊರೆಯೇರಿ ಗುಗ್ಗುಳಮಂ ತಂದೆಮಗಿಕ್ಕೆ ಸಗ್ಗದವರುಂ ಬೆರಗಾಗೆ ಶರೀರಂ ಬೆರಸು ಕೊಂಡೊಯ್ವೆಂ' ಎಂದು ಗುಗ್ಗುಳ ಸಲಿಸುವ ವ್ರತವನ್ನೆಸಗಲು ಅಪ್ಪಣೆ ವಿಧಿಸುತ್ತಾನೆ. ಅದಕ್ಕೆ ಓಹಿಲ

ಯ್ಯನು ಹಿಗ್ಗಿ ವ್ರತವನ್ನಾಚರಿಸಲು ಪ್ರಾರಂಭಿಸುತ್ತಾನೆ. ಆತನು ತಂದಿಕ್ಕುವ ಧೂಪದ ಸೊಗಸಿನ ಸವಿಯು ಸಾಲಿಡೆ 'ಧೂಪದೋಹಿಲ'ನೆಂದು ಹೆಸರಾಗುತ್ತಾನೆ.

ಹೀಗೆ ಧೂಪದೋಹಿಲನಾಗಿ ಹನ್ನೆರಡು ವರುಷಗಳವರೆಗೆ ಶಿವನಿಗೆ ಗುಗ್ಗುಳ ವನ್ನು ಸಲ್ಲಿಸುತ್ತಾನೆ. ಆಗ ಶಿವನು,

'ಎಲೆ ಮಗನೆ ನಿನಗಿನ್ನೆಮ್ಮ ಚಿಂತೆಯೇಕೆ? ನಿನ್ನ ಮುನ್ನಿನ ರಾಜ್ಯದ ನೂರ್ಮಡಿ ಸಂಪದವಾಯ್ತು. ಸುಖಿಯಾದೆ, ಸುಕುಮಾರನಾದೆ, ಅರಸಾದೆ ಸಂತಸದೊಳಿರು' ಎಂದು ಹೇಳುತ್ತಾನೆ. ಅದನ್ನು ಕೇಳಿ ಓಹಿಲಯ್ಯನು 'ದೆಸೆಗೆಟ್ಟು ಕಂಗೆಟ್ಟು ಬಾಯ್ಬಿಟ್ಟು' ಶಿವನಲ್ಲಿ ತನ್ನ ಮೊದಲಿನ ಮಾತನ್ನೇ ನಡೆಯಿಸಿಕೊಡಬೇಕೆಂದು ಕಣ್ಣೀರ್ ತುಂಬಿ ಕೇಳಿಕೊಳ್ಳುತ್ತಾನೆ. ಆಗ ಶಿವನು,

'ಕಟ್ಟಿದ ಕೆರೆ ಇಟ್ಟರವೆ, ಬಿತ್ತಿದ ಬೆಳೆ ಮಾಡಿದ ಮನೆ ಪರರ ವಸ್ತು; ನೀರಂ ಕುಡಿಯದೆ ನೆಳಲಂ ಸೇರದೆ ಪಲಮನುಣ್ಣದೆ ಮರೆದು ಪಟ್ಟಿರದೆ ಪರಿವ ತೊರೆಯ ನೀರ್ಗುಡಿಯುತುಂ ಕಾಡ ಮರಂಗಳ ನೆಳಲೊಳ್ನಿಂದು ಫಲಂಗೊಳ್ಳುತುಂ ಹೊಡೆಹುಲ್ಲ ಬತ್ತಮನುಣುತುಂ ಮೆಳೆಗುಹೆಗಳ ತಳದೊಳ್ಪಟ್ಟಿರುತುಂ ಪೋಗಿ ಎಲ್ಲರ್ಗೆ ಸಮಮಪ್ಪ ವಸುಧಾತಳಗಳ ಪೊನ್ನಂಕೊಂಡು ದ್ವೀಪಕ್ಕೆ ನಡೆದುಂ ಧೂಪಕ್ಕೆ ಕೊಟ್ಟು ನಾನಾ ವಿಧದಿಂ ಹೊತ್ತು ಹೊತ್ತೀ ತೆರದಿಂದಿನ್ನೊಮ್ಮೆ ಪನ್ನೆರಡು ವತ್ಸರಂ ಹಿಗ್ಗಿ ಹೊರೆಯೇರಿ ಗುಗ್ಗುಳಮನೆಮಗಿಕ್ಕಿ ಬಳಿಕ್ಕೆ ನಿನ್ನ ಮನೋರಥಮಂ ಮಾಳ್ಪೆಂ' ಎಂದು ಹೇಳುತ್ತಾನೆ. ಇಂತಹ ಕಠಿಣಕರವಾದ ವ್ರತಕ್ಕೆ ಓಹಿಲಯ್ಯನು ಕುಗ್ಗಿದನೇ? ಬೆದರಿದನೇ? ಬೆಚ್ಚಿ ದನೇ? ಇಲ್ಲ. ಶಿವಭಕ್ತಂ ಭಕ್ತಿರೂಪಂ ಕಲಿಛಲಿಯಚಲನಾದ ಆವನು 'ಹಸಾದ' ವೆಂದು ಒಪ್ಪಿಕೊಂಡನು. ಕಠೋರವ್ರತವನ್ನಾಚರಿಸುವುದು ದುರ್ಬಲರಿಗೆ ಅಸಾಧ್ಯ. ಇಷ್ಟವಾದುದನ್ನು ಪಡೆಯುವ ಹಾದಿಯಲ್ಲಿ ಅನಿಷ್ಟಗಳು ಪರಂಪರಾಗತವಾಗಿ ಬರುತ್ತವೆ. ಅವೆಲ್ಲವುಗಳನ್ನು ಮೆಟ್ಟಿ ದಾಟಬೇಕಾದರೆ ಓಹಿಲಯ್ಯನು ತೋರಿದ ಆತ್ಮಬಲ, ನಿಷ್ಠೆ ಗಳು ಬೇಕೆಂದು ಕವಿ ಹೇಳುತ್ತಾನೆ. ಈ ಉಗ್ರವ್ರತವನ್ನಾಚರಿಸಬೇಕಾದರೆ ಓಹಿಲ ಯ್ಯನ 'ಬಲವಳಿದು ಡೆಂಡಣಿಸಿ ಹೆಜ್ಜೆ ಹುಣ್ಣಂತಾಗೆ ಅಂಗಾಲೊಳುರಿಗೆದ್ದು ಬೊಕ್ಕೆ ನೆತ್ತರ ನುಗುಳೆ, ಅಂಗದೊಳಗುಳ್ಳ ಸರ್ವತ್ರಾಣಮುಂ ಜಗುಳೆ ಅನುಗೆಡುತ್ತ ಅವಯವಂ ಗಳ್ ಸಡಿಲವಾಗುತ್ತಿವೆ. ಇಷ್ಟಾದರೂ ಆತನ ಮನದ ನಿರ್ಧಾರ ಬದಲಾಗುವುದಿಲ್ಲ.

'ಮನವೆ ಕೈಕಾಲಾಗಿ ನಡೆಯುತಿರ್ದಂ ನೋಡ
ನೆನಹು ಜೀವನವಾಗಿ ನಡೆವುತಿರ್ದಂ ನೋಡ'

ಎಂದು ಹೇಳುವಲ್ಲಿ ಕವಿಯು ಓಹಿಲಯ್ಯನ ಕಷ್ಟಸಹಿಷ್ಣುತೆ ಅಚಲಭಕ್ತಿಗಳನ್ನು ಮಾರ್ಮಿಕವಾಗಿ ಓದುಗರ ಗಮನಕ್ಕೆ ತಂದುಕೊಡುತ್ತಾನೆ. ಬಂದ ಕಷ್ಟಗಳನ್ನೆಲ್ಲ ಸಹಿಸಿಕೊಂಡು ಶಿವನಾಜ್ಞೆಯನ್ನು ಅಕ್ಷರಶಃ ಪಾಲಿಸಿ ಧೂಪವನ್ನು ಸಲಿಸಿದ ಓಹಿಲಯ್ಯನನ್ನು ಶಿವನು ಕೈಲಾಸಕ್ಕೊಯ್ದು ಗಣಪದವಿಯನ್ನೀಯುತ್ತಾನೆ.

ಜಗತ್ತಿನಲ್ಲಿ ಮಾನವನಿಗೆ ದೈವಿಕೃಪೆಯ ಆವಿರ್ಭಾವವು ಅನಾಯಾಸವಾಗಿ ಆಗುವದಿಲ್ಲ. ಮಾನವನ ಸ್ಥಿರವಾದ ಭಕ್ತಿ ಅವ್ಯಾಹತವಾಗಿ ದೇವನೆಡೆಗೆ ಸಾಗಿದಾಗ ದೈವೀಶಕ್ತಿಯು ಭಕ್ತನೆಡೆಗಿಳಿದು ನಿತ್ಯಸುಖ ದೊರೆಯಬಲ್ಲದೆಂದು ಹರಿಹರ ಕವಿ ಓಹಿಲಯ್ಯನ ರಗಳೆಯ ಮೂಲಕ ಜಗಕ್ಕೆ ಬಿತ್ತರಿಸಿದ್ದಾನೆ.

ಮಾನವ ಜೀವನದಲ್ಲಿಯ ಸಾವಿನ ಭೀತಿಯನ್ನು ಅಳಿಯಲು ದೇವನನ್ನೇ ಮೊರೆಹೋಗಬೇಕು. ಅವನು ತಂಪೊಡ್ಡುವ ಭೀಕರಸಂಕಟಗಳನ್ನು ಪ್ರಸನ್ನಚಿತ್ತದಿಂದ ಎದುರಿಸಬೇಕು. ಅಚಲವಾದ ದೈವನಿಷ್ಠೆಯಿಂದ ದೈವೀಕೃಪೆಯು ನಿಶ್ಚಿತವಾಗಿ ದೊರೆ ಕೊಳ್ಳುವದು. ಸಾಂಪ್ರದಾಯದ ವ್ರತನೇಮಗಳು ಭಕ್ತನ ನಿಷ್ಠೆಯನ್ನು ಪರಿಕಿಸುವ ಸಾಧನಗಳು ಮಾತ್ರ. ಅವುಗಳ ಆಚರಣೆಯಲ್ಲಿ ದೈವೀಕೃಪೆಗಾಗಿ ಮಾನವನು ತೋರುವ ಉತ್ಕಟಭಾವ ಮುಖ್ಯವಾದುದು. ಆ ಉತ್ಕಟ ಭಾವಚಿತ್ರಣ ಹರಿಹರನ ಕಾವ್ಯದಲ್ಲಿ ಹೃದಯಂಗಮವಾಗಿ ಬರುತ್ತಿದೆ.

ಕಾರಿಕಾಲಮ್ಮೆ:

ಶಿವಭಕ್ತಳಾದ ' ಕಾರಿಕಾಲಮ್ಮೆ' ' ಅತ್ತೆ ಮಾವ ಗಂಡ 'ರರಿಯದಂತೆ ಶಿವನಲ್ಲಿ ಭಕ್ತಿಯನ್ನಿಟ್ಟಿದ್ದಳು. ಅವಳ ಶಿವಪೂಜೆ ಕೂಡ ಮನದಲ್ಲಿಯೇ ನಡೆಯುತ್ತಿತ್ತು. ಅಡುಗೆಯ ಮನೆಯೇ ಅವಳಿಗೆ ಅರ್ಚನೆಯ ಸ್ಥಳವಾಯಿತು. ಅಲ್ಲಿ ಕುಳಿತು,

' ನೆನೆವ ಘನಚಿಂತೆ ಸಕಲಸ್ತೋತ್ರವಭವಂಗೆ
ಮನದ ನಿರ್ಮಳವಗ್ಗವಣಿ ಮಹಾಮಹಿಮಂಗೆ
ಕೆಯ್ಯ ಕೀರೆಯೆ ಪರಿಮಳದ ಪುಷ್ಪವಭವಂಗೆ
ಸುಯ್ಯ ಕಂಪೆ ಗುಗ್ಗುಳ ಧೂಪವಾ ಮಹಿಮಂಗೆ
ನೋಟವೇ ಬೆಳಗಿನಾರತಿ ಶಂಕರಂಗಲ್ಲಿ
ಊಟವಲ್ಲಿಯೆ ಸಮೆದ ಬೋನದೋಗರವಲ್ಲಿ.'

ಇಂತು ಯಾರೂ ಅರಿಯದಂತೆ ಗುಪ್ತಭಕ್ತಿಯಿಂದ ಶಿವನನ್ನು ಆರಾಧಿಸುತ್ತಿದ್ದಳು. ಶಿವನೇ ತಂದೆ ತಾಯಿಗಳೆಂದು ಭಾವಿಸಿದ್ದಳು. ತನ್ನ ಆಸರಿಕೆ ಬೇಸರಿಕೆಗಳನ್ನು ಶಂಕರ ನಿಗೆ ನಿವೇದಿಸುತ್ತಿದ್ದಳು. ' ಸಂಸಾರದಿರವಿಂಗೆ ಪೇಸಿ ' ಮನದಲ್ಲಿಯೇ ಶಿವನನ್ನು ನೋಡಿ ಪಾಡಿ ಅರ್ಚಿಸುತ್ತಿದ್ದಳು. ಮುಟ್ಟುವುದು, ಮೂಸುವುದು, ನೋಡುವುದು, ಕೇಳುವುದು, ರುಚಿಸುವುದು—ಎಲ್ಲ ಕಾರ್ಯಗಳೂ ಶಿವಭಾವದಿಂದಲೇ ನಡೆಯು ತ್ತಿದ್ದವು. ಈ ತರದ ಅವಳ ಗುಪ್ತಾರಾಧನೆಯನ್ನು ಲೋಕಕ್ಕೆ ಪ್ರಕಟಿಸಬೇಕೆಂದು ಮೃಡನು ಆಲೋಚಿಸುತ್ತಾನೆ.

ಒಮ್ಮೆ ಅವಳ ಪತಿ ಮಾಣಿಕಸೆಟ್ಟಿ ಎರಡು ಉತ್ಕೃಷ್ಟ ಮಾವಿನ ಹಣ್ಣುಗಳನ್ನು ' ಸುರಕ್ಷಿತದಿಂದ ಬಯ್ತಿಡೆಂ 'ದು ಸತಿಯ ಕೈಯಲ್ಲಿ ಕೊಟ್ಟು, ತನ್ನ ವ್ಯಾಪಾರಕ್ಕಾಗಿ ಹೊರಗೆ ಹೋಗುತ್ತಾನೆ. ಇತ್ತ ಕಾರಿಕಾಲಮ್ಮೆಯು ' ಅಹಾ ಶಿವಂಗೆ ಶಿವಭಕ್ತರ್ಗೆ

ಯೋಗ್ಯವಿವು ; ಮರ್ತ್ಯರ್ಗೆಯೋಗ್ಯವಿವು ' ಎನ್ನುತ್ತಾ ಆ ಹಣ್ಣುಗಳನ್ನು ಬಚ್ಚಿಟ್ಟು ಅಡಿಗೆ ಮನೆಗೆ ಬಂದು ನಿತ್ಯದಂತೆ ಗುಪ್ತವಾಗಿ ಶಿವಪೂಜೆಗೆ ಆರಂಭಿಸುತ್ತಾಳೆ. ಆಗ ತಪಸ್ವಿ ವೇಷದಿಂದ ಶಿವನು ಅಲ್ಲಿ ಕಾಣಿಸಿಕೊಳ್ಳುತ್ತಾನೆ. ಕಾರಿಕಾಲಮ್ಮ ' ಮನದ ಗರ್ಭಿಣಿ ಜಿಹ್ವೆಯಿಂ ಬೆಸಲೆಯಪ್ಪಂತೆ ' ಬಚ್ಚಿಟ್ಟ ಎರಡು ಹಣ್ಣುಗಳಲ್ಲಿ ತನ್ನ ಪಾಲಿನ ಹಣ್ಣನ್ನು ತಪಸ್ವಿಗೆ ಕೊಟ್ಟು ' ಯಾರೂ ಅರಿಯದಂತೆ ಬೇಗ ತಿನ್ನಿರಿ. ಮನೆಯವರು ಕಂಡರೆ ನನ್ನ ಪ್ರಾಣ ತೆಗೆಯುತ್ತಾರೆ ' ಎಂದು ಹೇಳುತ್ತಾಳೆ. ಈತನು ತಿನ್ನುತ್ತಿದ್ದಂತೆ ' ಧಿಕ್ಕನೆ ' ಸೆಟ್ಟಿ ಬರುತ್ತಾನೆ. ಸೆಟ್ಟಿಗೆ ' ತಪಸ್ವಿ ಹಣ್ಣು ತಿಂದ 'ನೆಂಬ ಸಂದೇಹಕ್ಕೆಡೆ ಯಾಗುವಂತೆ ಜಾರಿ ಹೋಗುತ್ತಾನೆ.

ಸೆಟ್ಟಿಗೆ ಹಸಿವಾಗಿತ್ತು. ಇದ್ದ ಒಂದು ಹಣ್ಣನ್ನು ತಿಂದು, ಸೆಟ್ಟಿಯು ' ಇನ್ನೊಂದು ಹಣ್ಣೆಲ್ಲಿ ತಾ ' ಎಂದು ಕೇಳುತ್ತಾನೆ. ಆಗ ಅವಳ ಪ್ರಾಣವೇ ಹೋದಂತಾಗುತ್ತದೆ. ' ಕೈಯೊಡನೆ ಹರಣಮಂ ಬೆರಸಿ ' ಬಚ್ಚಿಟ್ಟ ಸ್ಥಳದಲ್ಲಿ ತೋರಿಕೆಗಾಗಿ ಕೈಯಾನುತ್ತಾಳೆ. ಶಿವನ ಮಾಯೆಯಿಂದಾಗಿ ತಪಸ್ವಿ ತಿಂದ ಹಣ್ಣು ಕೈಯ ಮೇಲೆಯೇ ಬರುತ್ತದೆ. ಆಗ ಹರ್ಷಿತಳಾಗಿ ಪತಿಗೆ ಅದನ್ನು ತಂದುಕೊಡಲು, ಸೆಟ್ಟಿಯು ಆಶ್ಚರ್ಯಚಕಿತನಾಗಿ ' ಈ ಹಣ್ಣು ಎಲ್ಲಿಯದು ? ' ಎಂದು ಕೇಳುತ್ತಾನೆ. ಮನದೊಳಗೆ ಸಿಡಿಮಿಡಿಗೊಳ್ಳುತ್ತಾ ಹರಭಕ್ತನಿಗೆ ಕೊಟ್ಟ ಸಂಗತಿಯನ್ನೂ ಅದು ಲೀಲಾಜಾಲವಾಗಿ ಮತ್ತೆ ಬಂದುದನ್ನೂ ಹೇಳಲು ಸೆಟ್ಟಿ ನಡುಗಿ ಅವಳ ಮಹಿಮೆಯನ್ನು ಕೊಂಡಾಡುತ್ತಾನೆ. ಸತಿಯೆಂಬ ಭಾವಪಳಿದು ತಾಯಿಯೆಂಬ ಭಾವ ಅವನಲ್ಲಿ ಉದಯಿಸುತ್ತಿದೆ. ಕಾರಿಕಾಲಮ್ಮ ತನ್ನ ' ಗುಪ್ತಭಕ್ತಿ ಪ್ರಕಟವಾಯಿತಲ್ಲಾ ' ಎಂದು ಮರುಗುತ್ತಾಳೆ.

> ' ದೇವ ಮೀಸಲ ಮೋಹಮಂ ಸೂಸಿದ್ಧೆ ತಂದೆ
> ಭಕ್ತಿ ಬೀಸರವಾಯಿತಿನ್ನೆಂತು ಸೈರಿಪೆಂ
> ಭಕ್ತಿ ಹರಿಹಂಚಾಯ್ತು ಇನ್ನೆಂತು ಜೀವಿಪೆಂ
> ಕೆಲರಱಿಯೆ ಭಕ್ತಿಯಂ ತೋಱಿ ಬೀಱಿದರುಂಟೆ
> ಪಲರಱಿಯೆ ಭಕ್ತಿಯಂ ಸಾಱಿ ಮಾಡಿದರುಂಟೆ '

ಎಂದು ಚಿಂತಿಸುತ್ತಾಳೆ. ಅಲ್ಲದೆ ಮುಂದಿದ್ದ ಸೆಟ್ಟಿಗೆ ಉಪದೇಶ ಮಾಡಿ, ಭಸ್ಮವನ್ನು ಪೂಸಿಕೊಂಡು, ರುದ್ರಾಕ್ಷಿ ಧಾರಣಮಾಡಿಕೊಂಡು, ಸರ್ವವನ್ನು ತ್ಯಾಗಮಾಡಿ, ಶಿವಧ್ಯಾನ ಮಾಡುತ್ತ ಮನೆಬಿಟ್ಟು ಹೊರಡುತ್ತಾಳೆ.

> ' ಪಾಪವುಳ್ಳರ್ಗೆ ಸಿಂಗರದಂತೆ ತೋರುತುಂ
> ಪಾಪವಿಲ್ಲದವರ್ಗೆ ತಾಯಂತೆ ತೋರುತುಂ
> ಭಕ್ತಿಲತೆ ನಡೆವಂತೆ ನಡೆಯುತಿರ್ದಳ್ನೋಡ. '

ಕಾಮುಕ ಜನರು ಕಾರಿಕಾಲಮ್ಮೆಯ ಸುಂದರ ರೂಪಕ್ಕೆ ಮರುಳಾಗಿ ಅವಳ ಬೆನ್ನ ಹಿಂದೆ ಬರುತ್ತಾರೆ. ' ಪಂಚಭೂತಗಳಿಂದ ಕೂಡಿದ ಈ ಬಂಡ ದಿಂಡೆಗೆ

ಮರುಳಾಗಬೇಡಿರಿ ' ಎಂದು ಬೋಧಿಸಿದರೂ ಅವರು ಅವಳ ಬೆನ್ನ ಹಿಂದೆ ಬರುವುದನ್ನು ಬಿಡುವದಿಲ್ಲ. ಆಗ ಬೇಸತ್ತು ' ವೇಷವೆನ್ನಂ ಕೊಂದಪುದು ಪಂಚಶರಹರಾ ಮಾಯಾ ತಮೋಹರಾ ' ಎಂದು ಶಿವನಲ್ಲಿ ಮೊರೆಯಿಡಲು ಶಿವನು ದೈವೀಶಕ್ತಿಯನ್ನು ನೀಡುತ್ತಾನೆ. ಅದರ ಬಲದಿಂದ ಸ್ಥೂಲಶರೀರವನ್ನು ಬಿಟ್ಟು ಸೂಕ್ಷ್ಮಶರೀರಿಯಾಗುತ್ತಾಳೆ. ಕೇವಲ ಎಲುವಿನ ಹಂದರ ಉಳಿಯುತ್ತಿದೆ. ಇದನ್ನು ಕಂಡು ಪಿಶಾಚಿಯೆಂದು ಜನವೆಲ್ಲ ಓಡಿಹೋಗುತ್ತಿದೆ. ಅವಳಿಗೆ ಕಾಡಿನಲ್ಲಿ ಶಿವನ ದರ್ಶನವಾಗುತ್ತಿದೆ. ' ಶಿವನೇ ನಿನ್ನ ನಾಟ್ಯಮಂ ತೋರೆನಗೆ ಮೈಯೆಲ್ಲ ಕಣ್ಣಾಗಿ ನೋಳ್ಪೆಂ ' ಎಂದು ಶಿವನನ್ನು ಪ್ರಾರ್ಥಿಸಲು ಶಿವನು ನಾಟ್ಯವಾಡುತ್ತಾನೆ ' ನಡೆ ತಾಯೆ ಕೈಲಾಸಪುರಕೆ ' ಎಂದು ಹೇಳಿ ಶಿವನು ಲಿಂಗದಲ್ಲಿ ಮಾಯವಾಗುತ್ತಾನೆ. ಕಾರಿಕಾಲಮ್ಮೆ ಕೈಲಾಸಕ್ಕೆ ಹೊರಡುತ್ತಾಳೆ. ಆದರೆ ದಾರಿಯಲ್ಲಿ ಈ ಮೊದಲು ನಡೆದ ಶಿವಶರಣರ ಹೆಜ್ಜೆಗಳೇ ಕಾಣುತ್ತವೆ. ' ಆಹಾ ಎನ್ನೊಡೆಯರೊಲವಿಂದ ನಡೆದ ಪೊಸಹೆಜ್ಜೆಗಳಿವು ; ಇವು ನನ್ನ ಶಿರದ ಮೇಲಿರಬೇಕು ' ಎಂದು ಅಪೇಕ್ಷಿಸುತ್ತಾಳೆ.

' ಅವರೆಲ್ಲ ನಡೆದಂತೆಯಾಂ ನಡೆಯಬಲ್ಲೆನೇ
ಅವರಂತೆ ಸಾಮರ್ಥ್ಯವುಳ್ಳೊಡಾಂ ಬಲ್ಲೆನೇ
ಎನ್ನ ಕೈ, ಕಾಲಾಗಿ ನಡೆವೆ ನಾನಿಂತಿಲ್ಲಿ
ಎನ್ನ ತಲೆಯಡಿಯಾಗಿ ನಡೆದು ತೋರುವೆನಿಲ್ಲಿ '

ಎಂದು ನಿರ್ಧರಿಸುತ್ತಾಳೆ. ಆ ನಿರ್ಧಾರದಂತೆ ಶರಣರ ಹೆಜ್ಜೆಗಳಲ್ಲಿ ತಲೆಯಿಟ್ಟು ಗಳಿಗೆಗೊಂದಡಿಯಿಡುತ್ತಾ ಹೊರಡುತ್ತಾಳೆ. ಶಿವನು ' ತನ್ನ ಮನದ ಧೈರ್ಯಂ ನೀಡಿ ' ಎತ್ತಿ ರಜತಗಿರಿಯ ಸೋಪಾನವೇರುವಂತೆ ಮಾಡುತ್ತಾನೆ. ಬಾಗಿಲಲ್ಲಿ ನಂದೀಶ್ವರನು ಎದುರ್ಗೊಳ್ಳುತ್ತಾನೆ. ' ಮೈಯೆಲ್ಲ ಎಲುವಾಗಿ ತಲೆಯೂರಿ ' ಬರುತ್ತಿರುವ ಕಾರಿಕಾಲಮ್ಮೆಯನ್ನು ಕಂಡು ಗಿರಿಜೆ ಅಂಜುತ್ತಾಳೆ. ಆಗ ಶಿವನು ಅವಳ ಪರಿಚಯ ಮಾಡಿಕೊಡುತ್ತಾ,

'ಅಲ್ಲೆ ಎಲೆ ಗೌರಿ ನಿಮ್ಮತ್ತೆ ನಮ್ಮಮ್ಮೆಯರು
ಎನ್ನವ್ವೆ ನಿಮ್ಮತ್ತೆ ಕಾರಿಕಾಲಮ್ಮೆಯರ್ '

ಎಂದು ಕೊಂಡಾಡುತ್ತಾನೆ. ಆದರೆ ಕಾರಿಕಾಲಮ್ಮೆ ಈ ಮಾತನ್ನು ಒಪ್ಪುವಳೇ ?

' ಅಲ್ಲ ಇಂತೆಂಬರೇ ನಿಮ್ಮ ತೊಳ್ತಾನೆಂದು
ಎನಗೆ ನೀ ತಂದೆ ಪಾರ್ವತಿ ತಾಯಿ ಎಲೆದೇವ
ಎನಗೆ ನೀವಿರ್ಬರುಂ ಜೀವದುನ್ನತಿ ದೇವ '

ಎನ್ನುತ್ತಾಳೆ. ಶಿವನು ಅವಳನ್ನೆತ್ತಿ ಪೈದಡವಿ ಮುಕ್ತಿಯನ್ನೀಯುತ್ತಾನೆ.

ಮಾಡುವ ಭಕ್ತಿ ಗುಪ್ತವಾಗಿದ್ದರೆ ಪವಿತ್ರವಾಗಿರುತ್ತದೆ. ಭಕ್ತಿಯ ಪ್ರದರ್ಶನವೇ

ಮುಖ್ಯ ಗುರಿಯಾಗಿರುವ ಜನಗಳಿಗೆ ಈ ಮಾತನ್ನು ಬಿಂಬಿಸುವಲ್ಲಿ ಈ ರಗಳೆಯು ಪ್ರಯೋಜನಕಾರಿಯಾಗಿದೆ.

'ಪಲರಱಿಯೆ ಭಕ್ತಿಯಂ ಸಾಱಿಮಾಡಿದರುಂಟೇ' ಎಂದು ಕಾರಿಕಾಲಮ್ಮೆ ಕೊರಗುತ್ತಾಳೆ. ಭಕ್ತಿಯು ವ್ಯಕ್ತಿಯ ಆತ್ಮ ಹಾಗು ಪರಮಾತ್ಮರಿಗೆ ಮಾತ್ರ ಸಂಬಂಧ ಪಟ್ಟುದು. ಇತರರ ಪ್ರಶ್ನೆ ಅಲ್ಲಿ ಬರಬೇಕಾಗಿಲ್ಲ. ಗುಪ್ತಭಕ್ತಿ ಪ್ರಕಟವಾದಾಗ ಕಾರಿಕಾಲಮ್ಮೆ 'ಇನ್ನೆಂತು ಜೀವಿಪೆಂ' ಎನ್ನುತ್ತಾಳೆ.

ರುದ್ರನೇ ತಂದೆತಾಯೆಂದು ಕೈಲಾಸವೇ ತವರ್ಮನೆಯೆಂದು ಕಾರಿಕಾಲಮ್ಮೆ ಭಾವಿಸಿದ್ದಳು. ಅಕ್ಕಮಹಾದೇವಿಗೆ ಚೆನ್ನಮಲ್ಲಿಕಾರ್ಜುನನ ನಿಲಯ ಗಂಡನ ಮನೆ ಯಾಗಿತ್ತು. ಹೀಗೆ ವ್ಯತ್ಯಾಸವಿದ್ದರೂ ಜೀವ ಪರಮರೈಕ್ಯದ ಹಾದಿಯು ಇಬ್ಬರಿಗೂ ಸಮಾನವಾಗಿದೆ. ಉಗ್ರನಿಷ್ಠೆಯಲ್ಲಿ, ದೇಹದ ಹಂಗು ತೊರೆಯುವಲ್ಲಿ, ಕಷ್ಟ ಸಹಿಸು ವಲ್ಲಿ ಇವರಿಬ್ಬರ ಚಿತ್ರಗಳು ಒಂದೇ ಬಗೆಯಾಗಿವೆ.

ಸ್ತ್ರೀರೂಪವು ಪಾಪವುಳ್ಳರ್ಗೆ ಸಿಂಗರದಂತೆ ಪಾಪವಿಲ್ಲದವರ್ಗೆ ತಾಯಂತೆ ತೋರು ವುದೆಂದು ಹರಿಹರ ಕವಿಯು ವರ್ಣಿಸಿದ್ದಾನೆ. ಕರಿಕಾಲಮ್ಮೆಯ ಕಷ್ಟಸಹಿಷ್ಣುತೆ ಬೆರಗುಗೊಳಿಸುವ ರೀತಿಯಲ್ಲಿ ಚಿತ್ರಿತವಾಗಿದೆ. ದೈವೀಕೃಪೆಗಾಗಿ ಅಂತಹ ನಿಷ್ಠುರತೆ ಅನಿವಾರ್ಯವೆಂದೂ ಭೀಕರಕಷ್ಟಗಳನ್ನು ಸಹಿಸುವಲ್ಲಿ ಪರಮಾತ್ಮನ ಕರುಣೆ ಕೈಗೂಡು ವುದೆಂದೂ ಹರಿಹರ ಇಲ್ಲಿ ಸ್ಪಷ್ಟಗೊಳಿಸಿದ್ದಾನೆ. ಶಿವಶರಣರು ನಡೆದ ಹೆಜ್ಜೆಗಳಲ್ಲಿ ತನ್ನ ಹೆಜ್ಜೆಯನ್ನಿಡಲಾರದೆ ಅವುಗಳು ತನ್ನ ಶಿರದ ಮೇಲಿರಬೇಕೆಂದು ತನ್ನ ಕೈ, ತಲೆಗಳು ಅಡಿಯಾಗಿ ನಡೆವ ಕಾರಿಕಾಲಮ್ಮೆಯ ಭಕ್ತಿನಿರ್ಭರತೆಯನ್ನು ನಾವು ಗಮನಿಸಬೇಕಾ ಗಿದೆ. ತಲೆಯೂರಿ ಮೈಯೆಲ್ಲ ಎಲುಬಾಗಿ ಬರುತ್ತಿರುವವಳನ್ನು ಪಾರ್ವತಿ ಕಂಡು 'ಇದೇನು ಮರಳು ಬಂದಿದೆ' ಎಂದು ಕೇಳಿದರೆ ಶಿವನು 'ಅಲ್ಲಲ್ಲ ಎಲೆ ಗಿರಿಜೆ ಕಾರಿ ಕಾಲಮ್ಮೆಯರು ನಮ್ಮಮ್ಮೆ ನಿಮ್ಮತ್ತೆ' ಎಂದು ಹೇಳುತ್ತಾನೆ. ಮಾನವನ ಚಿತ್ರದ ವಿರಕ್ತಿ ಪರಮಾತ್ಮನನ್ನು ಹೀಗೆ ವಶಪಡಿಸಿಕೊಳ್ಳಬಲ್ಲುದೆಂಬ ಚಿತ್ರವೂ ಇಲ್ಲಿದೆ. ಜನರ ಹಂಗು ತೊರೆದು ಭಕ್ತಿನಿರ್ಭರತೆ ತೋರಬೇಕೆನ್ನುವುದು ಇಲ್ಲಿಯ ಹರಿಹರನ ದೃಷ್ಟಿ ಯಾಗಿದೆ.

ತಿರುನೀಲಕಂಠ :

ನಿಶ್ಚಲಭಕ್ತಿಯಿಂದ ಉಗ್ರನಿಷ್ಠೆಯಿಂದ ಮುಪ್ಪಡಸುವವರೆಗೆ ಗುಪ್ತ ವ್ರತವನ್ನಾ ಚರಿಸಿದ ತಿರುನೀಲಕಂಠನೆಂಬ ಶರಣನ ಚಿತ್ರ ರಮಣೀಯವಾಗಿದೆ. ಅಲ್ಲಿಯ ದರ್ಶನ ಹುರಳುಳ್ಳದಾಗಿದೆ.

ಚೋಳದೇಶವು ಪ್ರಕೃತಿದೇವಿಯ ತವರುಮನೆ. ಎಲ್ಲೆಡೆಗೆ ಹರಿವ ಕಾಲುವೆಗಳು, ತೋಟಗಳು, ಗದ್ದೆಗಳು, ಬನಗಳು. ಈ ದೇಶವಲ್ಲಿ 'ಪೊನ್ನಾಂಬಲ' ಎಂಬುದೊಂದು

ಶಿವಪುರ. ಶಿವನಿಷ್ಠೆಯೇ ಅದಕ್ಕೆ ಕೋಟೆ. ಭಕ್ತಿಯೇ ಕಾವಲು. ಪುರದಲ್ಲೆಲ್ಲ ಹರ ವೀದಿ; ಶಿವಬೀದಿಗಳೇ. ಜನರೆಲ್ಲ ಶಿವಭಕ್ತರು.

ಅಲ್ಲಿ ತಿರುನೀಲಕಂಠನೆಂಬ ಶಿವಭಕ್ತನಿದ್ದ. ಆತನ ಸತಿ ಮುತ್ತೈದೆ. ಅವಳೂ ಲಿಂಗಭಕ್ತೆ. ಇಬ್ಬರೂ ಹದಿನಾರರ ಹರೆಯದವರು.

ಒಂದು ದಿನ ಶಿವಾಲಯದಿಂದ ಬರುವಾಗ ದಾರಿಯಲ್ಲಿ ವಿಳಾಸಿನಿಯೋರ್ವಳು 'ತೊಳೆದ ಪರಿಯಾಣದುದಕವನಲ್ಲಿ ಚಲ್ಲುತಿರೆ' ಕೆಳಗೆ ನಡೆದಿದ್ದ ತಿರುನೀಲಕಂಠನ ಮೇಲೆ ಸಿಡಿಯುತ್ತಿವೆ. ಆಗ ಅವಳು 'ಗಡಗಡನೆ' ನಡುಗುತ್ತ ಬಂದು ತನ್ನ ತಪ್ಪನ್ನು ಒಪ್ಪಿಕೊಳ್ಳುತ್ತಾಳೆ. ಅಲ್ಲದೆ ತಿರುನೀಲಕಂಠನನ್ನು ತನ್ನ ಮನೆಗೆ ಬಿಜಯಂಗೈಸಿ ಕೊಂಡೊಯ್ದು ಪರಿಮಳೋದಕದಿಂದ ಮಜ್ಜನವ ಮಾಡಿಸಿ, ದುಕೂಲವನುಡಿಸಿ, ದಿವ್ಯಗಂಧಗಳನ್ನು ಲೇಪಿಸಿ, ನವಕುಸುಮಗಳನ್ನು ಅವನ ಸಿರಿಮುಡಿಗೇರಿಸಿ ಕಪ್ಪುರದ ವೀಳೆಯನ್ನು ಕೊಟ್ಟು ಕಳಿಸುತ್ತಾಳೆ. ಮನೆಗೆ ಮರಳಿದಾಗ ತಿರುನೀಲಕಂಠನ ಸತಿಯು ಅಪಾರ್ಥ ಮಾಡಿಕೊಳ್ಳುತ್ತಾಳೆ. ಮುತ್ತೈದೆ ಸಿಡಿಮಿಡಿಗೊಂಡು 'ಮುಟ್ಟಿದಡೆ ಶಿವ ನಾಣೆ' ಎಂದು ಪತಿಯ ಕೈಯನ್ನು ನೂಕುತ್ತಾಳೆ. ಅಂದಿನಿಂದ ಸತಿಪತಿಗಳಿಬ್ಬರೂ ಒಬ್ಬರನ್ನೊಬ್ಬರು ಸೋಂಕದ ಬಾಳುವೆಯನ್ನು ಸಾಗಿಸುತ್ತಾರೆ. ಅವರ 'ಆಣೆ'ಯ ವಿಷಯ ಅವರಿಬ್ಬರಿಗಲ್ಲದೆ ಬೇರಾರಿಗೂ ತಿಳಿಯದು. ಶಿವನೊಬ್ಬನಿಗೆ ಮಾತ್ರ ಗೊತ್ತು.

'ಪ್ರಾಣದೊಳಗಡಗಿತ್ತು ಹರನಾಣೆಯದು ನೋಡೆ
ಆಣೆಯೊಳಗಡಗಿತ್ತು ಅವರ ಯೌವನ ನೋಡೆ'

ಇಂತು ಅವರು ತಮ್ಮ ಯೌವನವನ್ನು ಕಳೆಯುತ್ತಾರೆ. ಆಣೆಯೇ ಅವರ ಪ್ರಾಣವಾಗುತ್ತಿದೆ. ಸರಿ, 'ಆಣೆ ಪಕ್ವಕ್ಕೆ ಬಂದಂತೆ' ಅವರಿಗೆ ಮುಪ್ಪು ಬರುತ್ತಿದೆ. ಆಗಿನ ಅವರ ಚಿತ್ರವಿಂತಿದೆ:

'ಶಿವಭಕ್ತಿಸೋಪಾನದಂತೆ ತೆರೆಗಳು ಮುಸಗೆ
ಶಿವನಲ್ಲದಾರು ಇಲ್ಲೆಂಬಂತೆ ತಲೆನಡುಗೆ
ಭವಿಗಳಂ ನೋಡೆನೆಂಬಂತೆ ಕಣ್ಣೆವೆಮುಗಿಯೆ
ಅವಿರಳದಿ ನೆನೆವು ಶುಭ್ರತೆಯಂತೆ ನೆರೆಹೊಳೆಯೆ
ಹಲವುಕರ್ಮಕ್ಕಡಿಯನಿಡದಂತೆ ನಡೆಯುಡುಗೆ
ಉಲಿವ ಮಾಯೆಯ ತೋರುವಂತೆ ಕೈಗಳು ನಡುಗೆ'

ತೊಂಬತ್ತು ವರ್ಷ ವಯಸ್ಸಾಗುತ್ತಿದೆ. ಶಿವನು ಇವರ 'ಮನವನೊರೆದು ನೋಡುವೆನೆಂದು' ಮುಪ್ಪಿನ ಭಿಕ್ಷುಕನ ವೇಷವ ತಳೆದು ತಿರುನೀಲಕಂಠನೆಡೆಗೆ ಬರುತ್ತಾನೆ. ತನ್ನ ಕೈಯಲ್ಲಿದ್ದ ಪಾತ್ರೆಯನ್ನು ಕೊಟ್ಟು 'ಇದನ್ನು ಕೆಡದಂತೆ ಬಚ್ಚಿಡು; ನಾನು ಮತ್ತೆ ಬಂದಾಗ ಕೊಡು' ಎಂದು ಹೇಳಿ ಹೋಗುತ್ತಾನೆ. ಮರುದಿನ ಮುಂಜಾನೆ ಭಿಕ್ಷುಕನು ಬಂದು ಕೇಳಿದಾಗ ಅದು ಮಾಯವಾಗಿತ್ತು. ಆಗ ತಿರುನೀಲಕಂಠನು ಬೆರ

ಗಾಗಿ, ನಡುಗುತ್ತ 'ನುಡಿಯಲರಿಯದೆ ಕರಗಿ ಕೊರಗಿ ಕಡು ಭೀತಿಯಿಂ'ದ ಮರುಳ ನಂತೆ ಭಿಕ್ಷುಕನ ಕಡೆಗೆ ನೋಡುತ್ತಾನೆ. ಆಗ ಭಿಕ್ಷುಕನು ಸಿಟ್ಟಿಗೆದ್ದು,

'ಆಹಹಾ ಹಸನಾಯ್ತು ಕುಡಿರೇಕೆ ಪಾತ್ರೆಯಂ
ಓಹೋಹೋ ಇಂತು ಕೊಂಡವರುಂಟೆ ಪಾತ್ರೆಯಂ
ಏನೋ ಪೆಟ್ಟಿಗೆಯೆ ತಿಂದುದೋ ನೆಗಳು ನುಂಗಿತೋ
ಮೋನದಿಂದಿರ್ದೊಡಿದರೊಳು ಪಾತ್ರೆ ಇಂಗಿತೋ'

ಎಂದು ಅವರ ಮನಕ್ಕೆ ನಾಟುವಂತೆ ಝುಂಕಿಸಿ ನುಡಿಯುತ್ತಾನೆ. ಅಲ್ಲದೆ ಅವರಿಬ್ಬ ರನ್ನೂ ನ್ಯಾಯಸಭೆಗೆ ಕರೆದುಕೊಂಡು ಬಂದು, ಅಲ್ಲಿ ಹಿರಿಯರೆದುರು,

'ಪಿರಿಯರೀ ಪಾತ್ರೆಯಂ ನುಂಗಿಕೊಂಡಿರ್ದಪರು
ಈ ಪರಿಯೆ ಹೊಸತು ನಿಸ್ಸೀಮರಂ ನೋಡಿರೆ
ಭಾಪುರೆ ಸಾಧುಗಳಿರಾ ಪಾತ್ರೆಯನೀಯಿರೆ'

ಎಂದು ಆ ಸತಿಪತಿಗಳಿಗೆ ಚುಚ್ಚುಮಾತುಗಳನ್ನಾಡುತ್ತಾನೆ. ತಿರುನೀಲಕಂಠನ ಗುಣ ಗಳನ್ನರಿತ ಸಭೆಯು ಮರುಗಿ ಭಿಕ್ಷುಕನಿಗೆ 'ನಿನ್ನ ಪಾತ್ರೆಗೆ ಪ್ರತಿಯಾಗಿ ಬಂಗಾರದ ಪಾತ್ರೆಯನ್ನು ಕೊಡಿಸುತ್ತೇವೆ. ಅದನ್ನು ತೆಗೆದುಕೊಂಡು ಇವರ ಮೇಲೆ ಕರುಣಿಸು' ಎಂದು ಕೇಳಿಕೊಳ್ಳುತ್ತಾರೆ. ಆಗಂತೂ ಭಿಕ್ಷುಕನ ಕೋಪ ಮಸ್ತಕಕೇರುತ್ತದೆ.

'ನೆನೆದುದಪ್ಪುದು ನುಡಿದುದಂ ಕೊಡುವುದಾಪಾತ್ರೆ
ಅದಕೆ ಹೊನ್ನುಂ ಗಿನ್ನುಂ ಸರಿಯೇ ಇದೇ ಮಾತು
ಅದಕೆ ಪರುಸಂ ಗಿರುಸಂ ಓಹೋ ಬೇಡಾ ಮಾತು'

ಎಂದು ಕೂಗುತ್ತ ಅವರನ್ನು 'ಬಡಿವಂತೆ ಮುಟ್ಟಿ' ಹೊಡೆವಂತೆ ಸೋಂಕಿ' ಹಿಗ್ಗುತ್ತ 'ಕಳವಳಿಸಿ' 'ಪಾತ್ರೆ ಪಾತ್ರೇ' ಎಂದು ಹಲಬುತ್ತಾನೆ.

ಇದನ್ನೆಲ್ಲ ನೋಡುತ್ತಿದ್ದ ಸಭೆಗೆ ದಿಕ್ಕುತೋಚದಂತಾಗುತ್ತದೆ. 'ಭಿಕ್ಷುಕನಲ್ಲಿ ತಪ್ಪಿಲ್ಲ. ಈ ಸತಿಪತಿಗಳಾದರೋ ಕದಿಯುವ ಸ್ವಭಾವದವರಲ್ಲ. ಪಾತ್ರೆ ಹೋದದ್ದು ನಿಜ. ಇದರರ್ಥವನ್ನು ದೇವರೇ ಬಲ್ಲ' ಎಂದು ಸಭೆ ಸುಮ್ಮನಾಗುತ್ತಿದೆ. ಆಗ ಮತ್ತೆ ಕಪಟ ಭಿಕ್ಷುಕನು 'ನಾನೇ ಸೋತಿದ್ದೇನೆ. ಅವರೇ ಗೆದ್ದವರು. ಆದರೆ ನೆರೆದವರ ಮುಂದೆ ಇವರಿಬ್ಬರೂ ಕೈ ಕೈ ಹಿಡಿದುಕೊಂಡು ಈ ಹೊಂಡದಲ್ಲಿ ಮುಳುಗಿದರೆ ನಾನು ಸುಮ್ಮನಾಗುತ್ತೇನೆ' ಎಂದು ಮೇಲುಬಿದ್ದು ಹೇಳುತ್ತಾನೆ.

ಇವನ್ನು ಕೇಳುತ್ತಲೇ ತಿರುನೀಲಕಂಠನ ಕರುಳು ಹಿಚುಕಿದಂತಾಗುತ್ತದೆ. ಹೆಂಡತಿಯನ್ನು ಮುಟ್ಟಬಾರದೆಂಬ ವ್ರತ ಕೆಡುವ ವೇಳೆ ಬಂದಿತೆಂದು ಮರುಗುತ್ತಾನೆ. 'ಏನು ಮಾಡಲಿ' ಎಂದು ಚಡಪಡಿಸುತ್ತಾನೆ. ಕಡೆಗೆ ತನ್ನ 'ವ್ರತಕ್ಕೆ ಭಂಗ ತರ ಲಾರೆ'ನೆಂದು ನಿರ್ಧರಿಸುತ್ತಾನೆ.

‘ ಕಳ್ಳನಿವನೆಂದೆನಲಿ ಕಡುಪಾಪಿಯೆಂದೆನಲಿ
ಬಳ್ಳಿಹುಸಿಕಂ ಬರಿಯ ಕೋಪಿ ಇವನೆಂದೆನಲಿ
ಶಿವಭಕ್ತಿಡಂಭನೆಂದೆನಿಸಲಾರೆಂ ಶಿವನೆ ’

ಎಂದು ನಿಶ್ಚಯಿಸಿ,

‘ ಪಿಡಿಯೆನೆನ್ನಾಸತಿಯ ಕಯ್ಯ ನೇನಾದೊಡಂ
ಪಿಡಿಯೆನೀ ಧರೆ ಮೇಲೆ ಕೆಡೆದೊಡಂ ಸತ್ತೊಡಂ ’

ಎಂದು ಸಭೆಗೆ ಹೇಳುತ್ತಾನೆ. ತಿರುನೀಲಕಂಠನ ಮತ್ತೊಂದು ತಪ್ಪು ಸಭೆಯ ಎದುರಿನಲ್ಲಿಯೇ ಹೊರಬಿದ್ದುದು ಭಿಕ್ಷುಕನಿಗೆ ಉತ್ಸಾಹವನ್ನುಂಟುಮಾಡುತ್ತಿದೆ. ಅವರ ಮಾನ ಹೋಗುವಂತೆ ಕಟಕಿಗಳನ್ನಾಡುತ್ತಾನೆ. ತಿರುನೀಲಕಂಠನು ಕಪಟ ಭಿಕ್ಷುಕನು ಒದೆದರೂ, ಬಯ್ದರೂ, ನಿಂದಿಸಿದರೂ, ‘ ಏನೆಂದೊಡಂ ಹಸಾದಂ ದೇವ ಕರುಣಿಸು ’ ಎಂದೇ ಪ್ರಾರ್ಥಿಸುತ್ತಾನೆ. ಆಗ ಪರಮೇಶ್ವರನಿಗೆ ಭಕ್ತರನ್ನು ಕಾಡುವುದು ಸಾಕಾಗುತ್ತಿದೆ. ಕಡೆಗೆ ‘ ತಾನು ಹಿಡಿದುಕೊಂಡಿದ್ದ ಕೋಲಿನ ತುದಿಗಳನ್ನು ಇಬ್ಬರೂ ಹಿಡಿದುಕೊಂಡು ಹೊಂಡದಲ್ಲಿ ಮುಳುಗಿ ಆಣೆ ಮಾಡಲಿ’ ಎಂದು ಹೇಳಲು ಅದಕ್ಕೆ ಅವರು ಒಪ್ಪಿ ಕೋಲನ್ನು ಹಿಡಿದುಕೊಂಡು ನೀರಲ್ಲಿ ಮುಳುಗುತ್ತಾರೆ. ನೀರಿನಲ್ಲಿ ಮುಳುಗಿ ಎದ್ದೇಳುವಾಗ ಅವರು ಹದಿನಾರರ ಹರೆಯದವರಾಗಿ ಮೊದಲಿಗಿಂತ ನೂರುಮಡಿ ಸುಂದರಾಂಗರಾಗಿ ಮಾರ್ಪಟ್ಟಿರುತ್ತಾರೆ. ಭಿಕ್ಷುಕನು ತನ್ನ ವೇಷ ಕಳೆದು ತನ್ನ ನಿಜರೂಪವನ್ನು ತೋರಿಸುತ್ತಾನೆ. ತಿರುನೀಲಕಂಠನಿಗೆ ಪರಮೇಶ್ವರನ ಪ್ರತ್ಯಕ್ಷರೂಪವನ್ನು ಕಂಡು ಅಮಿತಾನಂದವಾಗುತ್ತಿದೆ. ‘ ನುಡಿದಂತೆ ನಡೆದರೆ ಇದೇ ಜನ್ಮ ಕಡೆ ’ ಎಂಬ ಮಾತಿನ ತಿರುಳು ತಿರುನೀಲಕಂಠನ ರಗಳೆಯಲ್ಲಿ ಸ್ಪಷ್ಟವಾಗಿ ನಿರೂಪಿತವಾಗಿದೆ. ಶಿವನಿಗಾಗಿ ಎಲ್ಲ ಕಷ್ಟನಿಷ್ಠುರಗಳನ್ನು ಸಹಿಸಬೇಕೆಂಬ ದೃಷ್ಟಿಯನ್ನು ಹರಿಹರನು ಈ ರಗಳೆಯಲ್ಲಿ ಬಿತ್ತರಿಸಿದ್ದಾನೆ. ಜೀವನದಲ್ಲಿಯ ಅಕಾರಣ ನಿಂದೆಯನ್ನು ಸಹಿಸಬೇಕು. ಈಶಭಕ್ತಿಯನ್ನು ನಂಬಬೇಕು. ಪರಮಾತ್ಮನಿಗಾಗಿ ಏನೆಲ್ಲವನ್ನೂ ಸಹಿಸಿ ಚಿತ್ತದ ನಿಶ್ಚಲತೆಯನ್ನು ಕಾಯ್ದುಕೊಂಡರೆ ದೈವೀಕರುಣೆ ತಾನೇ ತಾನಾಗಿ ಹರಿದು ಬರುತ್ತದೆಯೆಂಬುದನ್ನು ಹರಿಹರನು ಈ ರಗಳೆಯಲ್ಲಿ ತೋರಿಸಿದ್ದಾನೆ. ಶೆಕ್ಕಿಲಾರನ ತಮಿಳು ಪೆರಿಯ ಪುರಾಣದಲ್ಲಿ ತಿರುನೀಲಕಂಠನಿಗೆ ಸ್ತ್ರೀವ್ಯಾಮೋಹದ ನ್ಯೂನತೆಯಿತ್ತೆಂಬ ಸೂಚನೆಯಿದೆ. ಹರಿಹರನ ಚಿತ್ರವು ಬೇರೆ ಬಗೆಯಾಗಿ ರೂಪುಗೊಂಡಿದೆ. ಅದಕ್ಕೆ ಹರಿಹರನ ‘ದರ್ಶನ’ದ ಬಗೆಯೇ ಕಾರಣ.

ಚಿತ್ತದಾತುರದ ಮಹೋನ್ನತೀಕರಣ

ಮಲುಹಣ—ಮಲುಹಣಿ :

ಕಾಶ್ಮೀರ ದೇಶದ ಭಾರತೀಪೀಠಪುರದ ಸುವರ್ಣಭಟ್ಟನ ಮಗ ಮಲುಹಣನು ತಂದೆಗೆ ಪಂಚಪ್ರಾಣವಾಗಿದ್ದ :

‘ ದಿವ್ಯವಸ್ತ್ರಂ ಗಂಧ ಕಸ್ತೂರಿ ಪುತ್ರಂಗೆ
ನವ್ಯ ಭೂಷಣವಿತತಿ ವಿಸ್ತರಂ ಪುತ್ರಂಗೆ
ಗೀತವಾದ್ಯಂ ನೃತ್ಯಲೀಲೆ ಪುತ್ರನ ಮುಂದೆ
ನೂತನ ವಿನೋದ ಸರಸೋಕ್ತಿ ಪುತ್ರನ ಮುಂದೆ
ನವಫಳಂ ನವರಸಂ ನವಸುಖಂ ಪುತ್ರಂಗೆ ’

ಹೀಗೆ ಐಹಿಕ ಸುಖದ ಸಾಗರದಲ್ಲಿ ಮುಳುಗುವಂತಹ ಎಲ್ಲ ತರದ ಏರ್ಪಾಡುಗಳನ್ನೂ ತಂದೆ ಮಾಡಿದ್ದ.

ಹೀಗಿದ್ದರೂ ಸುವರ್ಣಭಟ್ಟನಿಗೆ ಮಗನ ಮುಂದಿನ ಜೀವನದ ಆಗುಹೋಗುಗಳ ಚಿಂತೆಯಾವರಿಸುತ್ತಿದೆ. ದಿನಕ್ಕೆ ಒಂದು ಸಹಸ್ರ ಹೊನ್ನನಂತೆ ಮಗನು ನೂರು ವರ್ಷಗಳವರೆಗೆ ಖರ್ಚುಮಾಡಿದರೆ ಸಾಲುವಷ್ಟು ಹೊನ್ನಿನ್ನು ಕಟ್ಟಿ ಮುದ್ರಿಸಿ ಮಗನಿಗಾಗಿ ಬೈತಿಡುತ್ತಾನೆ. ಒಂದು ದಿನ ವಿಷಮಜ್ವರ ಬಂದು ಸುವರ್ಣಭಟ್ಟನು ಕೈಲಾಸವಾಸಿಯಾಗುತ್ತಾನೆ. ಮಲುಹಣನು ತಂದೆಯ ‘ ಸಕಲೇತರ ಭಾರಕ್ಕೆ ತಾನೇ ವಲ್ಲಭನಾಗಿ, ಸಕಲ ಪರಿಜನಕ್ಕೆ ರಕ್ಷೆ ಶಿಕ್ಷಕನಾಗಿ ’ ಜೀವನವನ್ನು ಸಾಗಿಸುತ್ತಾನೆ ; ಪ್ರಾಯಕ್ಕೆ ಬರುತ್ತಾನೆ. ಮಲುಹಣನು ಹರೆಯಕ್ಕೆ ಬಂದಾಗಿನ ಚಿತ್ರವಿದು :

‘ ಸವಿನುಡಿಗಳಂ ಕಿವಿಗಳಾಲಿಸಲ್ತೊಡಗಿದವು
ಅವಯವಂ ಮೃದು ವಸನದಿಚ್ಛೆಯನೊಡರ್ಚಿದವು
ನೋಟವಪ್ಪುವ ರೂಪವೆಚ್ಚರಿಸಲೆಳಸಿದವು
ತೋಟಿಗೆಳಸುವ ಪುರ್ಬು ಗಂಟಿಕ್ಕತೊಡಗಿದವು
ನವಮಧುರಮಂ ಜಿಹ್ವೆ ಬಯಸಲನುಗೈಯಿತ್ತು
ನವಗಂಧಮಂ ಘ್ರಾಣವರಿಯಲನುಗೈಯಿತ್ತು
ಕರತಳಂ ತನುರುಚಿಯ ನೋವನಂಗೈಸಿದವು
ಕರಣತತಿ ಭೋಗಸಂಪದಮನಿಚ್ಛೈಸಿದವು
ಅಂಗರುಚಿ ಮುಗ್ಧೆಯರ ಕಣ್ಗೆ ಕನ್ನಡಿಯಾಗೆ
ಅಂಗಲತೆ ತರುಣಿಯರ ಸಂಗಸಂಪದಮಾಗೆ
ಇಂತು ಸರ್ವೇಂದ್ರಿಯಂ ಸುಖದ ಬಳಕೆಗೆ ಸಲಲ್
ಬೆಳೆಯುತಿರ್ದಂ ಸುಖಮನೆಳಸಿ ಮಲುಹಣನಿತ್ತ ’

ಈ ವರ್ಣನೆಯಲ್ಲಿ ಶೃಂಗಾರ ರಸದ ಆಧಿಕ್ಯವೂ ಇದೆ. ಇಡಿಯ ರಗಳೆಯಲ್ಲಿಯೆ ಇದನ್ನು ಗುರುತಿಸಬಹುದು.

ಇತ್ತ ವಿಜಯೇಶ್ವರನ ದೇವದಾಸಿ ಪದ್ಮಾವತಿಯ ಮಗಳು ಮಲುಹಣಿಯು 'ಕುಸುಮಬಾಣನ ಕೀರ್ತಿ ಬೆಳೆವಂದದಿಂ ಸರ್ವಾಂಗ ಸೌಂದರ್ಯಮಂ ಕೆಳೆಗೊಂಡು' ಬೆಳೆಯುತ್ತಾಳೆ.

'ಅಳಿತುಡುಂಕದ ಮಘಮಘಿಪ ಬಿರಿಮುಗುಳಂತೆ
ಎಳಸುವ ಚಕೋರಿ ಮೊಗವಿಡದ ಚಂದ್ರಿಕೆಯಂತೆ
ಪಿಕಚಂಚು ಸಂಚಾರವಿಲ್ಲದ ಎಳೆದಳಿರಂತೆ
ಶುಕಮುಖದಿ ಅಜ್ಞೆವಳಿಯದ ಪಕ್ವಫಳದಂತೆ
ತೊಳತೊಳಗಿ ಬಳೆವುತಿರ್ದಳ್ ಚಂದ್ರಕಳೆಯಂತೆ
ನಳನಳಿಸಿ ಬಳೆವುತಿರ್ದಳ್ ಕುಸುಮಶರದಂತೆ'

ಭ್ರಮರವು ಮುಟ್ಟದ ಗಮಗಮಿಸುವ ಅರಳಿದ ಪುಷ್ಪದಂತೆ, ಚಕೋರ ಪಕ್ಷಿ ಈಂಟದಿದ್ದ ಬೆಳದಿಂಗಳಂತೆ, ಗಿಳಿ ಕಡಿಯದ ಎಳದಳಿರಂತೆ, ಗಿಳಿ ಕಡಿಯದ ಪಕ್ವವಾದ ಹಣ್ಣಿನಂತೆ ಮಲುಹಣಿಯು ಇದ್ದಳೆಂದು ಹೇಳುವಲ್ಲಿ ಕವಿಯು ಉಪಮಾಲಂಕಾರದ ಸೊಬಗನ್ನೂ ಕಾಣುತ್ತೇವೆ. ಅರಳಿದ ಪುಷ್ಪಕ್ಕೆ ಭ್ರಮರನಾಗಿ, ಬೆಳದಿಂಗಳಿಗೆ ಚಕೋರ ವಾಗಿ, ತಳಿರಿಗೆ ಗಿಳಿಯಾಗಿ, ಮಲುಹಣಿಗೆ ಮಲುಹಣನು ಬರುವನೆಂಬುದನ್ನು ಕವಿಯು ಇಲ್ಲಿ ಧ್ವನಿಯುಕ್ತವಾಗಿ ವರ್ಣಿಸಿದ್ದಾನೆ.

ವಸಂತಮಾಸದಲ್ಲಿ ಒಂದು ದಿನ ಆ ಪಟ್ಟಣದ ವಿಜಯೇಶ್ವರ ದೇವರ ಮುಂದೆ ಹೊಸಹರೆಯದ ಸುಕುಮಾರಾಂಗಿ ಮಲುಹಣಿಯ ನೃತ್ಯದ ಏರ್ಪಾಡು ನಡೆಯುತ್ತಿದೆ. 'ಗಿಳಿ, ಹಂಸೆ, ಕೋಗಿಲೆ, ಕುಸುಮಕುಲಂ, ಮಧುಕರಂ, ಮಂದಾನಿಲಂ, ಚಂದ್ರಿಕೆ, ಚಕೋರ, ಚಕ್ರವಾಕಗಳ್ನೆರೆದು ಬಂದು ಕಾಮನ ಪುವ್ವಿನಂಬಂ ನಡುವಿಟ್ಟುಕೊಂಡು ಓಲೈಸುತುಂ ಬರ್ಪಂತೆ' ಮಲುಹಣಿಯನ್ನು ನಡುವಿಟ್ಟುಕೊಂಡು ತಾಯಿ, ಸಖೀ ಜನರು ವಿಜಯೇಶ್ವರದೇವರ ರಂಗಮಂಟಪಕ್ಕೆ ಬರುತ್ತಾರೆ.

ಇತ್ತ ಮಲುಹಣನು 'ವಿಜಯೇಶ್ವರ ದೇವರ ದಿವ್ಯಪಾದಪ್ರಣುತ ನಿತ್ಯನಿಯಮಾ ಸಕ್ತನಾಗಿ, ನೆಸಲೊಳಿಟ್ಟ ಭಸಿತದ, ಕೀಲಿಸಿದ ಕರ್ಣಾಭರಣದ, ಕೈಗೊಳಿಸಿದ ತೋರ ಹಾರದ ಉಟ್ಟು ಹೊದೆದ ಹೊಸದುಕೂಲದ, ಕಿವಿಯೊಳಂತಗೊಂಡ ಮೃಗಮದದ, ಕಕ್ಷ ಪುಟದೊಳ್ ಮಗಮಗಿಪ ಕತ್ತುರಿಯ ಸಾರದ, ಉದ್ವರ್ತನಂಗೆಯ್ವ ಚಂದನದ, ತುರಂಗಿದ ಕುಸುಮಾವಳಿಯ ಪೊಸಕಂಪು ಸೊಗಯಿಸುವ ಸೊಂಪು, ಮೋಹಿಸುವ ಬೆಳಗುಂ ಮುಪ್ಪುರಿಗೊಂಡು ಬಳಸಿ ಬೀದಿವರಿಯೆ' ತನ್ನ ಮನೆಯನ್ನು ಬಿಟ್ಟು ಕವಿ, ವಿಪ್ರ, ಗಾಯಕ, ವಿಟ, ವಿದೂಷಕ, ನಾಗರಿಕ ಮೊದಲಾದವರ ಮಧ್ಯದಲ್ಲಿ 'ಕಾಮನ

ಕೆಯ್ಸುರೆ ಬರ್ಪಂತೆ' ವಿಜಯೇಶ್ವರ ದೇವಾಲಯಕ್ಕೆ ಬಂದು ದೇವರಿಗೆ ಪೂಜೆಗೈದು ನಮಸ್ಕರಿಸುತ್ತಾನೆ.

ನಮಸ್ಕರಿಸಿ ಮರಳುವಾಗ ಮಲುಹಣಿಯ ರೂಪವನ್ನು ಕಂಡು ಎವೆಯಿಕ್ಕದೆ ನೋಡುತ್ತಾನೆ. ಅವಳ ಸುಂದರ ರೂಪವು ಆತನ 'ಕರಣವನೊಕ್ಕಲಿಕ್ಕಿ, ಭಾವಮಂ ಬರಿಕೈದು, ಚಿತ್ತಮಂ ತೊತ್ತಳಿದುಳಿದು, ಜೋಲ್ದು, ಝೊಂಪಿಸಿ ಮಿತ್ರರ ಮೇಲೆ ಮೆಯ್ಯನೀಡಾಡುತ್ತಾನೆ.' ಹೀಗೆ ಮೋಹಿತನಾದ ಮಲುಹಣನ ರೂಪವನ್ನು ಮಲುಹಣಿಯು 'ಭೋಂಕನೆ ನೋಡಿ, ಕಂಡು ಮನಂ ಬೆದರಿ, ಹೃದಯಂ ನಡುಗಿ, ತನುಬೆಮರ್ತುರ್ಗ, ಗತಿ ಸ್ಥಂಭಿಸಿ, ಪಾದಂ ಪೈಸರಂಬೋಗಿ, ಹಸ್ತಂ ಮಲಂಗಿ, ನೋಟ ಮಚ್ಚೊತ್ತಿ' ಮೂರ್ಛೆ ಹೋಗುತ್ತಾಳೆ. ಇದನ್ನು ಕಂಡ ಪದ್ಮಾವತಿಯು ಮಲುಹಣ ಮಲುಹಣಿಯರನ್ನು ಮನೆಗೆ ಕರೆದುಕೊಂಡು ಬರುತ್ತಾಳೆ.

ಪದ್ಮಾವತಿಯ ಮನೆಯಲ್ಲಿ ಅವರೀರ್ವರು ರತಿಸುಖದಲ್ಲಿ ಮಗ್ನರಾಗುತ್ತಾರೆ. 'ಸುಕುಮಾರಾಂಗಿಯೊಳೊಲ್ದು ನೆರೆವ ಸುಖಸಮಯದೊಳ್ ಕರುಣವೆಲ್ಲಂ ನೋಟ, ನೋಟವೆಲ್ಲಂ ನುಡಿ, ನುಡಿಯೆಲ್ಲಂ ವಿರಹ, ವಿರಹವೆಲ್ಲಂ ದೈನ್ಯ, ದೈನವೆಲ್ಲಂ ಸಾತ್ವಿಕಂ, ಸಾತ್ವಿಕವೆಲ್ಲಂ ಮೆಯ್, ಮೆಯ್ಯೆಲ್ಲಂ ಕೂಟಂ, ಕೂಟವಲ್ಲಂ ಮನಂ, ಮನವೆಲ್ಲಂ ಮೆಚ್ಚು, ಮೆಚ್ಚೆಲ್ಲಂ ಸೋಲಂ, ಸೋಲವೆಲ್ಲಂ ರಸಮಯವಾಗಿ' ಮಲುಹಣನು ದಿನಗಳನ್ನು ನಿಮಿಷಗಳಾಗಿ ಕಳೆಯುತ್ತಾನೆ. ತಂದೆ ತೆಗೆದಿಟ್ಟ ದಿನಕ್ಕೆ ಹತ್ತು ಸಾವಿರ ಹೊನ್ನಿನಂತೆ ನೂರವರುಷಕ್ಕಾಗುವಷ್ಟು ಧನವು ಹತ್ತು ವರ್ಷಗಳಲ್ಲಿ ತೀರಿಹೋಗುತ್ತಿದೆ. ಆದರೆ ಆತನ ಮನದಾಶೆ ತೀರುವುದಿಲ್ಲ. ಮಲುಹಣಿಯನ್ನು ಬಿಟ್ಟು ಅಗಲಲಾರದವನಾಗುತ್ತಾನೆ. ಪದ್ಮಾವತಿದೇವಿಗೆ ಹಣವಿಲ್ಲದ ಮಲುಹಣನು ಬೇಸರವಾಗುತ್ತಾನೆ. ಮಗಳ ಸಂಗದಿಂದ ಅವನನ್ನು ಅಗಲಿಸಲು ಪ್ರಯತ್ನಿಸುತ್ತಾಳೆ. 'ಎಲೆ ಮರುಳ್ಮಗಳೆ ಅರ್ಥಂ ತೀರ್ದುದು, ಜವ್ವನಂ ಸೋರ್ದುದು, ಇನ್ನೀ ಮಲುಹಣನಂ ಬಿಡು ಬಿಡು' ಎಂದು, ಮಲುಹಣಿಗೆ ಉಪದೇಶಿಸುತ್ತಾಳೆ. ಇದನ್ನು ಕೇಳಿದ ಮಲುಹಣಿಗೆ ನಡುಕ ಹುಟ್ಟುತ್ತಿದೆ. ತಾಯಿಯ ಮಾತನ್ನು ಆಕೆ ಕೇಳುವುದಿಲ್ಲ. ಹೀಗೆ ಕೆಲವು ದಿನಗಳು ಕಳೆಯುತ್ತಿವೆ. ಪದ್ಮಾವತಿಯು 'ಸೈರಿಸಲಾರದೆ ಮಲುಹಣನಂ ಸೆಜ್ಜೆಯೊಳ್ ಮೂದಲಿಸಿ, ನಿಂದಿರ್ದ ಎಡೆಯೊಳ್ ನೀರಂ ಚಲ್ಲಿ....ಔಡಂ ಕಚ್ಚಿ ವಿಳಾಸಿನಿಯರಂ ನಿಃಕಾರಣಂ ಬಡಿಮ, ಕಾಳ್ಗಗಳಮಂ ತೆಗೆದು, ಬೇನೆಯಿಲ್ಲದೆ ನರಳ್ದು, ಸಾವಿಲ್ಲದೆ ಶೋಕಂಗೈದು' ಮಲುಹಣನನ್ನು ಮನೆಯಿಂದ ಹೊರಗೆ ಹಾಕುತ್ತಾಳೆ.

ಮಲುಹಣನನ್ನು ಪದ್ಮಾವತಿಯು ಹೊರನೂಕಲು ಮಲುಹಣಿಯ ಮೇಲಿನ ಆತನ ಮೋಹ ಇನ್ನೂ ಹೆಚ್ಚುತ್ತಿದೆ. ಅವಳ ಮನೆಯ ಮುಂದೆ 'ಮರುಗಿ ಮನವುಕ್ಕಿ ತಲೆಗರೆದು ತಾಪಿಸುತ' ನಿಲ್ಲುತ್ತಾನೆ. ಎಲ್ಲಿಗೆ ಹೋಗಬೇಕೆಂಬುದು ತಿಳಿಯದಾಗುತ್ತಿದೆ. ವಿರಹವ್ಯಥೆಯಿಂದ ದಿಙ್ಮೂಢನಾಗುತ್ತಾನೆ; ಹುಚ್ಚನಂತಾಗುತ್ತಾನೆ. ತನ್ನಷ್ಟಕ್ಕೆ

ತಾನೇ ಒಮ್ಮೊಮ್ಮೆ ಮಾತಾಡುತ್ತಾನೆ. ಸುಮ್ಮಸುಮ್ಮನೆ ಅತ್ತಿತ್ತ ಅಡ್ಡಾಡುತ್ತಾನೆ. ಕುಳಿತಲ್ಲೆಲ್ಲ ಮಲುಹಣಿಯ ಧ್ಯಾನವೇ ಧ್ಯಾನ.

‘ ದಾರಿಯೊಳ್ ಬೀದಿಯೊಳ್ ಮಲುಹಣಿಯ ಕಳವಳಂ
ಕೇರಿಕೇರಿಗಳೊಳಗೆ ಮಲುಹಣಿಯ ಕಳವಳಂ
ಕಮಳಮಂ ಮಲುಹಣಿಯ ಮೊಗವೆಂದು ಮುಟ್ಟುವಂ
ಕುಮುದಮಂ ಮಲುಹಣಿಯ ಕಣ್ಗಳೆಂದಕ್ಷಿಯೊಳಗೊತ್ತುವಂ
ಮಧುಕರಂಗಳನಳಕವೆಂದು ತಲೆಯೊತ್ತುವಂ ’

ಜಗತ್ತಿನ ಸಚರಾಚರ-ಚೇತನಾಚೇತನ ವಸ್ತುಗಳಲ್ಲೆಲ್ಲ ಮಲುಹಣಿಯ ರೂಪವನ್ನೇ ಕಾಣುತ್ತಾನೆ. ಮಲುಹಣನ ಚಿತ್ತದಲ್ಲಿ ಮಲುಹಣಿಯ ಸುಂದರ ಚಿತ್ರ ಚಿರಸ್ಥಾಯಿಯಾಗಿ ನೆಲಸುತ್ತಿದೆ. ಅವಳ ಮೇಲಿನ ಮೋಹ ಕ್ಷಣಕ್ಷಣಕ್ಕೂ ಹೆಚ್ಚುತ್ತಿದೆ. ವಿರಹಿ ಮಲುಹಣನಿಗೆ ಬೆಳದಿಂಗಳು ಉರಿಬಿಸಿಲಿಗಿಂತ ಬಿಸಿಯಾಗುತ್ತಿದೆ. ಮಂದ ಮಾರುತವು ಮೈಗೆ ಕೊರೆದಂತಾಗುತ್ತಿದೆ. ಮುಟ್ಟಿದ ಮೃದುವಾದ ಚಿಗುರೆಲೆಗಳು ಚುಚ್ಚಿದಂತಾಗುತ್ತಿವೆ. ಮಲುಹಣಿಯ ವಿರಹತಾಪದಿಂದ ಬಾಡಿಹೋಗುತ್ತಾನೆ. ಮಲುಹಣಿಯ ಮನೆಯಮುಂದೆ ನಿಂತು ನಾನಾರೀತಿಯಾಗಿ ಪರಿತಪಿಸುತ್ತಾನೆ. ಮನದೊಳಗೆ ಕಣ್ಣೊಳಗೆ ಅವಳ ಕಳವಳವೇ ಹೆಚ್ಚಾಗುತ್ತಿದೆ. ಆಗ ಎಂಜಲು ಚೆಲ್ಲುವ ಒಂದು ಹೊಸ ಕುಳಿಯೊಳಗೆ ಮಧ್ಯರಾತ್ರಿಯವರೆಗೆ ನಿಂತಾಗ ‘ ಹಾ ಮಲುಹಣಿ ಮಲುಹಣಿ ’ ಎಂದು ಹಾರೈಸುತ್ತಾನೆ. ಈ ಮಾತು ಮಲುಹಣಿಗೆ ಕೇಳಿಸಿ ಮಲುಹಣನ ದನಿಯಿದೆಂದು ತಿಳಿದು ಅವನಲ್ಲಿಗೆ ಬಂದು ‘ ನೀನೇಕಿಲ್ಲಿ ನಿಂದಿರ್ದೆ ಪೋಗು ’ ಎಂದು ಮುಟ್ಟಿ ಕೈಗೊಡಹಿ ಹೋಗುತ್ತಾಳೆ. ಆಗ ಉರಿಯಲ್ಲಿ ತುಪ್ಪವನ್ನು ಎರೆದಂತೆ ಮಲುಹಣನ ವಿರಹಾಗ್ನಿ ಇನ್ನೂ ಪ್ರಜ್ವಲಿಸುತ್ತಿದೆ. ಆ ಮಹಾಕಾಳರಾತ್ರಿಯಲ್ಲಿ ಮಲುಹಣಿಯ ನೆನಹಿನಲ್ಲಿ ಅಲ್ಲಿಯೇ ನಿಲ್ಲುತ್ತಾನೆ. ಹಿಮದ ಘಟ್ಟಿಗಳು ಆತನ ಮೇಲೆ ಮುಸುಕುತ್ತಿವೆ.

‘ ಎಳೆಯ ಬೆಳ್ಳುಗಿಲೊಳಗೆ ಹೊಳೆವ ಪಾವಕನಂತೆ
ಹೊಳೆವಾಲಿ ಕಲ್ಲ ಮರೆಯೊಳಗಿರ್ಪ ರವಿಯಂತೆ
ಮುಟ್ಟಿದೊಡೆ ಕೈಕಡಿದು ಬೀಳ್ವ ತುಹಿನದ ನಡುವೆ
ನೆನೆದೊಡೆ ಮನಂ ಮುರುಂಟುವ ಸೀತಳದ ನಡುವೆ
ತನುಕರಗಿ ಕೋಡಿಸುವ ಬಹಳ ಸೀತದ ನಡುವೆ ’

ಮಲುಹಣನಿದ್ದನು. ವಿರಹಾಗ್ನಿಯಿಂದ ತಪ್ತನಾದ ಮಲುಹಣನಿಗೆ ಆ ಹಿಮವು ಶೀತೋಪಚಾರವಾದಂತಾಗುತ್ತಿದೆ.

ಹೀಗೆ ಬೆಳಗಿನವರೆಗೆ ಹಿಮದಲ್ಲಿ ಹುದುಗಿಕೊಂಡಿರುವ ಮಲುಹಣನನ್ನು ಮಲುಹಣಿ ಕಂಡು ‘ ಅಕಟಕಟ ಮಲುಹಣಂ ಹಿಮದೊಳ್ಮುರುಂಟಿದಂ, ಪಾಪಿ

ಎನಗೊಲ್ದುಂ ನೆರೆಮುಗ್ಗಿದಂ ' ಎಂದೆನ್ನುತ್ತಾ, ತನ್ನ ಗೆಳತಿಯರೊಡನೆ ಬಂದು ಅವನ ಸುತ್ತಲಿನ ಹಿಮವನ್ನು ತೆಗೆಯಿಸುತ್ತಾಳೆ.

' ಕಪಟವಳಿದೊಳಗೊಪ್ಪುವನುರಾಗವಿರ್ಪಂತೆ
ಯುಪಚಾರವಳಿದು ಸತ್ಯ ಸ್ನೇಹವಿರ್ಪಂತೆ '

ಇರುವ ಮಲುಹಣನನ್ನು ಕಂಡು ಮಲುಹಣಿಯ ಮನವು ಮರುಗಿ ಕರುಣೆಗೊಂಡು ದುಃಖಿಸುತ್ತಾಳೆ. ' ಎನ್ನ ಮೇಲಿಕ್ಕುವ ಈ ಚಿತ್ತದಾತುರತೆಯನ್ನು ಪನ್ನಗಾಭರಣನೊಳಗೆ ಇಡು. ಇಂದುಧರನನ್ನು ಬೇಡಿದರೆ ನಾನೊಬ್ಬಳೇ ಏಕೆ, ನನ್ನ ಸಮನಾದ ಕೋಟಿ ಮಲುಹಣಿಯರು ದೊರೆಯುತ್ತಾರೆ ಹೋಗು ' ಎಂದು ಉಪದೇಶಿಸುತ್ತಾಳೆ. ಈ ಉಪದೇಶ ಮಲುಹಣನ ಚಿತ್ತದಲ್ಲಿ ನಾಟುತ್ತಿದೆ.

' ಎನೆವಿರಹಮಂ ಕೆಗೆದು ಹರನ ಮೇಲಿಕ್ಕಿದಂ
ತನ ನೇಹಮಂ ಶಿವನ ಮೆಲ್ಲಡಿಗೆ ಸಾರ್ಚಿದಂ '

ಮಲುಹಣಿಯನ್ನು ಕುರಿತ ಕಾಮವು ಶಿವನ ಪ್ರೇಮವಾಗಿ ಮಾರ್ಪಡುತ್ತಿದೆ. ಭಕ್ತಿ ಉಕ್ಕುತ್ತಿದೆ. ಆತುರಚಿತ್ತನಾಗಿ ಶಿವನಿಳಯಕ್ಕೆ ಬಂದು ಶಿವನನ್ನು ಪ್ರಾರ್ಥಿಸುತ್ತಾನೆ. ಬಗೆಬಗೆಯಾಗಿ ಬೇಡಿಕೊಳ್ಳುವ ಮಲುಹಣನ ವಿರಹಸ್ತೋತ್ರಕ್ಕೆ ಮೆಚ್ಚಿ ಶಂಕರನು ವರವನೀಯಲು ಸಿದ್ಧನಾಗುತ್ತಾನೆ. ಮಲುಹಣನು ತನಗೆ ಮಲುಹಣಿಯನೀಯ ಬೇಕೆಂದೂ, ಅವಳೊಡನೆ ನೂರುವರ್ಷವಿದ್ದು ತನುಸಹಿತ ಇಬ್ಬರೂ ದೇವಲೋಕಕ್ಕೆ ಬರುವಂತೆ ಕರುಣಿಸಬೇಕೆಂದೂ ಕೇಳಿ ಎರಡು ವರಗಳನ್ನೂ ಪಡೆಯುತ್ತಾನೆ. ಮಲುಹಣ, ಮಲುಹಣಿಯರ ಮದುವೆಯು ಶಿವನ ಸಮಕ್ಷಮ ನೆರವೇರುತ್ತದೆ. ನೂರು ವರ್ಷಗಳವರೆಗೆ ಅವರಿಬ್ಬರೂ ಸುಖವಾಗಿರುತ್ತಾರೆ. ಶಿವನ ಸಾಕ್ಷಾತ್ಕಾರವಾಗುವ ಪೂರ್ವದಲ್ಲಿಯ ಅವರ ಜೀವನಕ್ಕೂ ತರುವಾಯದ ಜೀವನಕ್ಕೂ ಅಜಗಜಾಂತರ ವ್ಯತ್ಯಾಸವನ್ನು ನಾವು ಕಾಣುತ್ತೇವೆ. ತಮ್ಮ ಎಲ್ಲ ಭಾರವನ್ನೂ ಭಗವಂತನ ಮೇಲೆ ಹಾಕಿ ಬಾಳನ್ನು ಸಾಗಿಸುತ್ತಾರೆ. ಅವರ ಮಧುರ ಜೀವನದ ರೀತಿಯನ್ನು ಹರಿಹರನ ಮಾತಿನಲ್ಲಿಯೇ ಕೇಳಬೇಕು :

' ಕಾಮಮುಂ ಕ್ರೋಧಮುಂ ಶಂಕರಂಗರ್ಪಿತಂ
ನೇಮಮುಂ ಪ್ರೇಮಮುಂ ಶಶಿಧರಂಗರ್ಪಿತಂ
ಕೂಟಮುಂ ತೃಪ್ತಿಯುಂ ತ್ರಿಣಯನಿಂಗರ್ಪಿತಂ
ನೋಟಮುಂ ಬೇಟಮುಂ ಪುರಹರಂಗರ್ಪಿತಂ
ಕಂಡುದುಂ ಸೋಂಕಿದುಂ ಕಾಮಾರಿಗರ್ಪಿತಂ
ಕೊಂಡುದುಂ ಸವಿದುದುಂ ವಿಷಧರಂಗರ್ಪಿತಂ '

ಹೀಗೆ ಸರ್ವವನ್ನೂ ಶಿವಾರ್ಪಣ ಮಾಡಿ ನೂರು ವರುಷಗಳವರೆಗೆ ಇಹದಲ್ಲಿ ತುಂಬುಜೀವನವನ್ನು ಸಾಗಿಸಿ, ಆನಂದದಿಂದ ಕೈಲಾಸವನ್ನು ಸೇರುತ್ತಾರೆ. ಅಲ್ಲಿ ಶಿವನು,

'ತನ್ನ ವಿರಹವನೆನ್ನ ಮೇಲಿಟ್ಟರಿಂತುಂಟೆ'

ಎಂದು ಮುಂತಾಗಿ ದೇವಗಣದ ಮುಂದೆ ಹೊಗಳಿ, ಪಾರ್ವತಿಗೆ ತೋರಿ ಮಲುಹಣನಿಗೆ ಗಣಪದವಿಯನ್ನೂ, ಮಲುಹಣೆಗೆ ರುದ್ರಕನ್ನಿಕೆಯರ ಪದವಿಯನ್ನೂ ಕೊಡುತ್ತಾನೆ.

ದೀರ್ಘವಾಗಿರುವ ಹಾಗು ಪ್ರಾಚೀನ ಕಾವ್ಯಗಳ ಸಾಂಪ್ರದಾಯದ ವರ್ಣನೆಗಳನ್ನೊಳಗೊಂಡ ಈ ರಗಳೆಯು ಶೃಂಗಾರರಸಪೂರ್ಣವಾಗಿರುವದೂ ನಿಜ. ಆದರೆ ಇದರಲ್ಲಿಯ ಜೀವನದರ್ಶನವು ಉದ್ಬೋಧಕವೂ ಪ್ರಯೋಜನಕಾರಿಯೂ ಆಗಿದೆ. ತನಗಾಗಿ ತನ್ನವರಿಗಾಗಿ ಭವಿಷ್ಯದ ಯೋಜನೆಯನ್ನು ಹಮ್ಮಿ ಮಾನವನು ಸುಖಿಯೂ ನಿಶ್ಚಿಂತನೂ ಆಗಬೇಕೆನ್ನುತ್ತಾನೆ. ಈ ಮನೋವೃತ್ತಿಯು ನಿಷ್ಫಲತೆಯನ್ನು ನಾವು ಆಗಾಗ ಕಂಡುಕೊಂಡರೂ ಅವಕ್ಕೇ ಅಂಟಿಕೊಳ್ಳುವುದುಂಟು. ಎಲ್ಲ ಹೊಣೆಯನ್ನು ಪರಮಾತ್ಮನ ಮೇಲೆ ಹೊರಿಸುವುದೇ ಸಫಲವಾದ, ಸುಲಭವಾದ ಮಾರ್ಗವಾಗಿದೆ. ಈ ರಗಳೆಯಲ್ಲಿಯ ಸುವರ್ಣಭಟ್ಟನು ಮಗನಿಗಾಗಿ ಮಾಡಿಟ್ಟ ಹಣದ ಯೋಜನೆ ವ್ಯರ್ಥವಾಗುತ್ತಿದೆ. ಮಗನನ್ನು ಮುದ್ದಾಗಿ ನೋಡಿಕೊಂಡ ಮಾನಸಿಕ ಮಟ್ಟದ ವಾತ್ಸಲ್ಯ ತಪ್ಪುಹಾದಿಗೆ ಅವಕಾಶವನ್ನೊದಗಿಸಿದೆ. ಭಾವಪರಿಪುಷ್ಟಿ, ಕಲ್ಪನೆ, ವರ್ಣನೆ ಇವುಗಳ ಸೊಗಸಿನೊಂದಿಗೆ ಅರ್ಥವತ್ತಾದ ಸಂದೇಶವನ್ನೂ ಹರಿಹರನು ನಮಗೆ ಈ ರಗಳೆಯಲ್ಲಿ ಒದಗಿಸಿದ್ದಾನೆ. ಮಾನವನ ಚಿತ್ತದಾತುರದ ಸಹಜ ಸನ್ನಿವೇಶಗಳನ್ನು ಇಲ್ಲಿ ಸ್ವಾರಸ್ಯಕರವಾದ ರೀತಿಯಲ್ಲಿ ಬಣ್ಣಿಸಲಾಗಿದೆ. ವಿಷಯವಾಸನೆಯ ಉದಾತ್ತೀಕರಣವು ಮನವನ್ನು ಮುಟ್ಟುವಂತೆ ಹೃದಯವನ್ನು ತಟ್ಟುವಂತೆ ಸಹಜಸುಂದರವಾಗಿ ಅರ್ಥಪೂರ್ಣವಾಗಿ ನಿರೂಪಿತವಾಗಿದೆ. ಆಸೆಗಳನ್ನು ಪೂರೈಸುವಲ್ಲಿ ಸುಖವಿಲ್ಲ. ಆಸೆಗಳನ್ನು ಜಯಿಸುವಲ್ಲಿ ನಿಜವಾದ ಸುಖವಿದೆ. ಆದರೆ ಆಸೆಯ ಆಳದಲ್ಲಿ ಮುಳುಗಿದ ಮಲುಹಣನೂ ಬುದ್ಧಿಗಲಿಯಬೇಕಾಯಿತು. ವಿರಹಮಂ ತೆಗೆದು ಹರನ ಮೇಲಿಕ್ಕುವಂತಹ ಮಹತ್ವದ ಮಾರ್ಪಾಡು ಅವನ ಜೀವನದಲ್ಲಿ ನಡೆಯಿತು. ಮಾನವನ ಜೀವನದಲ್ಲಿ ಇಂತಹ ಮಾರ್ಪಾಡೇ ಜೀವನದ ಗುರಿಯಾಗಬೇಕು. ಕ್ಷಣಿಕವಾದ, ಖಂಡವಾದ ವಸ್ತುಗಳಿಗಾಗಿ ಹಾತೊರೆಯದೆ ಎಲ್ಲವನ್ನೂ ಒಳಗೊಳ್ಳುವ ಅಖಂಡಾನಂದದತ್ತ ನಮ್ಮ ಮನವು ಹರಿಯಬೇಕು. ಕಾಮ, ಕ್ರೋಧ, ನೇಮ, ಪ್ರೇಮ, ನೋಟ, ಬೇಟ— ಇವೆಲ್ಲವೂ ಶಂಕರಂಗರ್ಪಿತವಾಗಬೇಕು. ಇದುವೇ ಮಾನವಜೀವನದ ಗುರಿ, ಸಿದ್ಧಿ.

ದೈವೀಶಕ್ತಿಗಾಗಿ ಸ್ಪರ್ಧೆ

ಉದ್ಭಟದೇವ :

ಶಿವಭಕ್ತ ಉದ್ಭಟದೇವನು ಮೃಡನ ಮೂರ್ತಿಯನ್ನು ಹೃದಯಕಮಲದಲ್ಲಿಟ್ಟುಕೊಂಡು ತದೇಕಚಿತ್ತನಾಗಿ ಧ್ಯಾನಿಸುತ್ತಿದ್ದ.

'ಶಿವನೋಳ್ನೋಟಂ ಶಿವನೋಳ್ಕೂಟಂ
ಶಿವನೋಳ್ಮಾಟಂ ಶಿವನೋಳ್ಬೇಟಂ
ಹಾಡುವದೆಲ್ಲಂ ಸಕಲಸ್ತೋತ್ರಂ
ಮಾಡುವದೆಲ್ಲಂ ಪೂಜಾಸ್ತೋತ್ರಂ'

ಇಂತು ಮಹಾಶಿವಭಕ್ತನಾದ ಈತನಿಗೆ 'ನಾನಾ ಸಾಮರ್ಥ್ಯಂ'ಗಳು ಸಿದ್ಧಿಯಾಗುತ್ತಿವೆ. ಇವನ ಹೆಂಡತಿಯಾದರೂ ಮಹಾ ಪತಿಭಕ್ತೆ. ಶಿವಪೂಜಾನಿರತೆ. ಸತಿಪತಿಗಳಿಬ್ಬರೂ 'ತನುವೆರಡು, ಒಂದೇ ಜೀವವೆನಿಸಿ'ರ್ದರು. ಇಬ್ಬರೂ ಸುಖದಿಂದ ಜೀವನ ಸಾಗಿಸಿದ್ದರು.

ಒಂದು ದಿನ ಗಂಡಹೆಂಡರಿಬ್ಬರೂ ಲೆತ್ತದಾಟದಲ್ಲಿ ತಲ್ಲೀನರಾದ ಸಮಯದಲ್ಲಿ 'ಶಿವೈಕ್ಯಜ್ಞಾನಿ'ಯಾದ ಉದ್ಭಟದೇವನು ಒಮ್ಮೆಲೇ ನಸುನಗುತ್ತಾನೆ. ಪತಿಯ ನಸುನಗೆ ಸತಿಗೆ ವಿಚಿತ್ರವಾಗಿ ತೋರುತ್ತಿದೆ. ಮನದಲ್ಲಿ ಮುನಿದು, ಬಸವಳಿದು 'ನನ್ನಲ್ಲಿ ಯಾವ ಕುಂದನ್ನು ಕಂಡು ನಸುನಕ್ಕಿರಿ ?' ಎಂದು ಪತಿಯನ್ನು ಕೇಳುತ್ತಾಳೆ. 'ನಾನು ನಿನ್ನನ್ನು ಕಂಡು ನಗಲಿಲ್ಲ. ಸೌರಾಷ್ಟ್ರದೊಳಗಿದ್ದ ಓಹಿಲದೇವನೆಂಬ ಭಕ್ತನು ಶಿವನನ್ನು ಒಲಿಸಿ, ಪರದೇಶಿಯಂತೆ ಒಬ್ಬನೇ ಶರೀರಸಹಿತ ಗಂಟೆ ಬಾರಿಸುತ್ತ ನಂಟರನ್ನು ಬಿಟ್ಟು ಕೈಲಾಸಕ್ಕೆ ಹೋದುದನ್ನು ಕಂಡು ನಕ್ಕೆ' ಎಂದು ಉತ್ತರಿಸುತ್ತಾನೆ. ಹೀಗೆಂದಕೂಡಲೇ ಚತುರೆಯಾದ ಅವನ ಸತಿ,

'ನಗೆಯೊಪ್ಪುವುದೀ ಪುರಸಹಿತೊಯ್ದಡೆ
ನಗೆ ಸಫಲಂ ನಗುವಂದದೊಳೊಯ್ದಡೆ'

ಎಂದು ಚುಚ್ಚುಮಾತನಾಡುತ್ತಾಳೆ. ಆಗ ಉದ್ಭಟದೇವನಿಗೆ ಹೇವವಾವರಿಸುತ್ತಿದೆ. 'ಸೋಮವಾರ ಪುರಸಹಿತ ಕೈಲಾಸಕ್ಕೆ ಹೋಗುತ್ತೇ'ನೆಂದು ಪಣತೊಡುತ್ತಾನೆ. ಸತಿಯು 'ನಿನಗೆ ಇದು ಸಾಧ್ಯವಿಲ್ಲ'ವೆನ್ನುವ ರೀತಿಯಲ್ಲಿ ಅಣಕಿಸುತ್ತಾಳೆ. ಹೆಂಡತಿಯ ಅಣಕದ ನುಡಿಯಿಂದ ಉದ್ಭಟದೇವನ ಪ್ರತಿಜ್ಞೆ ಇನ್ನೂ ಚೆಲ್ಲವರಿಯುತ್ತಿದೆ. ಪ್ರತಿಜ್ಞೆಯನ್ನು ಕೇಳಿ, ಪಾಪಿಗಳು, ನಿಷ್ಪಾಪಿಗಳು, ತಾಪತ್ರಯದಿಂದ ಬೇವವರು–ಎಲ್ಲರೂ ತಂಡತಂಡವಾಗಿ ಬಂದು ಸೇರುತ್ತಾರೆ. ಅವನು ಹೇಳಿದ ಸೋಮವಾರ ಬರುತ್ತಿದೆ. ಸರಿ ; ಉದ್ಭಟದೇವನು ಶಿವನನ್ನು ನೆನೆಯುತ್ತಾ ಶಿವಾಲಯಕ್ಕೆ ಬರುತ್ತಾನೆ. ಭಸ್ಮ, ರುದ್ರಾಕ್ಷಿಗಳನ್ನು ಧರಿಸಿ, ಶಿವಲಿಂಗಕ್ಕೆ ಪರಿಮಳಪೂಜೆಮಾಡಿ, ಧೂಪಾರತಿ ಎತ್ತಿ, ನೈವೇದ್ಯಮಾಡಿ, ತಾಂಬೂಲಕೊಟ್ಟು ಎದುರಿಗೆ ಧ್ಯಾನಾಸಕ್ತನಾಗುತ್ತಾನೆ :

'ಹರನಂ ಚಿತ್ತದೊಳಿರಿಸುತ್ತಿರ್ದಂ
ಹರಲೀಲೆಯನುದ್ಯೋಗಿಸುತಿರ್ದಂ
ಸ್ವೇದಂ ಗದ್ಗದಮುಣ್ಮುತ್ತಿರೆ ಇರೆ
ಸಾದರದಿಂ ಪುಳಕದಿ ನೆಗೆಯುತ್ತಿರೆ
ಆನಂದಜಲಂ ಕೋಡಿಗೊಳುತ್ತಿರೆ'

ಮೃಡನ ಮೂರ್ತಿಯನ್ನು ಕೊಂಡಾಡತೊಡಗುತ್ತಾನೆ. ಆತನ ಭಕ್ತಿಯ ಮಹಿಮೆಗೆ ಪುರವು ಜನಸಹಿತ ನಭಕ್ಕೇರುತ್ತಿದೆ. ಶಿವನನ್ನು ಮುಡಿಯಿಂದ ಅಡಿಯವರೆಗೆ ವರ್ಣಿಸು ವಷ್ಟರಲ್ಲಿ ಕೈಲಾಸವನ್ನು ಸೇರುತ್ತಿದೆ.

‘ ಪುರಸಹಿತಂ ನಡೆತಂದವರುಂಟೇ
ತರುಣಿಯ ನುಡಿಯುಂ ಸಲಿಸಿದರುಂಟೇ ’

ಎಂದು ಪರಮೇಶ್ವರನು ಪಾರ್ವತಿ ಎದುರು ಉದ್ಭಟದೇವನ ಮಹಿಮೆಯನ್ನು ವರ್ಣಿಸಿ ಆತನಿಗೆ ಕರುಣೆದೋರುತ್ತಾನೆ.

ಪರಮಸುಖ ತನಗೊಬ್ಬನಿಗೆ ಮಾತ್ರವಲ್ಲವೆಂದು ಭಾವಿಸಿ ತನ್ನ ಇಡಿಯ ಪುರ ವನ್ನೇ ಕೈಲಾಸಕ್ಕೆ ಒಯ್ಯುವವನೀತ. ದೈವೀಕೃಪೆಯಿಂದ ಮಾನವನು ಶಕ್ತಿಯ ಎಲ್ಲೆ ಯನ್ನು ಮೀರಬಲ್ಲನೆಂಬುದು ಇಲ್ಲಿಯ ದೃಷ್ಟಿಯಾಗಿದೆ. ಸಹಜ ದಾಂಪತ್ಯಜೀವನ ದೊಂದಿಗೆ ಈಶ್ವರನ ಭಕ್ತಿಯನ್ನು ಅಳವಡಿಸಿಕೊಂಡು ತನ್ಮೂಲಕ ಆತ್ಮಶ್ರದ್ಧೆಯಿಂದ ಅತಿಮಾನುಷಶಕ್ತಿಯನ್ನು ಪಡೆಯುವ ಚಿತ್ರವನ್ನು ಹರಿಹರನು ಈ ರಗಳೆಯಲ್ಲಿ ಕೊಟ್ಟಿ ದ್ದಾನೆ.

ಹಲಾಯುಧ :

ನವಗ್ರಾಮಪುರದ ಹಲಾಯುಧನೆಂಬ ಶಿವಭಕ್ತನು ನಿತ್ಯವೂ ಶಿವಲಿಂಗಕ್ಕೆ ‘ ಮಜ್ಜನಕೆರೆದು ’

‘ ಕುಣಿಯುತ್ತೆ ಮಣಿಯುತ್ತೆ ಧೂಪಮಂ ನಲಿದಿತ್ತು
ತಣಿಯುತ್ತೆ ತೂಗುತ್ತೆಯಾರತಿಗಳಂ ಪೊತ್ತು
ಆರೋಗಣೆಯನಿತ್ತು ವೀಳೆಯಂಗಳನಿತ್ತು........
ಪೊಸಗಬ್ಬಮಂ ಗದ್ಯಪದ್ಯಂಗಳಂ ಪೇಳ್ದು ’

ಹರುಷದಿಂದ ಸದ್ಭಕ್ತಿಯುತನಾಗಿ ಶಿವಾರಾಧನೆಯನ್ನು ಮಾಡುತ್ತಿದ್ದ. ಆತನ ಸದ್ಭಕ್ತಿ ಸದಾಚಾರಗಳ ಕೀರ್ತಿ ಆ ನವಗ್ರಾಮದ ಪ್ರಭುಗಳ ಕಿವಿಯವರೆಗೂ ಹಬ್ಬಿತು. ಸಂತೋಷಿತರಾದ ಪ್ರಭುಗಳು ‘ ಒಂದೂರ್ಗೆ ’ ಬಂದು ಸೇರುತ್ತಾರೆ; ಇನ್ನಿತರ ಭಕ್ತರೂ ಕೂಡುತ್ತಾರೆ. ಎಲ್ಲರೂ ಹಲಾಯುಧನೊಂದಿಗೆ ಶಿವಗೋಷ್ಠಿಯನ್ನು ಪ್ರಾರಂಭಿಸುತ್ತಾರೆ. ಗೋಷ್ಠಿಯು ಸ್ವಾರಸ್ಯವಾಗಿ ನಡೆದಿರಲು ‘ ಹರಭಕ್ತರಲ್ಲಿ ಅಧಿಕ ರಾರು ? ’ ಎಂಬ ಪ್ರಶ್ನೆ ತಲೆದೋರುತ್ತಿದೆ. ನೆರೆದ ಭಕ್ತರೆಲ್ಲ,

‘ ಓಹಿಲಯ್ಯಂ ಶರೀರಂ ಬೆರಸು ಪೋಗಲ್ಕೆ
ಸಾಹಸದೆ ನಸುನಗುತ ಪುರಸಹಿತ ಪೋಗಲ್ಕೆ
‘ ಉದ್ಭಟಂಗಲ್ಲದಿನ್ನುಳಿದರ್ಗೆ ತೀರ್ವುದೇ ’

ಎಂದು, ಕೈಲಾಸಕ್ಕೆ ಹೋದ ಓಹಿಲಯ್ಯ, ಉದ್ಭಟರನ್ನು ಹೊಗಳುತ್ತಾರೆ. ಅವರ ಸದ್ಭಕ್ತಿಯನ್ನು ಕೊಂಡಾಡುತ್ತಾರೆ. ಇದನ್ನು ಕೇಳಿದ ಹಲಾಯುಧನು ಮನದಲ್ಲಿಯೇ

ಉಬ್ಬಸಗೊಂಡು 'ಶಿವನು ಒಲಿದರೆ ಪುರವನ್ನು ಕೈಲಾಸಕ್ಕೊಯ್ಯುವದೇನು ಮಹಾ; ಶಿವಕಾರುಣ್ಯವುಳ್ಳೊಡೆ ಇವೆಲ್ಲ ಸುಲಭಸಾಧ್ಯ' ಎನ್ನಲು ನವಗ್ರಾಮದ ಪ್ರಭುಗಳು,

'ಉದ್ಘಟನನಾಳಿಗೊಳ್ವಂ ಹಲಾಯುಧ ನಿನಗೆ
ಸದ್ಭಕ್ತನಪ್ಪ ನೆರೆ ಕೊರತೆಯುಂಟೇ ನಿನಗೆ....
ಎಮ್ಮೀ ನವಗ್ರಾಮಮುಮಂ ಒಯ್ಯುದಿರ್ಪಿರೇ
ಎಮ್ಮೆಲ್ಲರಂ ಶಿವನ ಮುಂದಿರಿಸದಿರ್ಪಿರೇ'

ಎಂದು ಚುಚ್ಚುಮಾತುಗಳನ್ನಾಡುತ್ತಾರೆ. ಅದಕ್ಕೆ ಹಲಾಯುಧನು ಇವು 'ನಿಮ್ಮ ನುಡಿಯಲ್ಲ, ಶಿವನ ಪ್ರೇರಣೆ' ಎಂದೆನ್ನುತ್ತಾನೆ; 'ನವಗ್ರಾಮ ಸಹಿತ ನಾಳೆ ಕೈಲಾಸಕ್ಕೆ ಒಯ್ಯುವೆ'ನೆಂದು ಪ್ರತಿಜ್ಞೆಯನ್ನೂ ಮಾಡುತ್ತಾನೆ. ಅಂದು ಶಿವರಾತ್ರಿಯನ್ನು ಮಾಡಿ 'ಬೆಳಗಾಗೆ ಭಸಿತೋದ್ಧೂಳನಂ' ಮಾಡಿಕೊಂಡು ಮೃಡನಾಲಯಕ್ಕೆ ಬರುತ್ತಾನೆ.

'ಬಂದು ಶಿವನಂ ನೋಡಿ ಶಂಕರಾ ಶಶಿಧರಾ
ಇಂದೆನಗೆ ಕರುಣಿಪುದು ಗಿರಿಜಾಮನೋಹರಾ
ದೇವನೀಂ ಕರುಣಿಸಿದೊಡೆನಗೆ ತೀರದುದುಂಟೆ
ದೇವನೀಂ ಕೃಪೆ ಮಾಡಲಾವುದೊಂದರಿದುಂಟೆ
ಕರುಣಿಸಲಿರುಂಪೆಯುದು ಬ್ರಹ್ಮನಾಗದೆ ದೇವಾ'

ಎಂದು ಏಕಚಿತ್ತನಾಗಿ ಶಿವಧ್ಯಾನ ಮಾಡುತ್ತಿರಲು ನವಗ್ರಾಮಗಳು ಆಕಾಶಕ್ಕೇರುತ್ತಿವೆ. ಹಲಾಯುಧನ ಭಕ್ತಿಯ ಸಾಮರ್ಥ್ಯವನ್ನು ಕಂಡು ಲೋಕದ ಜನರು ಕೌತುಕಂಗೊಂಡು ತಲೆದೂಗುತ್ತಾರೆ. 'ಸುಖಗೋಷ್ಠಿ ಎತ್ತ? ಮಾತಿನ ಮಾತು ತಾನೆತ್ತ? ನಿಖಿಳವರಿಯಲ್ ನವಗ್ರಾಮಮೇರುವುದೆತ್ತ? ಆಹಾ, ಹಲಾಯುಧನ ಭಾಷೆ ಭಕ್ತಿಗೆ ಲೇಸೆಂ'ದು ಮೆಚ್ಚಿ ಕೊಂಡಾಡುತ್ತಾರೆ. ನೋಡುನೋಡುವಷ್ಟರಲ್ಲಿ ಸತ್ಯಶರಣ ಹಲಾಯುಧನ ಸಾಮರ್ಥ್ಯದಿಂದ ನವಗ್ರಾಮಗಳು ದೇವಲೋಕವನ್ನು ತಲಪುತ್ತಿವೆ. ಏಕನಿಷ್ಠೆಗೂಡಿದ ಭಕ್ತಿಯುಕ್ತನನ್ನು ಕಂಡು ಶಿವನಿಗೂ ಹಿಡಿಸಲಾರದ ಹಿಗ್ಗು.

'ಒಂಭತ್ತು ಪುರವರ್ಗ ಸಹಿತ ಬಂದವರುಂಟೆ
ಅಂಬರದ ಬಟ್ಟೆಯೊಳ್ ನಂಬಿ ಬಂದವರುಂಟೆ
ಎನ್ನಭಕ್ತರ್ಗೆ ಮೂದಲೆ ಮಾತು ಸೈರಿಪುದೆ
ಎನ್ನಭಕ್ತರ್ಗೆ ಕಪಟಂಗಳುಂ ಸೈರಿಪುದೆ
ಎನ್ನಭಕ್ತರ್ಗೆ ಹಿಂದೊಂದು ಮುಂದೊಂದುಂಟೆ
ಎನ್ನಭಕ್ತರ್ಗೆ ಪುಸಿಗಳ ಪಸರವೇಸುಂಟೆ
ನವವಿಧಂ ನವಪೂಜೆ ನವನವ ಪ್ರೇಮವಿದೆ
ನವರಸಾನ್ನವು ಭಕ್ತಿ ನವನವ ಗ್ರಾಮವಿದೆ'

ಎಂದು ಪರಮೇಶ್ವರನು ಹಲಾಯುಧನನ್ನು ಹೊಗಳಿ, ಎತ್ತಿ, ಮೈದಡವಿ ಮುಕ್ತಿಯನ್ನೀಯುತ್ತಾನೆ. ನವಗ್ರಾಮಗಳನ್ನೂ ತನ್ನ ಭಕ್ತಿಯಿಂದ ಶಿವನ ಶಕ್ತಿಯಿಂದ ಕೈಲಾಸಕ್ಕೆ ಒಯ್ದವನೀತ. ಮಾನವರ ಮೂದಲೆವಾತು ಶಿವನ ಪ್ರೇರಣೆಯೆಂದು ಸ್ವೀಕರಿಸುವ ದೃಷ್ಟಿಯು ಜೀವನದಲ್ಲಿ ಹಿತಕಾರಿಯಾಗಬಲ್ಲದು. ದೇವ ಕರುಣಿಸಿದೊಡೆ ತೀರದದು ಏನುಂಟು ? ಶ್ರದ್ಧೆಯಿಂದ, ಭಕ್ತಿಯಿಂದಂ ಏನೆಲ್ಲವನ್ನೂ ಸಾಧಿಸಬಹುದು. ಮಾನವನ ಶಕ್ತಿ ಅಲ್ಪವಾದುದೇನೋ ನಿಜ. ಆದರೆ ದೇವನ ಶಕ್ತಿಯೊಂದಿಗೆ ಆ ಅಲ್ಪಶಕ್ತಿಯನ್ನು ಸಂಯೋಜಿಸಬಲ್ಲ ಭಕ್ತರ ಶಕ್ತಿಗೆ ಇತಿಮಿತಿಯಿಲ್ಲವೆಂದು ಹರಿಹರನು ಸ್ಪಷ್ಟವಾಗಿ ನಂಬಿದ್ದ.

ಮಳೆಯರಾಜ :

ಮಳೆಯವತಿ ಪಟ್ಟಣದ ಭೂಪ ದೇವರಾಜ ; ಅವನ ಸತಿ ಶಚಿ. ದೇವರಾಜನಿಗೆ ಎಲ್ಲ ಸಂಪತ್ತಿದ್ದರೂ ಆತ ನಿಪುತ್ರಿಕ. ರಾಜ ರಾಣಿಯರಿಬ್ಬರೂ ಶಿವಭಕ್ತರು. 'ಸುತನ ಬಯಕೆ ಭಾವದೊಳಗೆ ಸುಳಿದು ಬೆಳೆದು' ತನ್ನ ಸತಿಯೊಂದಿಗೆ ದೇವರಾಜನು ಚಂದ್ರಧರನನ್ನು ಪೂಜೆಗೆಯ್ಯುತ್ತಾನೆ. ಆತನ ಭಕ್ತಿಗೆ ಶಿವನು ಪ್ರತ್ಯಕ್ಷನಾಗಿ 'ನೂರು ವರುಷ ಬಾಳ್ವ ಮೂರ್ಖನಪ್ಪ ಕಂದ ಬೇಕೋ ಅಥವಾ ಸರ್ವಕುಶಲನಾದ ಹದಿನಾರು ವರುಷಗಳ ಆಯುಷ್ಯವುಳ್ಳ ಮಗನು ಬೇಕೋ' ಎಂದು ಕೇಳುತ್ತಾನೆ. ರಾಜನು ಷೋಡಶಾಯುವೆನಿಪ ಮಗನನ್ನೇ ಪಡೆದುಕೊಳ್ಳುತ್ತಾನೆ. ಅವನೇ 'ಮಳೆಯರಾಜ.' 'ಸುರತರುವಿನಂಕುರದಂತೆ, ಪುಣ್ಯದ ಕೊನರಿನಂತೆ, ಭಕ್ತಿಯ ಕುಸುಮದಂತೆ, ಮುಕ್ತಿಯ ಫಲದಂತೆ, ಬಾಲಚಂದ್ರನಂತೆ, ಕಳಹಂಸನಂತೆ, ಕಾಮಧೇನುವಿನ ವತ್ಸನಂತೆ, ಪರುಷದ ಮರಿಯಂತೆ, ಮಳೆಯರಾಜದೇವನು ನಳನಳಿಸಿ ಬೆಳೆದನು'. ಶಸ್ತ್ರ, ಶಾಸ್ತ್ರ, ಸಂಗೀತ–ಸಾಹಿತ್ಯ, ಕಾವ್ಯ, ನಾಟಕ ಮುಂತಾದ ಸಕಲಕಲೆಗಳಲ್ಲಿ ಪರಿಣತನಾದನು. ಹದಿನೈದು ವರ್ಷ ತುಂಬಿದವು. ಆದರೆ ಸದ್ಗುಣಸಂಪನ್ನನೂ, ವಿದ್ಯಾಪರಿಣತನೂ ಆದ ತಮ್ಮ ಮಗನು ಇನ್ನೊಂದು ವರ್ಷಕ್ಕೆ ಸಾಯುವನಲ್ಲಾ ಎಂಬ ಚಿಂತೆ ದಂಪತಿಗಳನ್ನು ಆವರಿಸುತ್ತಿದೆ. ಕಣ್ಣೀರನ್ನು ಮಿಡಿಯುತ್ತಾರೆ. ಅದರ ಕಾರಣವನ್ನು ತಿಳಿದುಕೊಂಡು ಮಳೆಯರಾಜನು 'ಇದಕ್ಕಿನಿತೇಕೆ, ಕೊಟ್ಟ ಶಿವನಿರ್ದಪಂ, ಪಡೆದವರ್ ನೀವಿರ್ದಿಪಿರಿ, ಪುಟ್ಟಿದವಂ ನಾನಿರ್ದಪೆಂ, ಇನ್ನೊಂದು ವರುಷವಿರ್ದಪುದು, ಶಿವಂ ಕರುಣಿ, ಎನಗೆ ಸಾವಿಲ್ಲ' ಎಂದು ಹೇಳಿ ತಂದೆ ತಾಯಿಗಳನ್ನು ಸಂತೈಸುತ್ತಾನೆ.

ಸರಿ ವರ್ಷವೂ ಮುಗಿಯುತ್ತ ಬರುತ್ತಿದೆ. ಕೊನೆಯದಿನ ಮಳೆಯರಾಜನು ಶುದ್ಧಾಂಗನಾಗಿ ಭಸ್ಮ, ರುದ್ರಾಕ್ಷಿಗಳನ್ನು ಧರಿಸಿಕೊಂಡು ಪತ್ರ, ಪುಷ್ಪ, ಕುಂಕುಮ, ಧೂಪ, ತಾಂಬೂಲಾದಿ ಪೂಜಾಸಾಮಗ್ರಿಗಳನ್ನು ತೆಗೆದುಕೊಂಡು ಶಿವನನ್ನು ಭಕ್ತಿಯಿಂದ ಪೂಜಿಸುತ್ತಾನೆ. 'ಕಣ್ತೀವಿ ನೋಡಿ, ಮನಂತೀವಿ ನೆನೆದು, ಭಾವಂತೀವಿ ಬರಿಸಿ, ಮೈತೀವಿ ಪುಳಕಮನಾಂತು ನಾಲಗೆ ತೀವಿ ಬಣ್ಣಿಸಲು' ಪ್ರಾರಂಭಿಸುತ್ತಾನೆ. ಶಿವನು

ಈತನ ಭಕ್ತಿಭಾವಕ್ಕೆ ಮೆಚ್ಚಿ ಭಕ್ತನಲ್ಲಿಗೆಯ್ದಿ ನಡೆದು ಬಂದು 'ಬೇಡು ಮಳೆಯರಾಜ ಬೇಡಿಕೊಳ್ಳು ನೆನೆದುದೀವೆ' ಎನ್ನುತ್ತಾನೆ. ಮಳೆಯರಾಜನು,

'ದೇವ ಮಾತೃ ಪಿತರ ಮನದ ಮಾಯೆಯುಂ ಸಡಿಲ್ಚಿಕಳೆದು
ದೇವಯೆನಗೆ ಕರುಣಿಪುದು ಶತಾಯುವಂ ದಯಾಳು ತಿಳಿದು
ದೇವ ಮಾತೃಪಿತರನಾಥ ಬಂಧುವರ್ಗವೆಲ್ಲ ಸಹಿತ
ದೇವ ಬಾಲವೃದ್ಧರೆನ್ನದೆನ್ನ ದೇಶವೆಲ್ಲ ಸಹಿತ
ಈಶ ಕರುಣಿಸೆನ್ನ ರಥಪದಾತಿ ಸರ್ವ ರಾಜ್ಯಸಹಿತ
ದೇಶದೊಳಗೆ ಬಾಳುತಿರ್ಪ ಮೃಗಕುಲಂಗಳೆಲ್ಲ ಸಹಿತ
ಆನೆ ಮೊದಲಿರುಂಪೆ ಕಡೆಯೆನಿಪ್ಪ ಜೀವರಾಶಿ ಸಹಿತ
....ಮುಂದೆ ನೂರುವತ್ಸರಂ ಬರ್ದುಂಕಿ ಪೂಜೆಗೈದ ಬಳಿಕ'

ರಜತಗಿರಿಗೆ ಕೊಂಡು ಪೋಗುವಂತೆ ವರವನ್ನೀಯಬೇಕೆಂದು ಬೇಡಿಕೊಳ್ಳುತ್ತಾನೆ.

ಶಿವನು ಕೊಟ್ಟ ವರದಂತೆ ಮಳೆಯರಾಜನು ನೂರು ವರ್ಷ ಆಯುಷ್ಯ ತೀರುವವರೆಗೆ ಭಕ್ತಿಸಂಪನ್ನನಾಗಿ, ರಾಜ್ಯವಾಳುತ್ತಾನೆ. ಇಡೀ ದೇಶವನ್ನೇ ಭಕ್ತಿಯ ಭಂಡಾರವನ್ನಾಗಿ ಮಾಡುತ್ತಾನೆ. ಮೃತ್ಯುಲೋಕದೊಳಗೆ ರುದ್ರಲೋಕವಿರ್ಪಂತೆ, ಆತನ ದೇಶ ಕಂಗೊಳಿಸುತ್ತಿದೆ. ಆತನ ದೇಶದಲ್ಲಿ ಎಲ್ಲಿನೋಡಿದಲ್ಲಿ ಶಿವಪೂಜೆ, ಶಿವಾನುಭವ ಗೋಷ್ಠಿಗಳೇ.

'ಮನೆಗಳೊಳಗೆ ಶಿವನ ಪೂಜೆ ಕೇರಿಯೊಳಗೆ ಶಿವನ ಪೂಜೆ
ಘನ ಪುರಂಗಳೊಳಗೆ ಕೂಡೆ ನೋಡೆ ಚಂದ್ರಚೂಡ ಪೂಜೆ
ಪಟ್ಟಣಂಗಳೊಳಗೆ ನೋಡೆ ದಿಟ್ಟ ಮೂರರವನ ಪೂಜೆ
ಬಟ್ಟೆಯೂರೊಳೆಲ್ಲ ಶಿವನ ನಿಷ್ಠೆ ಬಲದ ಭಾವ ಪೂಜೆ
ಆನೆಗೆಲ್ಲ ಜ್ಞಾನ ಪೂಜೆ ಕುದುರೆಗೆಲ್ಲ ಧ್ಯಾನ ಪೂಜೆ
ಸೇನೆಗೆಲ್ಲ ಶಿವನ ಪೂಜೆ ಕಾಣ್ಬುದೆಲ್ಲ ಹರನ ಪೂಜೆ
ಕೇಳ್ವುದೆಲ್ಲ ಶಿವನ ಪೂಜೆ ಮಾಳ್ಪುದೆಲ್ಲ ಶಿವನ ಪೂಜೆ
ಬಾಳ್ವುದೆಲ್ಲ ಶಿವನ ಪೂಜೆ ಬಯಸಿತೆಲ್ಲ ಶಿವನ ಪೂಜೆ
ಜಾವವಿಲ್ಲ ಘಳಿಗೆಯಿಲ್ಲ ದಿವಸವಿಲ್ಲ ನಿತ್ಯಪೂಜೆ
ಆವ ನೇಮವಿಲ್ಲ ಸಂಶಯಂಗಳಿಲ್ಲ ನಿಜದ ಪೂಜೆ'

ಮಳೆಯರಾಜನ ದೇಶದ ಸಚರಾಚರ ವಸ್ತುಗಳಿಗೆಲ್ಲ 'ನಿಚ್ಚ ನಿಚ್ಚ ಶಿವರಾತ್ರಿ' ದಿನದಿನವೂ ಪೂಜೆ! ಬಿಟ್ಟೂಬಿಡದ ಪೂಜೆ! ಹರಿಹರನ ಪ್ರಪಂಚದಲ್ಲಿ ಆನೆಗೆ ಜ್ಞಾನ ಪೂಜೆ; ಕುದುರೆಗೆ ಧ್ಯಾನಪೂಜೆ. ಕಡೆಗೆ ಪೂಜೆಯ ಮಹತಿಯಿಂದಾಗಿ ಸಕಲ ಜೀವ ರಾಶಿಯೊಂದಿಗೆ ದೇಶವೆಲ್ಲ ಶಿವಸಾಯುಜ್ಯವನ್ನು ಸೇರುತ್ತದೆ.

'ಕೊಟ್ಟ ಶಿವನಿರ್ದಪಂ; ಶಿವಂ ಕರುಣಿ' ಎಂಬ ಸೂತ್ರವನ್ನು ನಾವು ಜೀವನ

ದಲ್ಲಿ ಅಳವಡಿಸಿಕೊಂಡರೆ ಮಾನವಜೀವನವು ಆನಂದದ ಬುಗ್ಗೆಯೇ ಆಗಬಲ್ಲದು. ಮರಣದ ಭೀತಿಗೆ ಕಾರಣವೇ ಇಲ್ಲ. ಶಿವಭಕ್ತಿಯ ತಲ್ಲೀನತೆಯ ಎದುರಿನಲ್ಲಿ ಪ್ರಕೃತಿ ನೇಮಗಳೂ ಕಳಚಬಲ್ಲವು. ಶಿವನ ವರದಾನ ದೊರೆಕೊಳ್ಳುವುದು. ದೇಶದೊಳಗಿರ್ಪ ಮೃಗಕುಲಂಗಳೆಲ್ಲಕ್ಕೆ, ಆನೆ ಮೊದಲಾಗಿ ಇರುವೆ ಕಡೆಯಾಗುವಂತೆ ಎಲ್ಲ ಜೀವಿಗಳಿಗೆ, ದೈವೀಸಂಪರ್ಕವೊದಗಬಲ್ಲದು. ಕೇಳ್ವುದೆಲ್ಲ ಶಿವನ ಪೂಜೆ, ಮಾಳ್ಪುದೆಲ್ಲ ಶಿವನ ಪೂಜೆ, ಬಾಳ್ವುದೆಲ್ಲ ಶಿವನ ಪೂಜೆ, ಬಯಸಿತೆಲ್ಲ ಶಿವಪೂಜೆ—ಆಗುವುದರಲ್ಲಿಯೇ ಮಾನವ ಜೀವನದ ಸಫಲತೆಯಿದೆ. ಸಕಲ ಜೀವಿಗಳಿಗೂ ಲೇಸನು ಪಡೆಯುವ ಮಳೆಯರಾಜನ ಮಾರ್ಗವಿದು. ಹರಿಹರ ಕವಿಯ ತತ್ತ್ವದರ್ಶನವಿದು.

ಅಮರನೀತಿ :

ಓಹಿಲಯ್ಯನು ದೇಹಸಹಿತ ಕೈಲಾಸಕ್ಕೆ ಹೋದರೆ ಉದ್ಭಟದೇವನು ತನ್ನ ಪುರ ಸಹಿತ ಹೋದನು. ಹಲಾಯುಧನು ನವಗ್ರಾಮ ಸಹಿತ ರಜತಗಿರಿಯನ್ನೇರಿದ. ಮಳೆಯ ರಾಜನಂತೂ ತನ್ನ ಇಡೀ ದೇಶವನ್ನೇ ಸುವರ್ಣಗಿರಿಗೆ ಒಯ್ದ. ಇಂತಹ ಸ್ಪರ್ಧೆಯಂತೂ ಇರಲಿ, ತಕ್ಕಡಿಯ ಪರಡಿಯಲ್ಲಿಯೇ ದೇವನೊಂದಿಗೆ ಕೈಲಾಸಕ್ಕೆ ಬಿಜಯಂಗೈದ ಭಕ್ತ, ಅಮರನೀತಿ.

ಅಮರನೀತಿ ತಿರುನಲ್ಲೂರಿನ ಮಹಾ ಶಿವಭಕ್ತ. ‘ ವಸ್ತ್ರಕ್ಕೆ ಸುಲಭ ಮುಪ್ಪುದು ಭಕ್ತಿ ದಾಸನಿಂ, ವಸ್ತ್ರವಿತ್ತೊಡೆ ಭಕ್ತಿ ಬರ್ಪುದು, ಮಹೇಶನಿಂ ’ ಎಂದು ವಿಚಾರಿಸಿ ‘ ಮಹಾಚೀನಿ ಎನಿಪ ವಸ್ತ್ರಾವಳಿಯ, ಲತಾವಳಿಯ, ಪುಷ್ಪಾವಳಿಯ, ನೇತ್ರಾವಳಿಯ, ಸಿಂಹಾವಳಿಯ, ಚಿತ್ರಾವಳಿಯ, ಸುರಾವಳಿಯ, ಹಂಸಾವಳಿಯ, ತರಿಸಿದನು. ಅವು ಗಳಲ್ಲಿ ಮಿಗಿಲೆನಿಪ ವಸ್ತ್ರಗಳನ್ನು ಕೊಂಡು ಶಿವನಿಗೆ ಉಡಿಸಿ, ತೊಡಿಸಿ, ಶಿವಪೂಜೆ ಮಾಡುತ್ತ ಸಂತೋಷಪಡುತ್ತಾನೆ. ಈ ಸಮಯದಲ್ಲಿ ‘ ಉಗ್ರರು, ಶಾಂತರು, ಮೃದು ಗಳು, ಮಧುರರು, ವ್ಯಗ್ರರು, ನ್ಯಾಯನಿಷ್ಠುರರು—’ ಎಲ್ಲರೂ ದೇವಾಲಯದ ರಂಗ ಮಂಟಪಕ್ಕೆ ಬಂದು ನೆರೆಯುತ್ತಾರೆ. ಅಮರನೀತಿಯ ಭಕ್ತಿಯನ್ನು ಕಂಡು ಕೆಲವರು ಹರಸಿದರೆ ಇನ್ನು ಕೆಲವರು ‘ ಪರಸಲೇಕೆ ಎಮಗೋಸುಗೀಯನು ’ ಎಂದೆನ್ನುತ್ತಾರೆ. ‘ಆದೊಡೇನಿಂತಪ್ಪರುಂಟೇ? ’ ಎಂದು ಹಲವರೆಂದರೆ ‘ಮಾದೇವನಿತ್ತೊಡರಿದಾವುದು ? ’ ಎಂದು ಬೇರೆ ಕೆಲವರೆನ್ನುತ್ತಾರೆ. ಇವರೆಲ್ಲರನ್ನು ಕಂಡ ಅಮರನೀತಿ ಹರುಷಿತನಾಗಿ,

‘ ಏನೇನನೆಳಸಿದರ್ಗಿಮ್ಮಡಿಯನೀವುತಂ
ಮೌನದಿಂದಿರ್ದರ್ಗೆ ನಾಲ್ಮಡಿಯನೀವುತಂ
ಆನಂದವಿರ್ಮಡಿಸಿ ನೂರ್ಮಡಿಯನೀವುತಂ
ನಾನಾ ಮುಖಂಗಳಿಂ ಪೆರ್ಚಿಪಿರಿದೀವುತಂ
ಕುಣಿದಾಡುತೀವುತಂ ಮಣಿದಾಡುತೀವುತಂ
ಎಣಕೆಗೆಟ್ಟೀವುತಂ ಗಣಕುಲಕ್ಕೀವುತಂ ’

ಹೀಗೆ ರೇಷ್ಮೆ ವಸ್ತ್ರಗಳನ್ನು ದಾನಮಾಡುವಲ್ಲಿ ತನ್ನ ದಣಿವನ್ನು ಸಹ ಮರೆಯುತ್ತಾನೆ. ಹೀಗೆ ಕೆಲವು ಕಾಲ ನಡೆದಾಗ ಶಿವನುಟ್ಟ ಗಜಚರ್ಮವು ಮಾಯವಾಗಿ ಅದರ ಬದಲು ಅಮರನೀತಿಯು ದಾನ ಮಾಡುತ್ತಿದ್ದ ರೇಷ್ಮೆ ವಸ್ತ್ರ ಬರುತ್ತಿದೆ. ಪಾರ್ವತಿ, ಗಣಸಮೂಹವೇ ಮೊದಲಾದವರುಟ್ಟ ತೊಟ್ಟ ವಸ್ತ್ರಗಳೆಲ್ಲ ಅಮರನೀತಿಯವಾಗುತ್ತವೆ. ಈ ಚೋದ್ಯದ ಇಂಗಿತವನ್ನು ಶಿವನು ತಿಳಿಯುತ್ತಾನೆ. ಮುದುಕನ ವೇಷ ಧರಿಸಿ ಕೌಪೀನ ಧಾರಿಯಾಗಿ ಅಮರನೀತಿಯನ್ನು ಪರೀಕ್ಷಿಸಲೆಂದು ಶಿವಾಲಯಕ್ಕೆ ಬಂದು 'ಇಲ್ಲಿ ನಮಗೋರ್ವ ಭಕ್ತರ ಮನೆಯಲೌತಣವಿದೆ. ನನ್ನಲ್ಲಿದ್ದ ಈ ಕೌಪೀನವನ್ನು ಬೇರೆಲ್ಲಿಯೂ ಇಡಲು ನಂಬಿಗೆ ಸಾಲದಾಗಿದೆ. ಇದೊಂದು ದಿನ ನಿನ್ನಲ್ಲಿಟ್ಟುಕೊಂಡು ನಾಳೆ ಕೊಡಬೇಕು' ಎಂದು ಹೇಳಿ ಹೋಗುತ್ತಾನೆ. ಮರುದಿನ ಆತನು ಕೌಪೀನವನ್ನು ತಿರುಗಿ ಕೇಳಿದಾಗ ಕೌಪೀನವನ್ನಿಟ್ಟ ಪೆಟ್ಟಿಗೆಯಲ್ಲಿ ಅದು ಇರುವುದಿಲ್ಲ. ಅಮರನೀತಿಯ ಮನಗುಂದಿ ಮುಖ ಬಾಡುತ್ತದೆ. ಆಗ ವೇಷಾಂತರದ ಶಿವನು ಅಮರನೀತಿಯನ್ನು ಭಕ್ತಗಣದ ಮಧ್ಯದಲ್ಲಿ ಬಾಯಿಗೆ ಬಂದಂತೆ ತೆಗಳುತ್ತ ಹಾಸ್ಯಮಾಡುತ್ತಾನೆ. ನಾನಾಪರಿಯಾಗಿ ಹಂಗಿಸುತ್ತಾನೆ. ಕೌಪೀನವನ್ನು ಕಳವು ಮಾಡಿದ ಅಪರಾಧವನ್ನು ಹೊರಿಸುತ್ತಾನೆ. ಕೊನೆಗೆ ತಾನೇ ಒಂದು ವ್ಯವಸ್ಥೆಯನ್ನು ಸೂಚಿಸುತ್ತಾನೆ.

'ಎಮ್ಮ ಮಾರುಡೆ ಕೌಪು ಬೇರೆಯಿದೆ ಮತ್ತೊಂದು
ಇದರ ತೂಕಕ್ಕೆ ಸರಿತೂಕವಿತ್ತೊಡೆ ಸಾಲ್ಗು'

ಎಂಬುದೇ ಆ ವ್ಯವಸ್ಥೆ. ಮುಗಿಲ ಮುಟ್ಟುವಂತೆ ಎರಡು ಕಂಬಗಳನ್ನು 'ಭವನ ಭಕ್ತಿಯ ನೀಳ್ದನಿಷ್ಠೆಯಂ ನೆಡುವಂತೆ ನೆಡುತ್ತಾರೆ. ಅವುಗಳ ನಡುವೆ ಅಡ್ಡ ತೊಲೆಯನ್ನಿರಿಸಿ ಅದಕ್ಕೆ ಕಬ್ಬಿಣದ ಬಹು ದೊಡ್ಡ ಗಾತ್ರದ ತಕ್ಕಡಿಯನ್ನು ಕಟ್ಟಿ ಅದರ ಒಂದು ಪರಡಿಯಲ್ಲಿ ಕಪಟಭಕ್ತನ ಕೌಪೀನವನ್ನೂ ಇನ್ನೊಂದರಲ್ಲಿ ಅಮರನೀತಿಯ ವಸ್ತ್ರಾವಳಿಗಳನ್ನೂ ಒಟ್ಟುತ್ತಾರೆ. ಎಷ್ಟು ಒಟ್ಟಿದರೂ ಕೌಪೀನದ ಪರಡಿ ನೆಲಬಿಟ್ಟು ಮಿಸುಕುವುದಿಲ್ಲ. 'ಮನೆಯೊಳುಳ್ಳರ್ಥಮಂ ತಂಡ ತಂಡದ ರತ್ನಖಚಿತದಾಭರಣಮಂ ಪೊತ್ತಡರೆ ತಂದು ಬೆಟ್ಟದ ತೆರದೊಳು' ಒಟ್ಟಿದರೂ ನೆಲದೊಳಗೆ ನೆಟ್ಟಂತೆ ಅಚಲವಾಗಿ ಕೌಪೀನದ ಪರಡಿ ನಿಲ್ಲುತ್ತಿದೆ. ಆಗ ಅಮರನೀತಿಯು ತನ್ನ ಸತಿ ಪುತ್ರರನ್ನೂ ಕೌಪೀನಕ್ಕೆ ಪ್ರತಿಯಾಗಿ ಇಡುತ್ತಾನೆ. ಆಗಲೂ ತಕ್ಕಡಿಯ ಪರಡಿ ಮೊದಲಿನಂತೆಯೇ ನಿಲ್ಲುತ್ತದೆ. ಆಗ ಕಪಟ ಶಿವನು :

'ಕೊಂಡುದಂ ಕೊಡುವುದಕ್ಕಿನಿತು ಸಂಕಟಮದೇಕೆ
ಕೊಂಡುದೇ ಇಲ್ಲೆಂದು ನುಡಿಯೆ ಸಾಕಾಯ್ತೆಮಗೆ
ಮಗನುವುಂ ವನಿತೆಯುಂ ನೀನು ಮೇಲಿದ್ದೊಡೇನು
ಜಗವುಮೀನೆರೆದ ಜನರೆಲ್ಲರೇರಿದೊಡೇನು'

'ನಮಗೆಮ್ಮ ಕೌಪಿಂಗೆ ಸರಿಯಾಗಲಾರದೆಂ'ದು ಚುಚ್ಚುಮಾತುಗಳನ್ನಾಡುತ್ತಾನೆ.

ಆಗ ಅಮರನೀತಿಯು ಭಸ್ಮೋದ್ಧೂಳನವನ್ನು ಮಾಡಿಕೊಂಡು ರುದ್ರಾಕ್ಷಿಯನ್ನು ಧರಿಸಿಕೊಂಡು ಚಂದದ ದುಕೂಲಗಳನ್ನು ಬಿಗಿದುಟ್ಟು ರಂಗಮಂಟಪಕ್ಕೆ ಬಂದು ದೇವರನ್ನು ಅನನ್ಯಭಕ್ತಿಯಿಂದ ನೆನೆದು ಭಕ್ತತಿಂಥಿಣಿಗೆ ವಂದಿಸಿ ಪರಡಿಯನ್ನು ತಾನೇ ಏರುತ್ತಾನೆ. ಆಗ,

‘ ಸಮತೂಕವಾಯಿತ್ತು ಶಂಕರನ ಭಕ್ತಿಯ ತ್ರಾಸು
ಸಮವಾಯ್ತು ದೇವಭಕ್ತರ ತೂಕದಾತ್ರಾಸು ’

ಶಂಕರನ ಕಪಟವೇಷವಳಿದು ಸಾಕ್ಷಾತ್ಕಾರವಾಗುತ್ತಿದೆ. ನಂದೀಶ್ವರನು ಅಮರನೀತಿಯನ್ನು ಕೈಲಾಸಕ್ಕೆ ಕರೆದೊಯ್ಯಲೆಂದು ವಿಮಾನವನ್ನು ತರುತ್ತಾನೆ. ಆದರೆ ಶಿವನು,

‘ ಅಮರನೀತಿಗೆ ವಿಮಾನಂ ಬೇಡ ನಂದೀಶ
ಸಮತೂಕವಾಗಿರ್ದುದೇ ಸಾಲ್ಗು ನಂದೀಶ
ಇಲ್ಲಿ ಮರ್ತ್ಯಕ್ಕೆ ಸಮವೆಂಬುದಂ ತೋರುವೆಂ
ಅಲ್ಲಿ ಕೈಲಾಸಕ್ಕೆ ಒಲ್ಮೆಯಿಂ ಸಾರುವೆಂ ’

ಎಂದು ಸಮತೂಕದ ತಕ್ಕಡಿಯೊಡನೆ ಕೈಲಾಸವನ್ನು ಸೇರಿ, ಅಮರನೀತಿಗೆ, ಸತಿಗೆ, ತನಯಂಗೆ ಗಣಪದವಿಯನ್ನೀಯುತ್ತಾನೆ. ಅಮರನೀತಿಯ ಕಥೆಯಲ್ಲಿ ತಿರುನೀಲಕಂಠನ ಕಥೆಯಲ್ಲಿಯಂತೆ ಶಿವನ ಕಪಟನಾಟಕವು ಒಳ್ಳೇ ಸುಂದರವಾಗಿ ಚಿತ್ರಿತವಾಗಿದೆ. ಇಲ್ಲಿ ಸತಿಸುತರನ್ನಲ್ಲದೆ ತನ್ನನ್ನೇ ಅರ್ಪಣಮಾಡಿ, ಶಿವನನ್ನು ಒಲಿಸಿದಾತ ಅಮರನೀತಿ; ವಿಷಯಸುಖಗಳನ್ನೇ ಮುಪ್ಪಿನವರೆಗೆ ತೊರೆದು ಶಂಕರನ ಕೃಪೆ ಪಡೆದ ತಿರುನೀಲಕಂಠ ಉಗ್ರನಿಷ್ಠಾವಂತ–ಎರಡೂ ಕಥೆಗಳ ರಚನಾಕ್ರಮ ಒಂದೇ, ಓಟವೂ ಅದೇ ಬಗೆಯದು. ಏನೆಲ್ಲವನ್ನು ಅರ್ಪಿಸಿದರೇನು ? ಬಿಟ್ಟರೇನು ? ತನ್ನನ್ನೇ ಶಿವನಿಗೆ ಅರ್ಪಿಸಬೇಕೆಂಬ ದೃಷ್ಟಿ ಅಮರನೀತಿಯ ರಗಳೆಯಲ್ಲಿದೆ. ಶಿವನಿಗಾಗಿ ಎಲ್ಲ ಕಷ್ಟನಿಷ್ಠುರಗಳನ್ನು ಸಹಿಸಬೇಕೆಂಬ ದೃಷ್ಟಿ ತಿರುನೀಲಕಂಠ ರಗಳೆಯಲ್ಲಿದೆ. ಕೈಲಾಸಕ್ಕೆ ಹೋಗಲು ಅಮರನೀತಿಗೆ ವಿಮಾನವು ಬೇಕಾಗಲಿಲ್ಲ, ತಕ್ಕಡಿಯ ಪರಡಿಯೇ ಸಾಕಾಯಿತು. ಬೆಲೆಯುಳ್ಳ ವಸ್ತ್ರಗಳನ್ನು ವಿಪುಲವಾಗಿ ದಾನಮಾಡುವುದು ತ್ಯಾಗಬುದ್ಧಿಯೇ ಸರಿ. ಆದರೆ ಭೌತವಸ್ತುಗಳ ದಾನವೇ ಹಿರಿಯದಲ್ಲ. ಸರ್ವಸಮರ್ಪಣೆಯು ಮಹತ್ವದ್ದು. ಅದರಲ್ಲಿಯೂ ತನ್ನನ್ನೇ ಸಮರ್ಪಿಸಿಕೊಳ್ಳುವುದು ಶ್ರೇಷ್ಠವಾದುದು. ಹರಿಹರನು ಈ ದೃಷ್ಟಿಯನ್ನು ಮತ್ತೆ ಮತ್ತೆ ಸ್ಪಷ್ಟಗೊಳಿಸುವುದುಂಟು. ಭೌತವಸ್ತುಗಳ ದಾನವು ಅಹಂಕಾರದ ಪೋಷಣೆಗೆ ಕಾರಣವಾಗಬಹುದು. ತನ್ನನ್ನುಳಿದು ಇತರರನ್ನು ತ್ಯಾಗ ಮಾಡುವುದು ಸುಲಭಸಾಧ್ಯವಲ್ಲವೆಂಬುದೂ ನಿಜ. ಆದರೆ ಮಾನವಜೀವನದಲ್ಲಿ ದೇವನ ಕೊನೆಯ ಪರೀಕ್ಷೆಯೆಂದರೆ ಮಾನವನ ಸ್ವಸಮರ್ಪಣೆಯೇ ಸರಿ. ಅದೂ ಕೂಡ ಅಹಂಕಾರರಹಿತವಾಗಿರಬೇಕು. ಮಾನವನಿಗೆ ದೈವೀಪ್ರಸನ್ನತೆಯೊದಗುವುದು ಇಲ್ಲವೇ ಮಾನವನೇ ದೇವನಾಗುವುದು ಈ ಕೊನೆಯ ಪರೀಕ್ಷೆಯಲ್ಲಿ ಉತ್ತೀರ್ಣ

ವಾದಾಗ ಮಾತ್ರ ಸಾಧ್ಯ. ತಕ್ಕಡಿಯ ಸಂಕೇತದ ಮೂಲಕ ಮಾನವನು ದೈವೀ ಜೀವನಕ್ಕೆ ಸಮತೂಕವನ್ನೊದಗಿಸಬೇಕೆಂಬುದನ್ನು ಈ ರಗಳೆಯಲ್ಲಿ ಹೇಳಿದೆ. ಇಲ್ಲಿ ಮರ್ತ್ಯಕ್ಕೆ ಸಮವಾದವರಿಗೇ ಒಲ್ಮೆಯಿಂದ ಪರಮಾತ್ಮನೇ ದೇವಲೋಕದ ಸುಖವನ್ನು ಒದಗಿಸುತ್ತಾನೆ. ಮಾನವಜೀವನದಲ್ಲಿ ಸಮವಾಗಿ ಬಾಳುವುದು ಹೇಗೆಂಬುದನ್ನು ಅಮರನೀತಿಯ ಚರಿತ್ರದಲ್ಲಿ ಹರಿಹರ ಕವಿಯು ನಿರೂಪಿಸಿದ್ದಾನೆ.

ಭೂಲೋಕದಲ್ಲಿಯೇ ದೇವಲೋಕ

ಬಸವರಾಜದೇವ:

ಅಚಲವಾದ ಭಕ್ತಿ, ನಿಷ್ಠೆ, ಸಮರ್ಪಣೆಗಳಿಂದ ಶಿವನು ಪ್ರಸನ್ನನಾಗಿ ದೇವ ಲೋಕದ ಸುಖವನ್ನು ಮಾನವರಿಗೆ ಒದಗಿಸಿದ ನಿರೂಪಣೆಯನ್ನು ಹಿಂದೆ ವಿವೇಚಿಸಿದ ರಗಳೆಗಳಲ್ಲಿ ಕಂಡೆವು. ಮಹಿಮೆಯಿಂದ ವೈಯಕ್ತಿಕವಾಗಿಯೋ, ಪುರಸಹಿತವೋ, ನವಗ್ರಾಮಗಳೊಂದಿಗೋ, ಇಡೀ ದೇಶವನ್ನು ತಮ್ಮೊಂದಿಗೆ ಕರೆದುಕೊಂಡು ಕೈಲಾಸಕ್ಕೆ ಹೋದವರ ಜೀವನ ಅಲ್ಲಿ ಚಿತ್ರಿತವಾಗಿದೆ. ದೇವಲೋಕದಲ್ಲಿ ಗಣಪದವಿ ಯನ್ನು ಪಡೆದವರೂ ಇದ್ದಾರೆ. ಅವರೆಲ್ಲರೂ ನಭಕ್ಕೆ ಜಿಗಿದು ಸುವರ್ಣಗಿರಿಯನ್ನು ಕಂಡವರೇ. ಆದರೆ ಬಸವಣ್ಣನ ದಾರಿಯೇ ಬೇರೆ. ಆತನು ತನ್ನ ಭಕ್ತಿಯ ಮಹಿಮೆ ಯಿಂದ ಶಿವನನ್ನು ಮೆಚ್ಚಿಸಿ, ಕೈಲಾಸಕ್ಕೆ ಹೋಗಿ, ಕೃತಕೃತ್ಯನಾಗಬೇಕೆಂದು ಹಂಬಲ ವಿಟ್ಟುಕೊಳ್ಳಲಿಲ್ಲ. ದೇವಲೋಕದ ಸುಖವೇ ಭೂಲೋಕದಲ್ಲಿ ನೆಲೆಯೂರಿ ನಿಲ್ಲುವಂತೆ ಜೀವನಪಥವನ್ನು ನಡೆಯಿಸಿದ. ಬಸವಣ್ಣನ ಭಕ್ತಿಗೆ ಶಿವನು ಮೆಚ್ಚಿ ಕೈಲಾಸಕ್ಕೆ ಕರೆಯಬಂದಾಗ ಅದನ್ನು ಅಲ್ಲಗಳೆದ ಬಸವಣ್ಣನು ಇಹಲೋಕದಲ್ಲಿಯೇ ಶಿವಲೋಕ ವನ್ನು ಸೃಷ್ಟಿಸಿದನೆಂದು 'ಬಸವರಾಜದೇವರ ರಗಳೆ'ಯಲ್ಲಿ ಹರಿಹರನು ಹೃದಯಂಗಮ ವಾಗಿ ನಿರೂಪಿಸಿದ್ದಾನೆ.

'ಇಳೆಗೆ ಶಿವಭಕ್ತಿಯಂ ತೀವಲ್ ಮನಂಗೊಂಡು
ಚಿಪ್ಪಿನೊಳ್ ಮುತ್ತು ಕಾಸಾರದೊಳ್ ಪಂಕಜಂ
ಅಪ್ಪಿನಿಂತಣ್ಪು ಮಲಯಾದ್ರಿಯಿಂದ ಮಲಯಜಂ
ಕೇತಕೀ ಕುಸುಮದಿಂ ರುಚಿರತರ ಪರಿಮಳಂ
ಶೀತಕರನಿಂ ಸಾಂದ್ರತರ ಕೌಮುದೋಜ್ವಳಂ
ಪುಟ್ಟುವಂತಿರೆಪುಟ್ಟಿದಂ ಶಿವನ ಶಿಶುವಲ್ಲಿ'

ಹೀಗೆ ಬಸವೋದಯವಾಯಿತಂತೆ.

'ಬಸವರಾಜಂ ಪುಸಿಯ ತಾಯ್ತಂದೆಗಳ್ ಪೋದುದಂ ಕಂಡಾದರಂಮಿಕ್ಕು ಸಂಸಾರದ ಭಾರವಿಳಿದು ನಲಿನಲಿದಾಡಿ' ಬಾಲ್ಯವನ್ನು ಕಳೆದ. 'ಪದಿನಾರು ವತ್ಸರ

ಡೊಡನೆ ನವಯೌವ್ವನವಲ್ಲಿ ಕಾಲಿಡುತ್ತ ' ಜನನದ ಬಳಿವಿಡಿದೆಂತಕ್ಕೆ ಬಂದ ಜವ್ವನಂ ಶಿವಪೂಜೆಯಲ್ಲಿ ಸವೆಯುವೇಳ್ಕುಂ. ಇಂತಲ್ಲಲ್ಲಿ ಶಿವಭಕ್ತಿಯುಂ ಕರ್ಮಮುಂ ಎಂದು ವೊಂದಾಗಿರದು ' ಎಂದು ಆಲೋಚಿಸಿದ. ಕಪ್ಪಡಿ ಸಂಗಮಕ್ಕೆ ಬಂದ. ಅಲ್ಲಿಯ ಶಿವಾಲಯದಲ್ಲಿ ' ಶಿವನ ದಯೆಗೆ ಚಿತ್ತವಂಕುರಿಸಿ ಬುದ್ಧಿ ಪಲ್ಲವಿಸಿ ಮನಂ ಮುಗುಳೊತ್ತಿ' ಕುಳಿತ.

ಕಪ್ಪಡಿ ಸಂಗಮದಲ್ಲಿದ್ದು, ಶಿವನನ್ನು ಪೂಜಿಸಿದಂತೆ ಆತನ ಭಕ್ತಿಗೆ ದಳವೇರುತ್ತದೆ. ಮಣಿಮಣಿದು, ಕುಣಿಕುಣಿದು ಕೆಲೆಕೆಲೆದು ನಲಿದಾಡಿ ತಣಿತಣಿದು ತಕ್ಕೈಸಿ, ಪೂಜಿಸುತ್ತಾನೆ. ದಿನದಿನಕೆ ಗಳಿಗೆ ಗಳಿಗೆಗೆ ಭಕ್ತಿ ಮಿಗಿಲಾಗುತ್ತಿದೆ :

' ನಡೆವಲ್ಲಿ ನುಡಿವಲ್ಲಿ ಸಂಗಶರಣೆಂದೆನುತೆ
ಉಡುವಲ್ಲಿ ಉಂಬಲ್ಲಿ ಸಂಗಶರಣೆಂದೆನುತೆ
ಕೊಡುವಲ್ಲಿ ಕೊಂಬಲ್ಲಿ ಸಂಗಶರಣೆಂದೆನುತೆ
ತೊಡುವಲ್ಲಿ ಪೊದೆವಲ್ಲಿ ಸಂಗಶರಣೆಂದೆನುತೆ '

ತನ್ನ ಅಂಗಸುಖವನ್ನೆಲ್ಲ ಸಂಗಮುಖವಾಗಿ ಸೇವಿಸುತ್ತಾನೆ.

ಹೀಗಿರಲು ಒಂದು ದಿನ ಬಸವನು ' ಸಂಗಪ್ರಸಾದಮಂ ಸಾದರಂ ಕೈಕೊಂಡು ರಂಗಮಂಟಪದೊಳು ಸಂಗಮಧ್ಯಾನ ನಿದ್ರಾಮುದ್ರೆ'ಯಲ್ಲಿರಲು ಕನಸಿನಲಿ ' ಎಲೆ ಬಸವಣ್ಣ........ನೀಂ ಬಿಜ್ಜಳರಾಯನಿಪ್ಪ ಮಂಗಳವಾಡಕ್ಕೆ ಪೋಗು ' ಎಂದು ಸಂಗಮನಾಥನ ಸಂದೇಶ ಬಂದಿತು. ಆಗ ಬಸವನು ಎಚ್ಚರವಾಗಿ ಬೆಚ್ಚಿ ' ಕೆಟ್ಟೆಂ ಕೆಟ್ಟೆಂ ಕಣ್ ನೋಡದೆ ಹುಣ್ಣನೋಡದೆ ಹೋಗೆಂಬರೆ? ಗಗನದಿಂದಿಳಿವಂಗಾಧಾರವಾಗುತ್ತೆ ತಪ್ಪುವರೆ ? ಇಂತು ನಡುಗಡಲೊಳಾಳ್ವವಂಗಾಧಾರವಾಗುತ್ತೆ ಪಿಂಗುವರೆ ? ಗುರುವೆ ಪರಮಬಂಧುವೆ ಪ್ರಾಣವೆ, ಬೆಳದಿಂಗಳೇಕೆ ಬಿಸುಪೇಕೆ ? ಅಮೃತವೇಕೆ ವಿಷವೇಕೆ ? ಎನ್ನಂ ಬಿಡುವರೆ ? ' ಎಂದು ಪ್ರಲಾಪಿಸುತ್ತಾನೆ. ಮತ್ತೆ ಸಂಗಮನಾಥನ ಸಂದೇಶ ಬಂದಿತು : ' ಎಲೆ ಬಸವ ನಿನ್ನನಗಲಿ ನಾನಿರಲಾರೆ. ವೃಷಭನ ಮುಖಾಂತರದಿಂದಾವೆ ಬಂದಪೆವು. ಆತಂ ನಿನಗೆ ಸದ್ಗುರು. ಅಲ್ಲಿ ಬಳಿಕ್ಕಂ ನಮ್ಮನರ್ಚಿಸುತ್ತೆ ಭಕ್ತರ ಬಂಧುವಾಗಿ, ಶರಣರ ಪರುಷದ ಕಣಿಯಾಗಿ ನಿತ್ಯಸುಖಿಯಾಗಿ ' ಬಾಳು........ಮಂಗಳವಾಡಕ್ಕೆ ಹೋಗಿ ಜಂಗಮಾರಾಧನೆ ಮಾಡುತ್ತ ಬಿಜ್ಜಳನಿಂದ ಮನ್ನಣೆ ಪಡೆ. ಬಸವನಿಗೆ ಮತ್ತೆ ಚಿಂತೆಯಾವರಿಸುತ್ತದೆ. ಕಡೆಗೆ ' ಅಕ್ಷರಜ್ಞಾನವಿದೆ, ಅದನ್ನೇ ಮಾರಿ ಬಂದ ಹೊನ್ನಿನಿಂದ ಜಂಗಮಾರ್ಚನೆ ಮಾಡಿ ಪ್ರಸಾದವನ್ನು ಪಡೆಯುವೆ 'ನೆಂದು ನಿಶ್ಚಯಿಸುತ್ತಾನೆ.

ಸರಿ ಮಂಗಳವಾಡಕ್ಕೆ ಹೊರಡುವ ಮೊದಲು ' ಸಂಗಂಗೆ ಬಿನ್ನೈಸಲೆಂದು ಹತ್ತಿರ ' ಬಂದು ' ಕಣ್ಗಳಿಂ ಶೋಕಜಲಬಿಂದು ತೆರಳೆ ಸೆರೆಬಿಗಿದು ಗದಗದಿಸಿ ಬಿಕ್ಕು ಸಂಗನ ಪಾದದಡಿಯಲ್ಲಿ ಬಿದ್ದು ' ಹೊರಳುತ್ತಳುತ್ತಗಲಲಾರ 'ದವನಾಗುತ್ತಾನೆ. ಸಂಗಮದೇವನು :

'ನೆನೆಯೆ ಮುಂದಿರ್ದಪೆಂ ಕರೆದೊಡೋ ಎಂದಪೆಂ
ಮನದೊಳಗೆ ಕರದೊಳಗೆ ತನುವಿನೊಳಗಿರ್ದಪೆಂ
ನಿಂದಲ್ಲಿ ನಿಂದಪೆಂ ನಡೆದಲ್ಲಿ ನಡೆದಪೆಂ
ಬಂದಲ್ಲಿ ಬಂದಪೆಂ ನುಡಿದಲ್ಲಿ ನುಡಿದಪೆಂ
ಬಿಟ್ಟುದಂ ಬಿಟ್ಟಪೆಂ ಪಿಡಿದುದಂ ಪಿಡಿದಪೆಂ
ನಟ್ಟುದಂ ನಟ್ಟಪೆಂ ಕೇಳ್ದುದಂ ಕೇಳ್ವಪೆಂ
ಆಡಿದುದನಾಡುವೆಂ ನೋಡಿತಂ ನೋಡುವೆಂ
ಮಾಡಿತಂ ಮಾಡುವೆಂ ಕೂಡಿತಂ ಕೂಡುವೆಂ
ನಡೆಯಯ್ಯ ನಡೆಮುಗನೆ ನಡೆಕಂದ ಬಸವಣ್ಣ
ಪೊಡವಿಗಧಿಪತಿಯಾಗಿ ಬಾಳೆನ್ನ ಬಸವಣ್ಣ'

ಎಂದು ಹರಸುತ್ತಾನೆ.

ಬಸವಣ್ಣನು ಮಂಗಳವಾಡದಲ್ಲಿ ತನ್ನ ಬುದ್ಧಿಶಕ್ತಿಯಿಂದ ಬಿಜ್ಜಳನ ಆಸ್ಥಾನದಲ್ಲಿ ಕರಣಿಕನ ಸ್ಥಾನವನ್ನೂ, ಸಿದ್ಧದಂಡಾಧಿಪನ ವಾತ್ಸಲ್ಯವನ್ನೂ ಪಡೆಯುತ್ತಾನೆ. ತನ್ನ ಸದ್ಗುಣ, ಸದ್ಭಕ್ತಿಗಳಿಂದಾಗಿ ಪ್ರವರ್ಧಮಾನನಾಗುತ್ತಾನೆ. ಮುಂದೆ ಬಿಜ್ಜಳನು,

'ಸರ್ವಭಾಂಡಾರವೆಲ್ಲಂ ನಿನಗೆ ಬಸವಣ್ಣ
ಉರ್ವರೆಯ ಧನವದೆಲ್ಲಂ ನಿನಗೆ ಬಸವಣ್ಣ
ಎನ್ನರಾಜ್ಯದ ಶಿಕ್ಷೆ ರಕ್ಷೆ ನಿನ್ನದು ಬಸವ
ಎನ್ನತೇಜೊಭಿಮಾನಂ ನಿನ್ನದೆಲೆ ಬಸವ'

ಎಂದು ಹೇಳಿ, ತನ್ನ ರಾಜ್ಯದ ಭಂಡಾರಿಯನ್ನಾಗಿ ನೇಮಿಸಿಕೊಂಡ. ದಿನಗಳೆದಂತೆ ಬಸವಣ್ಣನಿಗೆ 'ಶಿವಕಾರುಣ್ಯ ಶೈವಸಾಮ್ರಾಜ್ಯಸಂಪದಂ' ಕೈಸಾರುತ್ತದೆ. ಬಸವಣ್ಣನು ಬೀರಿದ ವರ್ಚಸ್ಸು ದೇಶ ದೇಶಗಳಲ್ಲಿ ಪಸರಿಸುತ್ತದೆ. ಅನೇಕ ಭಕ್ತರು ಮಂಗಳವಾಡಕ್ಕೆ ಧಾವಿಸುತ್ತಾರೆ. ಬಂದ ಭಕ್ತರಿಗೆಲ್ಲ ಬಸವಣ್ಣನಿಂದ ಸರಿಯಾದ ಸತ್ಕಾರ ದೊರೆಯುತ್ತದೆ. ಶಿವತತ್ವಗೋಷ್ಠಿಗಳು ಎಡೆಬಿಡದೆ ಸಾಗಿದವು. ಜಂಗಮ ಸೇವಾನಿರತನಾದ ಬಸವಣ್ಣನ ಕೀರ್ತಿ ಸುತ್ತಲೂ ಹರಡಿತು. ಅದು ಇತರರ ಅಸೂಯೆಗೂ ಕಾರಣವಾಯಿತು. ಆಕ್ಷೇಪಣೆಗಳೂ ತಲೆದೋರಿದವು. ವಿಷಮಪರೀಕ್ಷೆಯನ್ನು ದೈವೀಕೃಪೆಯಿಂದ ದಾಟಿದ ಬಸವಣ್ಣನ ಘನತೆ ಇನ್ನೂ ಹೆಚ್ಚಿತು. ಬಸವಣ್ಣನನ್ನು ಶರಣರು ಇಂತು ಕೊಂಡಾಡುತ್ತಾರೆ. 'ಶರಣರಂ ಸಂಗನೆಂದಲ್ಲದೆ ಕಾಣೆ, ನಿಚ್ಚ ಶಿವರಾತ್ರಿಯನಚ್ಚರಿಯಿಂ ಮಾಳ್ಪೆ, ಜಂಗಮ ಪ್ರಾಣಿಯಾಗಿಪ್ಪೆ, ಶಿವಲಿಂಗಾರ್ಪಿತವಲ್ಲದುದನಾಘ್ರಾಣಿಸೆ, ನೋಡೆ, ನುಡಿಯೆ, ಮುಟ್ಟೆ, ಕೇಳೆ, ಶಿವಸಮಯವನುದ್ಧರಿಸುವೆ, ಲಿಂಗದಲ್ಲಿ ಕಠಿನಮಂ ಕೇಳೆ, ಜಂಗಮದಲ್ಲಿ ಜಾತಿಯನರಿಯೆ, ಪ್ರಸಾದದಲ್ಲಿ ಅಪವಿತ್ರತೆಯನರಿಯೆ, ಪರಾಂಗನೆಯರಂ ಹೆತ್ತತಾಯ್ಗಳೆಂಬೆ, ಪರದ್ರವ್ಯಮಂ ಕಿಲ್ಬಿಷವೆಂದು

ಮುಟ್ಟಿ, ನಡೆದು ತಪ್ಪೆ, ನುಡಿದು ಹುಸಿಯೆ, ಹಿಡಿದು ಬಿಡೆ, ಬಿಟ್ಟು ಹಿಂಗಲೀಯೆ, ಕೊಟ್ಟು ನೆನೆಯೆ, ನಟ್ಟು ಕೀಳೆ, ಮುಟ್ಟಿ ಪೆಱಪಿಂಗೆ, ಕೂಡಿ ತಪ್ಪೆ, ನೋಡಿ ನಿರಾಕರಿಸೆ, ನೆನೆದು ಮರೆಯೆ, ಮನದೊಳೋವರಿಯಿಲ್ಲ, ಬುದ್ಧಿಯೊಳು ವಿಸಂಚವಿಲ್ಲ, ಅಹಂಕಾರ ದೊಳು ಗರ್ವವಿಲ್ಲ, ಚಿತ್ತದೊಳು ಹೊರೆಯಿಲ್ಲ, ಕಾಮವಿಲ್ಲ, ಕೋಪದ ಮಾತೇಕೆ? ಲೋಭದ ಗಾಳಿ ತೀಡದು, ಮೋಹಕ್ಕೆ ತೆರಹಿಲ್ಲ, ಮದದಸೊಗಡು ಹೊದ್ದದು, ಮತ್ಸರ ಕ್ಕಂಬಿಲ್ಲ. ಬಸವರಾಜ, ನಿನ್ನ ಗುಣಗಳಂ ಬಣ್ಣಿಸಲೆಮ್ಮಳವಲ್ಲ'. ಈ ವಾಣಿಯಲ್ಲಿ ಹರಿಹರನು ಮಾನವರ ವ್ಯಾವಹಾರಿಕ, ಧಾರ್ಮಿಕ, ಅನುಭಾವಿ ಜೀವನದ ಆದರ್ಶವನ್ನೇ ನಿರೂಪಿಸಿದ್ದಾನೆ. ಸಂಸ್ಕೃತಿ, ಧರ್ಮ, ಅನುಭಾವಗಳ ಕೈಪಿಡಿಯಾಗಿವೆ, ಈ ಉಕ್ತಿಗಳು.

'ಬಸವಣ್ಣನ ಸತ್ಯಗುಣಮಂ ಸಾಮರ್ಥ್ಯಮಂ ತೇಜದುನ್ನತಿಯಂ ದಾನದತಿ ಶಯಮಂ' ಕಂಡು ಬಿಜ್ಜಳರಾಯನು ಬೆರಗುಗೊಂಡ.

'ಬಸವಣ್ಣನು ಶಿವಭಕ್ತರನೆಲ್ಲ ಕುಲಜರೆಂದು ತಿಳಿದ. ತನಗಿಂತ ಕಿರಿಯರಿಲ್ಲ, ಶಿವಶರಣರಿಗಿಂತ ಹಿರಿಯರಿಲ್ಲೆಂದು ಭಾವಿಸಿದ.

'ಬೇಡಿ ಬೇಡಿದ ಶರಣಂಗೆ ನೀಡದಿರ್ದಡೆ ತಲೆದಂಡ ಕೂಡಲಸಂಗ, ಅವಧಾರು' ಎಂದ ಬಸವಣ್ಣನ ಗೀತವನ್ನು ಕೇಳಿದ ಕೆಲವರು ಆತನನ್ನು ಕಠಿಣಪರೀಕ್ಷೆಗೂ ಒಡ್ಡಿದರು:

'ಕುಡುವವಂ ಸಂಗಂ, ಬೇಡುವವಂ ಸಂಗಮದೇವಂ; ಎನಗೊಂದುಂ ಭಾರ ವಿಲ್ಲ' ಎಂಬುದು ಬಸವಣ್ಣನ ಭಾವವಾಗಿತ್ತು. ಕೊನೆಗೆ ಶಿವನು ಅತಿ ಕಠಿಣವಾದ ರೀತಿಯಲ್ಲಿ ಬಸವಣ್ಣನನ್ನು ಪರೀಕ್ಷಿಸಿ ತಾನೇ ಸೋತನಂತರ:

'ನಡೆ ಬಸವ ಕೈಲಾಸಗಿರಿಗೆ ಪುಷ್ಪಕದೊಳಗೆ
ಪೊಡವಿಯೊಳಗಿರವು ಸಾಲ್ವುದು ಬಾ ಮಗನೆ ನಿನಗೆ'

ಎಂದು ಹೇಳಿದಾಗ ಬಸವಣ್ಣನು:

'ಸಂಗಯ್ಯ ಬಾಯೆಂದು ಕರೆವೆನೀನೆನ್ನುವಂ
ಪಿಂಗಲೀಯದು ಶರಣಗೋಷ್ಠಿ ಕೇಳೆನ್ನುವಂ
ಶರಣರೊಕ್ಕುದರ ಸವಿ ಕೈಲಾಸದೊಳಗುಂಟೆ?
ಶರಣ ಸಂಗದ ಸುಖಂ ಕೈಲಾಸದೊಳಗುಂಟೆ
ಇಲ್ಲಿಯ ಸುಖಂ ದೇವ ಅಲ್ಲಿಯುಳ್ಳಡೆಲೇಸು
ಅಲ್ಲೆನ್ನೆ ಈಗಳೇ ಕೊಂಡುಹೋಹುದು ಲೇಸು'

ಎಂದು ಮಾರುತ್ತರ ಕೊಟ್ಟ.

ಬಾಲ್ಯದಲ್ಲಿ ತಾಯಿತಂದೆಗಳನ್ನು ಕಳೆದುಕೊಂಡಾಗ 'ಪುಸಿಯ ತಾಯ್ತಂದೆ ಗಳ್' ಪೋದುದರಿಂದ ಭಾರವಿಳಿಯಿತೆಂಬ ಭಾವವನ್ನು ಬಾಲ್ಯದಲ್ಲಿ ಬಲಿಸಿಕೊಂಡು,

ಎಳವೆಯಲ್ಲಿಯೇ ದೈವೀಸಂಪರ್ಕವನ್ನು ಸಾಧಿಸಿಕೊಂಡು, ದೈವೀಸಂದೇಶದಂತೆ ಇಹ ಜೀವನದ ಕರ್ಮರಂಗದಲ್ಲಿ ಬಸವಣ್ಣನು ಕಾಲಿಟ್ಟನೆಂದು ಹರಿಹರನು ಚಿತ್ರಿಸಿದ್ದಾನೆ. ಶರಣರ ಶ್ಲಾಘನೆಯ ಮಾತುಗಳಲ್ಲಿ ಹರಿಹರನು ನಿರ್ಮಿಸಿದ ಬಸವಣ್ಣನವರ ಚಿತ್ರವು ಅದೆಷ್ಟು ಅತ್ಯುನ್ನತವಾಗಿದೆ, ಎಂಬುವನ್ನು ನಾವು ಅರಿಯುತ್ತೇವೆ. ಮಾನವನ ಜೀವನ ದಲ್ಲಿ ಇಂತಹ ಉನ್ನತದೃಷ್ಟಿಯನ್ನು ಸಾಧಿಸಬೇಕೆನ್ನುವುದು ಹರಿಹರನ ಆಶಯ. ಕೊನೆಗೆ ದೇವನು ಮೆಚ್ಚಿ ಕೈಲಾಸಕ್ಕೆ ಕರೆದಾಗ ' ಶರಣರ ಸಂಗದ ಸುಖ ಕೈಲಾಸ ದೊಳಗುಂಟೆ ' ಎಂದು ಪ್ರಶ್ನಿಸಬಲ್ಲ ಉತ್ತರವನ್ನು ಮಾನವನ ಬಾಳಿನಲ್ಲಿ ಸಾಧಿಸಿದ್ದಾರೆ ಬಸವಣ್ಣನವರು. ದೇವನ ರಾಜ್ಯವನ್ನು ಭೂಲೋಕದಲ್ಲಿ ಸ್ಥಾಪಿಸುವ ಗುರಿಯಾಚೆಗೆ ಮುಂದುವರಿಯುವ ದೃಷ್ಟಿ ಹರಿಹರನ ಈ ರಗಳೆಯಲ್ಲಿ ಸೂಚಿತವಾಗಿದೆ. ಇಲ್ಲಿಯ ಸುಖ ಅಲ್ಲಿಯೂ ಇರುವುದಾದರೆ ಕೈಲಾಸಕ್ಕೆ ಹೊರಡುವ ವಿಚಾರಮಾಡಬಹುದೆಂಬ ಮಾತಿನಲ್ಲಿ ಅಡಕವಾಗಿರುವ ಮಾನವನ ಬಾಳಿನ ಮಹೋನ್ನತಿಯ ಸಾಧನೆ ಬಸವಣ್ಣನವರದು. ಅಂತಹ ದೃಷ್ಟಿಯನ್ನು ನಮಗಾಗಿ ಕಾವ್ಯದಲ್ಲಿ ಬಿತ್ತರಿಸಿದ ಘನತೆ ಹರಿಹರ ಕವಿಯದು.

ಜೀವನವೃತ್ತಿಯೇ ಅಧ್ಯಾತ್ಮದ ಹಾದಿ

ಆಕಳು ಕಾಯುವ ಆನಯನಾರ :

[ಈ ಉಪನ್ಯಾಸಗಳಲ್ಲಿ ವಿವೇಚನೆಗಾಗಿ ಆರಿಸಿಕೊಂಡ ಹನ್ನೊಂದು ರಗಳೆಗಳ ವಿಷಯವನ್ನು ಈಗ ಅವಲೋಕಿಸಿದುದಾಯಿತು. ಇನ್ನುಳಿದ ಏಳು ರಗಳೆಗಳ ದೃಷ್ಟಿಯಲ್ಲಿ ಹರಿಹರ ಕವಿಯು ತೋರಿದ ನವೀನತೆಯನ್ನು ಈ ಮೊದಲೇ ಸೂಚಿಸಲಾಗಿದೆ. ಅದೆಂದರೆ ಜೀವನದ ವೃತ್ತಿಗಳನ್ನೇ ಅಧ್ಯಾತ್ಮಕ್ಕೆ ತಿರುಗಿಸಿಕೊಂಡ ಕೌಶಲ್ಯ. ಹರಿಹರನು ನಿರೂಪಿಸಿದ ಈ ಕರ್ಮಕುಶಲತೆಯನ್ನು, ಕಲೆಯ ಕುಸುರಿಯನ್ನು, ಕಾವ್ಯದ ಭಾವ ತನ್ಮಯತೆಯನ್ನು, ಅಧ್ಯಾತ್ಮದ ಆನಂದಾತಿಶಯವನ್ನು ಈಗ ಅವಲೋಕಿಸಬಹುದು]

ಆನಯನಾರನು ಪಂಚಾಕ್ಷರಿಯ ಜಪವನ್ನು ಮಾಡುತ್ತಲೇ ಹುಟ್ಟಿಬೆಳೆದನು. ಶಿವನ ಪ್ರೇರಣೆಯಂತೆ, ' ಪುರದ ಗೋವೃಂದಮಂ ಕಾವುದೇ ಲೇಸಂ 'ದು ನಿಶ್ಚಯಿಸಿದ. ಊರ ದನಗಳನ್ನು ಒಂದುಗೂಡಿಸಿಕೊಂಡು, ಹುಲ್ಲುಳ್ಳ ಹೊಲದೊಳಗೆ ಮೇಯಬಿಟ್ಟು, ತಂದ ಕಟ್ಟೋಗರವನುಂಡು, ನೆಳಲ ಹಸಲೆಯ ಮೇಲೆ ನಲಿದು ನಿಂದು,

' ಪಂಚಾಕ್ಷರಿಯ ಫಲವನೊಪ್ಪಿ ಸವಿದಂದದಿಂ
ಪಂಚವಕ್ತ್ರನ ಕಿವಿಗೆ ಸವಿಯನೀವಂದದಿಂ '
' ರಾಗರಸದೊಳಗೆ ಪಂಚಾಕ್ಷರಿಗಳೇಳುತಿರೆ
ವದನದೊಳ್ವೇಣುವಿನೊಳ್ಬೆದಕ್ಕರಂಗಳಿಗೆ
ಹೃದಯದೊಳಗುಸುರೊಳಗೆ ಶಂಕರಂ ಸಿಲ್ಕುತಿರೆ '

ಕೊಳಲೂದ ಹತ್ತಿದನು. ಗೋವುಗಳೆಲ್ಲ ಆನಯನಾರನ ಕೊಳಲಿನ ಸುನಾದಕ್ಕೆ ಮರುಳಾಗಿ, ಕಿವಿಗೊಟ್ಟು 'ಮುಗಿದ ಕಣ್ ಎತ್ತಿದ ಮುಖಂ, ಇಳಿದ ಕಟವಾಯ, ಹೊಸ ನೊರೆ ಗರುಂಕೆಗಳೆಸೆಯೆ' ಮೈಮರೆದು ಅದನ್ನು ಕೇಳಲಾರಂಭಿಸಿದವು. ಹುಲಿ, ಹುಲ್ಲೆ, ಹಾವು, ಮುಂಗಿಲಿಗಳು ತಮ್ಮಲ್ಲಿಯ ವೈರವನ್ನು ಬಿಟ್ಟು ಆಲಿಸಹತ್ತಿದವು.

'ಗಿಳಿಯಂಚೆ ಕೋಕಿಲೆಗಳೆಳಸಿ ಕೇಳ್ವವು ನೋಡ
ಅಳಿಕುಳಂ ತರುಗಿರಿಗಳೆಳಸಿ ಕೇಳ್ವವು ನೋಡ'......

ಹೀಗೆ ಸಂಜೆಯವರೆಗೆ ಮನದಣಿಯೆ ಕೊಳಲೂದಿ ಗೋವುಗಳನ್ನು ಕಾಯುತ್ತ,

'ಬಯ್ಗಾಗೆ ಗೋವೆಲ್ಲವೂ ಕೂಡಿ ಹೊಡೆತಂದು
ಮೆಯ್ಗರೆದು ಭಕ್ತಿ ತೋರದ ತೆರದೆ ನಡೆತಂದು
ತನ್ನ ಗೋವಂ ಕಾವ ಇದಿರ ಗೋವಂ ಸೋವ
....
ಅವರಿಚ್ಛೆ ತಾನಲ್ಲ ತನ್ನಿಚ್ಛೆ ಗೋವಾಗಿ
ಭವನಿಚ್ಛೆ ತಾನಾಗಿ ತನ್ನಿಚ್ಛೆ ಭವನಾಗಿ
ಪಂಚಾಕ್ಷರಿಗಳಲ್ಲಿ ತೀವಿ ಕೊಳಲೂದುತಂ
ಪಂಚವದನಂಗಳೊಳ್ವಳಪೊಕ್ಕು ಕೊಳಲೂದುತಂ'

ಜೀವಿಸುತ್ತಿದ್ದ. ಗೋವುಗಳನ್ನು ಹಲವು ಸಂವತ್ಸರಗಳವರೆಗೆ ಕಾಯುತ್ತಿರಲು ಆತನ ಭಕ್ತಿಯು ಉಕ್ಕೇರಿತು. ಆನಯನಾರನ ಭಕ್ತಿಯ ಮಹಿಮೆಯನ್ನು ಭೂತಳದೊಳಗೆ ಮೆರೆಯಿಸಬೇಕೆಂದು ಬಗೆದ ಶಿವನು ಆತನು ಗೋವುಗಳನ್ನು ಮೇಯಲು ಬಿಡುವ ತಾಣದಲ್ಲಿ ಒಂದು ಪೂತಕಕ್ಕೆಯ ಮರದ ಮೇಲೆ ಬಂದು ನಿಂತನು. ಇತ್ತ ಆನಯನಾರನು ಆಕಳುಗಳನ್ನು ಎಂದಿನಂತೆ ಅಡವಿಗೆ ಹೊಡೆದುಕೊಂಡು ಬಂದು ಕೊಳಲಿನಲ್ಲಿ ಪಂಚಾಕ್ಷರಿಯನೂದುತ್ತಿರಲು, ಕಕ್ಕೆಯ ಮರದ ಮೇಲಿನ ಮೃಡನು ಈತನ ದೃಷ್ಟಿಗೆ ಬೀಳುತ್ತಾನೆ. ಆಗ ಆತನ ಆನಂದಕ್ಕೆ ಮೇರೆಯಿಲ್ಲದಾಯಿತು.

'ಇರ್ದಮರನಂ ಶಿವಂ ಬೆರಸು ಹೃದಯದೊಳಿರಿಸಿ
ಸಾರ್ದು ಕಣ್ಮುಚ್ಚಿ ಕರಣಂಗಳಂ ಸಂವರಿಸಿ
ಶಿವಸ್ವರೂಪಂ ತನ್ನ ಹೃತ್ಕಮಲದೊಳಗಿರಿಸಿ
ಭವನ ಮೂರ್ತಿಯನಪ್ಪಿ ಮಿಕ್ಕು ಚಿತ್ತಂ ಬೆರಸಿ
ಮರದ ಮುಂದಡ್ಡಪಮುಂ ತಿಗಟಮುಂ ಪರಿದಾಡಿ
ಹರಿಸದಿಂ ಪಂಚಾಕ್ಷರಿಯನೂದಿ ಕೂಗಾಡಿ
ತಾನೆ ಕೊಳಲೂದಿ ತಾನೇ ಹಿಗ್ಗಿ ಹೆಚ್ಚುತುಂ
ನಾನಾ ರಸಂಗಳಂ ಸವಿಸವಿದು ಪೊಂಗುತುಂ

ಹೊರಗನಾಲಿಸದೆಯುರಿದಂತೆಯಾಡುತುಂ
ತೆರಹುಗಾಣದೆ ಜಾನಿಸುತ್ತೆ ಕೊಳಲೂದುತುಂ
ಜಾನಿಸುವ ಸುಖದೊಳೆಚ್ಚರ ನೊಲ್ಲದಾಡುತುಂ
ಜಾನಿಸುವ ಸುಖಕೆ ಕಣ್ಮುಚ್ಚಿ ಮರೆದಾಡುತುಂ
ಇರಲಾತನೊಳಗಿರ್ದ ತನ್ನ ಮೂರ್ತಿಯ ನೆನೆದು

....

ಧ್ಯಾನಿಸುವ ಶಿವಮೂರ್ತಿಯೊಳಗೆ ಬಂದೊಂದಿರಲು
ಧ್ಯಾನವಳಿದೊಳಗರಸುತಲ್ಲಿಲ್ಲದಿರಲು
ಕಣ್ದೆರೆಯೆ ಮರನಳಿದು ಶಿವಂ ಉಳಿದು ಮುಂದೆ ನಿಂತ'

ಆಗ ಧ್ಯಾನವಳಿದು ಕಣ್ದೆರೆದು ನೋಡಲು, ಎದುರಿಗೆ ಶಂಕರನು 'ಬಾ ಮಗನೆ' ಎಂದು ಅಪ್ಪಿಕೊಳ್ಳಲು :

'ದೇವ ಇಂತೀ ಅಡವಿಗೇಕೆ ಬಂದೈ ತಂದೆ
ದೇವ ಹುಲಿ ಕರಡಿ ಮೊದಲಾದವುಂಟೆಲೆತಂದೆ
ಕೈಲಾಸಮಂ ಬಿಟ್ಟು ಕರುಣಮಂ ಮುಂದಿಟ್ಟು
ಶೈಲಜೆಯನಿರಿಸಿ ತನುಮಂ ಮನಕ್ಕೆಡೆಗೊಟ್ಟು
ಎನಗೋಸುಗಂ ಮರದ ಮೇಲೆ ನಿಂದೈ ತಂದೆ
ಎನಗೋಸುಗಂ ವಿಂಧ್ಯದೊಳಗೆ ಬಂದೈ ತಂದೆ
ನಿನಗಿನಿತವಸ್ಥೆಯಂ ಮಾಡಿತೆನ್ನಯಭಕ್ತಿ
ನಿನಗಿನಿತು ಬೆಟ್ಟಿತಂ ಮಾಡಿತೆನ್ನಯಭಕ್ತಿ'

ಎಂದೆನ್ನುತ್ತಾ ಚರಣಗಳನ್ನು ಹಿಡಿದುಕೊಂಡಿರಲು, ಶಂಕರನು ಭಕ್ತನನ್ನು 'ಎತ್ತಿ ತಳ್ಕೈಸಿ' ಹಿಗ್ಗಿದನು. ಹೊಸಪರಿಯ ಭಕ್ತನನ್ನು ಕಂಡನೆಂದು ಶಿವನು ಆನಯನಾರನನ್ನು ಕೊಂಡಾಡಿದ.

ಜೀವನದಲ್ಲಿ ಆವುದೋ ಒಂದು ವೃತ್ತಿಯನ್ನು ಕೈಕೊಂಡಾಗಲೂ ಪರಮಾತ್ಮನ ಭಕ್ತಿಯ ತಲ್ಲೀನತೆಯನ್ನು ಹೇಗೆ ತೋರಬಹುದೆಂಬುದನ್ನು ಈ ರಗಳೆಯಲ್ಲಿ ಚಿತ್ರಿಸಲಾಗಿದೆ. ಭಕ್ತಿಯನ್ನು ಹೊರಗೆ ತೋರದ ರೀತಿಯಲ್ಲಿ ಉದ್ಯೋಗದಲ್ಲಿ ತೊಡಗುವುದನ್ನು ಇಲ್ಲಿ ಬಣ್ಣಿಸಲಾಗಿದೆ. ಇತರರ ಗೋವುಗಳನ್ನು ಕಾಯುತ್ತಿರುವಾಗಲೇ ಆನಾಯನಾರ ತನ್ನ ಆತ್ಮದ ಗೋವನ್ನೂ ಪೋಷಿಸುತ್ತಿದ್ದ. 'ತನ್ನಿಚ್ಛೆಯೇ ಗೋವಾಗಿ ಭವನಿಚ್ಛೆ ತಾನಾಗಿ'ದ್ದ. ಕೈಕೊಂಡ ವೃತ್ತಿಯೂ ದೇವನಿಗಾಗಿ ಮಾತ್ರ, ತನ್ನ ಸ್ವಾರ್ಥಕ್ಕಾಗಿ ಇಲ್ಲವೆ ಅಹಂಕಾರದ ತುಷ್ಟಿಗಾಗಿ ಅಲ್ಲವೆಂಬ ಭಾವ ನಮ್ಮಲ್ಲಿ ಬಲಿಯಬೇಕು. ದೇವನ ಇಚ್ಛೆಯೇ ತನ್ನ ಇಚ್ಛೆಯೆಂದು ಬಾಳುವ ಮಾನವನ ಜೀವನವೇ ದೈವೀಜೀವನದ ಹಾದಿ. ತೆರಹುಗಾಣದೆ ಪರಮಾತ್ಮನ ಧ್ಯಾನದಲ್ಲಿ ತೊಡಗಿಯೂ

ಅಂತಹ ಧ್ಯಾನದ ಸುಖದಲ್ಲಿ ಬಾಹ್ಯಪ್ರಜ್ಞೆಯನ್ನೂ ಮರೆತೂ ಜೀವನದ ವೃತ್ತಿಯನ್ನು ನಡೆಯಿಸುವ ರೀತಿಯನ್ನು ಇಲ್ಲಿ ಕಾಣುತ್ತೇವೆ.

ಜೀವನದಲ್ಲಿ ಕೈಕೊಂಡ ಉದ್ಯೋಗವು ದೈವೀಜೀವನದ ಸಾಧನೆಯಲ್ಲಿ ಆತಂಕವಾಗಬೇಕಾಗಿಲ್ಲ. ಅದನ್ನೇ ಸಾಧನೆಯನ್ನಾಗಿ ಬಳಸಿಕೊಳ್ಳಬಹುದು.

ಒಕ್ಕಲುಮಗ ಇಳೆಯಾಂಡ ಗುಡಿಮಾರ :

ಇಳೆಯಾಂಡ ಗುಡಿಮಾರನೆಂಬ ಶಿವಭಕ್ತ ಒಕ್ಕಲುತನದ ಉದ್ಯೋಗ ಕೈಕೊಂಡಿದ್ದ. ಆ ಉದ್ಯೋಗದಲ್ಲಿ ತೊಡಗುತ್ತಲೇ ಆತ ಶಿವನನ್ನು ಭಕ್ತಿಯಿಂದ ಭಜಿಸುತ್ತಿದ್ದ.

‘ ಸಮುಚಿತ್ತವೆಂಬ ಭೂಮಿಯನೆ ಹಸನಾಗಿರಿಸಿ
ಅಮರ್ದರ್ಶಂಕರನ ನೆನಹೆಂಬ ನೇಗಿಲನಿರಿಸಿ
ಅರಿಷಟ್ಕಮಂ ತಂದು ಹೂಡುವೆತ್ತಂ ಮಾಡಿ
ಹರಿವ ಮನಮಂ ಕಟ್ಟಿ ಹಿಡಿವ ಹಗ್ಗಂ ಮಾಡಿ
ಗರ್ವಿಸುವಹಂಕಾರಮುಮನಚ್ಚುವಂ ಮಾಡಿ
ಸರ್ವೇಶನಿಷ್ಠೆಯಿಂ ತಳಿವ ಬೀಜಂ ಮಾಡಿ
ಸುರಚಿರ ಶಿವಜ್ಞಾನ ಸಸಿಗಳಂಕುರಿಸುತಿರೆ
ಹರನ ಪರಮಾನಂದ ರಸದ ಮಳೆ ಕರೆವುತಿರೆ
ಬಿತ್ತಿ ಬೆಳೆವಂ ಶಿವನ ಸದ್ಭಕ್ತಿ ಸಸಿಗಳಂ
ಇಂತೊಳಗೆ ಭಕ್ತಾರಂಭಮಂ ಮಾಳ್ಪ
ಅಂತೆಲ್ಲರರಿಯೆ ಹೊರಗಾರಂಭಮಂ ಮಾಳ್ಪ ’

ಇಂತು ಇಳೆಯಾಂಡ ಗುಡಿಮಾರನು ತನ್ನ ವೃತ್ತಿಯನ್ನೇ ಶಿವಾನುಭವಕ್ಕೆ ತಿರುಗಿಸಿದ್ದ. ಆತನ ತ್ಯಾಗಗುಣವೂ ಅನುಪಮವೇ ಆಗಿತ್ತು.

‘ ಒಳ್ಪಿತಂ ಸೊಗಸಿತಂ ಶಿವನಭಕ್ತರ್ಗೀವ
ಎನಿತೆನಿತು ಭೂಮಿಕ್ರಮದಿಂ ಮಾರಿ ಕಿರಿದಾಗೆ
ಅನಿತನಿತು ತನ್ನಮನಂ ಪೆರ್ಚಿಪಿರಿದಾಗೆ
ಉಳ್ಳದ್ರವ್ಯಂಗಳಂ ಭವನ ಭಕ್ತರ್ಗೀವ
ಮಾರಿ ಶರಣರ್ಗಿತ್ತಸುಳ್ಳನಿತು ಭೂಮಿಯಂ
ಬೀರುತಿರ್ದಂ ಶರಣಜನರ ಮನದೀಪ್ಸೆಯಂ
ಇತ್ತನೆಲ್ಲಾ ಭೂಮಿಯಂ ಮಾರಿ ಭಕ್ತರ್ಗೆ ’

ತೋಟವನ್ನು ಮಾರಿ, ಇದ್ದ ಮನೆಯುಲ್ಲರ್ಧಮನೆಯನ್ನು ಮಾರಿ, ಶಿವಾರ್ಚಕರಿಗೆ ದಾನಮಾಡುತ್ತಾನೆ. ಅಲ್ಪಭೂಮಿ ಅರ್ಧಮನೆ ಉಳಿಯುತ್ತವೆ. ಅಲ್ಪಭೂಮಿ ಯಾದರೋ ಬಂಜರು ; ಯಾರೂ ಕೇಳದೆ ಉಳಿದದ್ದು.

‘ ಸತಿಗೊಂದು ಕಪ್ಪಡಂ ತನಗೊಂದು ಕೋವಣಂ
ಸುತನೆನಿಸುವಾತಂಗೆ ಮತ್ತೊಂದು ಕೋವಣಂ ’

ಇಷ್ಟೇ ಅವರಲ್ಲಿ ಉಳಿಯುವ ಆಸ್ತಿ, ದಾನವಾಗಿ ಕೊಡಲು ಏನೂ ಉಳಿಯದಾಗುತ್ತದೆ. ಇಷ್ಟಾದರೂ ಆತನ ಭಕ್ತಿಗೆ ಕೊರತೆಯಿಲ್ಲ. ಶರಣಸಂತತಿಗೆ ದಾನಮಾಡಬೇಕೆಂಬ ಹಂಬಲು ತೀರಲಿಲ್ಲ.

‘ ಧನವಿಲ್ಲದೊಡೆ ಏನು ಧ್ಯಾನವಿಲ್ಲದೊಡೇನು
ಮನೆಯಿಲ್ಲದೊಡೆ ಏನು ಏನುವಿಲ್ಲದೊಡೇನು
ತನುವಿರ್ದಪುದು ತನುವಿನೊಳಗರ್ಧವಿತ್ತಪೇಂ
ಮನವಿರ್ದಪುದು ಮನದೊಳರ್ಧಮಂ ಇತ್ತಪೇಂ
ಹರಣವಿದೆ ಹರಣದೊಳಗರ್ಧಮಂ ಕೊಟ್ಟಪೇಂ
ಎರಡುಕಣ್ಣಿವೆ ಎರಡರೊಳಗೊಂದ ಕೊಟ್ಟಪೇಂ ’

ಇಂತು ಶರಣರಿಗೆ ದಾನ ಮಾಡಬೇಕೆಂಬ ಇಚ್ಛೆ ನಿಮಿಷನಿಮಿಷಕ್ಕೂ ಪ್ರವರ್ಧಿಸುತ್ತಿತ್ತು. ಸರ್ವಾರ್ಪಣಭಾವ ಕ್ಷಣಕ್ಷಣಕ್ಕೂ ಆತನನ್ನು ಆವರಿಸುತ್ತಿತ್ತು.

ಇಳೆಯಾಂಡ ಗುಡಿಮಾರನ ಸರ್ವಾರ್ಪಣ ಭಾವದಿಂದೊಡಗೂಡಿದ ಭಕ್ತಿಗೆ ಶಿವನು ಒಲಿದು ಆತನನ್ನು ಪರೀಕ್ಷಿಸಬೇಕೆಂದು ‘ ಶಿರದ ನೆರೆ, ಮೆಯ್ಯತೆರೆ, ಕರದ ಕೋಲು, ಸುರುಳ್ದ ತನು, ಕೂತಬೆನ್ನು, ಜೋತುಬಿದ್ದ ಹುಬ್ಬಿನವ ’ನಾಗಿ ಇಳೆಯಾಂಡ ಗುಡಿಮಾರನ ಊರಿಗೆ ಬಂದ. ಅಲ್ಲಿ ಭಯಂಕರ ಮಳೆಯಾಗುವಂತೆ ಮಾಡಿ, ಅದರಲ್ಲಿ ತಾನು ತೊಯ್ಸಿಕೊಂಡವನಾಗಿ, ಕಾಳರಾತ್ರಿಯಲ್ಲಿ ಗಡಗಡನೆ ನಡುಗುತ್ತ ಇಳೆಯಾಂಡ ಗುಡಿಮಾರನ ಮನೆಗೆ ಬಂದ. ಇಳೆಯಾಂಡ ಗುಡಿಮಾರನಾದರೋ ತನಗಿದ್ದ ಅರ್ಧ ಮನೆಯಲ್ಲಿಯೇ

‘ ಬಳಲುತುಂ ಮೂರುನಾಲ್ಕುಪವಾಸದಿಂದಲಿರೆ
ಹಾಸಲುಂ ಹೊದೆಯಲುಂ ಹರನನಾಮಂತನಗೆ
ಆಸುರದ ಚಳಿಗೆ ಮರೆ ಈಶನಾಮವೆ ತನಗೆ
ಒಳಗೆ ಭಾಳೇಕ್ಷಣನ ನಾಮಂತೀವಿರೆ ಕರಂ ’

‘ಚಳಿಯುಂ ಹೊದ್ದದಂತೆ................’ ವಾಸಿಸುತ್ತಿದ್ದ. ಇಳೆಯಾಂಡ ಗುಡಿಮಾರನು ಚಳಿಹೊಡೆದು ನಡುನಡುಗಿ ‘ ಹೂ ಹೂ ’ ಎನ್ನುವ ಮುದುಕನನ್ನು ಕಂಡು, ಮನೆಯೊಳಗೆ ಕರೆದುತಂದು ಮಾಳಿಗೆಯ ಜಂತೆಗಳನ್ನೇ ಉರಿ ಹಚ್ಚಿ ಮುದುಕನನ್ನು ಉಪಚರಿಸುತ್ತಾನೆ. ಚಳಿ ಕಡಮೆಯಾಗುತ್ತದೆ. ಆದರೆ ‘ ಹಸಿವೆ ಹಸಿವೆ ’ ಎಂದು ಕೂಗುತ್ತಾನೆ ಆ ಕಪಟವೇಷದ ಮುದುಕ.

ಮೂರುದಿನಗಳಿಂದ ಸತಿಸುತರೊಂದಿಗೆ ಉಪವಾಸವಿದ್ದ ಇಳೆಯಾಂಡ ಗುಡಿಮಾರನು ತನ್ನ ಸತಿಯ ಕಡೆಗೆ ನೋಡುತ್ತಾನೆ. ಆಗ ಅವಳು ‘ ಮೊನ್ನೆ ಬಿತ್ತಿದ

ಮೊಳಕೆಯೊಡೆದ ಕಾಳುಗಳನ್ನೇ ಆಯ್ದು ತಂದು ಈತನ ಹಸಿವೆಯನ್ನಾರಿಸಬಹುದು' ಎಂದು ಸೂಚಿಸುತ್ತಾಳೆ. ಇಳೆಯಾಂಡ ಗುಡಿಮಾರನು ಆ ಮಧ್ಯರಾತ್ರಿಯಲ್ಲಿಯೇ ಹೊಲಕ್ಕೆ ಹೊರಡುತ್ತಾನೆ. ಆಗ, ಶಿವನ ಮಾಯೆಯಿಂದ,

'ಮತ್ತೆಮಳೆ ಪಿರಿದಾಗೆ ಮತ್ತೆ ಚಳಿಪಿರಿದಾಗೆ
ಮತ್ತೆ ಕಳ್ತಲೆ ಸುತ್ತಿ ಮುತ್ತಿಯುನ್ನತವಾಗೆ'

ಇವಾವುಗಳಿಗೂ ಬೆದರದೆ ಹೊಲಕ್ಕೆ ಹೋಗಿ ಮೊಳಕೆಗಳನ್ನು ತರುತ್ತಾನೆ. ಸತಿಯು ನಲಿದು ಆರೋಗಣೆಗೆ ಅಣಿ ಮಾಡುತ್ತಾಳೆ. ಊಟಕ್ಕೇಳುವ ಹೊತ್ತಿಗೆ ಶಿವನ ಕಪಟದಿಂದ ಅವರ ಸುತನು ಮರಣಹೊಂದುತ್ತಾನೆ. ಅತಿಥಿಯ ಊಟಕ್ಕೆ ತೊಂದರೆಯಾಗಬಾರದೆಂದು ಈ ಸುದ್ದಿಯನ್ನು ಮುಚ್ಚಿಟ್ಟು ಅತಿಥಿಗೆ ಊಟಮಾಡಿಸಲು ಸಿದ್ಧನಾದಾಗ ಶಿವನು ಪ್ರತ್ಯಕ್ಷನಾಗುತ್ತಾನೆ.

ಹೊಲವನ್ನು ಹಸನುಗೊಳಿಸಿ ಬೆಳೆಯನ್ನು ಪಡೆಯುವ ಕ್ರಮದಲ್ಲಿ ದೇಹ, ಮನಗಳ ಶುದ್ಧೀಕರಣವನ್ನು ಸ್ವಾರಸ್ಯಕರವಾದ ರೀತಿಯಲ್ಲಿ ಹೋದಿಸಿ ಪರಮಾನಂದದ ಬೆಳೆಯಲ್ಲಿ ಕೊನೆಗೊಳ್ಳುವ ಇಲ್ಲಿಯ ರೂಪಕವು ಸ್ವಾರಸ್ಯಕರವೂ ಅರ್ಥಪೂರ್ಣವೂ ಆಗಿದೆ. ಇಳೆಯಾಂಡ ಗುಡಿಮಾರನ ತ್ಯಾಗ, ಕಷ್ಟಸಹಿಷ್ಣುತೆಗಳ ಚಿತ್ರ ಹೃದಯಸ್ಪರ್ಶಿಯಾಗಿದೆ. ತನಗೆಂದು ತನ್ನ ಕುಟುಂಬದವರಿಗೆಂದು ಎಲ್ಲವನ್ನೂ ಸಂಗ್ರಹಿಸುವ, ಮುಚ್ಚಿಟ್ಟುಕೊಳ್ಳುವ ಸಂಕುಚಿತ ಸ್ವಾರ್ಥದ ಸಾಮಾನ್ಯವಾದ ಮಾನವನ ಚಿತ್ರದೊಂದಿಗೆ ಇದನ್ನು ಹೋಲಿಸಿ ನೋಡಬಹುದು. ಭಕ್ತಿಯ ಉತ್ಕಟಭಾವದಲ್ಲಿ ತನ್ನ ಸ್ವಂತ ಅನುಕೂಲತೆಗಳನ್ನೆಲ್ಲ ಬಲಿದಾನ ಮಾಡುವಾಗ ತೋರಿದ ಮನದ ಪ್ರಸನ್ನತಾಭಾವವು ಇಲ್ಲಿಯ ಮುಖ್ಯದೃಷ್ಟಿಯಾಗಿದೆ.

'ಎನಿತೆನಿತು ಭೂಮಿ ಕ್ರಮದಿಂ ಮಾರಿಕಿರಿದಾಗೆ
ಅನಿತನಿತು' ಇಳೆಯಾಂಡ ಗುಡಿಮಾರನ 'ಮನಂಪೆರ್ಚಿಪಿರಿ'

ದಾಯಿತಂತೆ.

ಬಾಳಿನಲ್ಲಿ ದ್ರವ್ಯಸಂಗ್ರಹವು ಕಿರಿದಾಗುವ ಕ್ರಮದಲ್ಲಿ ಮನದ ಹಿರಿಮೆ ಹೆಚ್ಚುವುದೆಂಬ ಮಾತನ್ನು ಇಲ್ಲಿ ನಿರೂಪಿಸಲಾಗಿದೆ. ತನ್ನ ಹಾಗೂ ತನ್ನ ಕುಟುಂಬದವರ ಸ್ಥಿತಿ ಅತ್ಯಂತ ನಿಕೃಷ್ಟವಾದಾಗಲೂ ಪ್ರಸನ್ನತಾಭಾವದಿಂದ ಇನ್ನೂ ಹೆಚ್ಚಿನ ತ್ಯಾಗಕ್ಕೆ ಸಿದ್ಧನಾದ ಇಳೆಯಾಂಡ ಗುಡಿಮಾರನು ದೈವೀಪ್ರಸನ್ನತೆಯನ್ನು ಪಡೆದನೆಂಬ ದೃಷ್ಟಿಯನ್ನು ಹರಿಹರನು ಇಲ್ಲಿ ಸ್ಪಷ್ಟಗೊಳಿಸಿದ್ದಾನೆ. ಬಿತ್ತಿದ ಬೀಜವನ್ನೇ ಎತ್ತಿ ಶರಣರ ಆಹಾರಕ್ಕೆಂದು ಒದಗಿಸುವಲ್ಲಿ ಮನದಾಶೆಯನ್ನು ಕಿತ್ತು ಭವದ ಬಿತ್ತನ್ನೇ ಹುರಿದುಹಾಕುವ ಹಾದಿಯನ್ನು ತೋರಿಸಲಾಗಿದೆ. ಈ ರಗಳೆಯಲ್ಲಿ ಶಿವನು,

'ಕಂಡೆನಿಲ್ಲಿಂತಪ್ಪ ನೇಹಮುಂ ಪೊಸತಯ್ಯ
ಈ ಮಳೆಯೊಳೀ ಚಳಿಯೊಳಿಂತು ಪೋಪವರುಂಟೆ

ಏನಾತೋ ನೊಳೆವಿತ್ತ ನೆತ್ತಿ ತಂದವರುಂಟೆ
ಮಗನ ಸಾವಂ ನೋಡದುಣಲಿಕ್ಕಿದವರುಂಟೆ
ಜಗದೊಳಗೆ ವಾಂಛಿತವನುಳಿದು ಮಾಳ್ಪವರುಂಟೆ'

ಎಂದು ಕೇಳುವಲ್ಲಿ ಈ ರಗಳೆಯ ತಿರುಳು ಹೊರಹೊಮ್ಮಿದೆ.

ಬೇಡರಕಣ್ಣಪ್ಪ :

ತಿರುಕಾಳತ್ತಿಯ ಬೇಡರಕಣ್ಣಪ್ಪನು :

'ಅತ್ಯಂತ ಶಿವನೆಂಬುದಂ ಮನಸಿನೊಳಗರಿಯ
ಅರಿಯನಾತಂ ಬೇರೆ ಪಿರಿಯರುಂಟೆಂಬುದಂ
ಪಸಿವಿಂಗೆ ತೆರಪಿಲ್ಲ ವಿಷಯಕ್ಕೆ ತೆರವಿಲ್ಲ
ವ್ಯಸನಕ್ಕೆ ತೆರಪಿಲ್ಲ ಪುಸಿವುದಕೆ ತೆರಪಿಲ್ಲ'

ಎಂಬ ರೀತಿಯಲ್ಲಿ ಜೀವಿಸುತ್ತಿದ್ದ. ಆತನ ಆಸ್ಥೆಯೆಲ್ಲ ಬೇಟೆಯೊಂದರಲ್ಲಿ ಕೇಂದ್ರೀಕೃತವಾಗಿತ್ತು. ಒಮ್ಮೆ ಶಿವನ ಪ್ರೇರಣೆಯಿಂದ ಮಾಯಾಮೃಗವೊಂದು ಆತನ ಮುಂದೆ ಸುಳಿದಾಗ ಕಣ್ಣಪ್ಪ ಬೇಟೆಗೆ ಸಿದ್ಧನಾಗಿ ಅದರ ಬೆನ್ನಟ್ಟಿದ. ಮಾಯಾಮೃಗ ಈತನ ಕೈಗೆ ಸಿಕ್ಕೀತೇ? ಅತ್ತಿತ್ತ ಸುತ್ತಾಡಿ ಶಿವಾಲಯದ ಬಳಿಯಲ್ಲಿ ಮಾಯವಾಯಿತು. ಕಣ್ಣಪ್ಪನು ಶಿವಾಲಯವನ್ನು ಪ್ರವೇಶಿಸಿ :

'................ಕೇಳು ನೀನೆನ್ನವನೆ
ನೋಡುವೆಂ ನಿನ್ನ ನನ್ನಿಗಳನಿಂದೆನ್ನವನೆ
ಹೋದ ಮೃಗಮಂ ಕಂಡೊಡೆನಗೆ ನೀನೊಳ್ಳಿದಂ
ಆದಲ್ಲಿ ಭಾಗೆಯುಂ ವಂಚಿಸೆಂ ಕೊಳ್ಳದಂ'

ಎಂದು ತನ್ನ ಹುಟ್ಟುಗುಣಕ್ಕೆ ತಕ್ಕಂತೆ ಬೇಡಿಕೊಳ್ಳುತ್ತಾನೆ. ಆಗ ಶಿವನು ಒಳವೊಳಗೆ ನಗುತ್ತ 'ಇವನ ಕಡುಮೋಹವರಿವೆ'ನೆಂದು ಮಾಯವಾದ ಮೃಗವನ್ನು ತೋರಿಸುತ್ತಾನೆ. ಕಣ್ಣಪ್ಪನಿಗೆ ಆನಂದವಾಯಿತು. ತನ್ನಿಚ್ಛೆ ಕೈಗೂಡಿದುದರಿಂದ ಶಿವನಲ್ಲಿ ನಂಬುಗೆ ಉಕ್ಕೇರಹತ್ತಿತು.

'ಇನ್ನಗಲೆನಿನ್ನಗಲೆನಯ್ಯಯ್ಯ ನಿನ್ನುವಂ
ಮುನ್ನವರಿಯದೆ ಕೆಟ್ಟೆನಿನಿತುವರ ನಿನ್ನುವಂ
ಎನಗುಳ್ಳವಂ ನೀನೆ ನಿನಗುಳ್ಳವಂ ನಾನೇ
.......................'

ಎಂದು ನವೀನಭಕ್ತಿಯ ಭರವಲ್ಲಿ ಉಬ್ಬುತ್ತಾನೆ. ದೇವನಿಗೆ ತನ್ನ ರೀತಿಯಲ್ಲಿಯೇ ಭೋಜನ ಸಲ್ಲಿಸುತ್ತಾನೆ. ಕಣ್ಣಪ್ಪನಲ್ಲಿ ಬೇರೂರಿದ ಭಕ್ತಿ, ಅತ್ಯಂತ ನಿಕಟಸ್ನೇಹವಾಗಿ ಪರಿಣಮಿಸುತ್ತಿದೆ. ದೇವನಿಗೆ ಚಳಿಯಾಗಬಾರದೆಂದು ಶಿವಲಿಂಗದ ಸುತ್ತಲೂ ಜೆಂಕಿ

ಯನ್ನು ಹಾಕಿಟ್ಟು ಬೆಳಗಿನವರೆಗೂ ಕಾಯ್ದುಕೊಂಡು ಕೂಡುತ್ತಾನೆ. ಬೇಟೆಗೆ ತಾನು ಹೋದಾಗ ದೇವನು ಒಬ್ಬಂಟಿಗನಾಗುವನೆಂಬ ತವಕವನ್ನು ತೋರುತ್ತಾನೆ. ದೇವನಿಗೆ ಉಣಿಸುವಲ್ಲಿ ತಾಯಿಯ ವಾತ್ಸಲ್ಯ ತೋರುತ್ತಾನೆ. ವಿಧ್ಯುಕ್ತವಾಗಿ ಪೂಜೆಗೈವ ಅರ್ಚಕನಿಗೆ ಅಸಹ್ಯವಾಗುವ ರೀತಿಯಲ್ಲಿ ದೇವನ ಮೂರ್ತಿಯನ್ನು ಪೂಜಿಸುತ್ತಾನೆ. ಶುಚಿಗೊಳಿಸಿದ ದೇವನ ಮೂರ್ತಿಯನ್ನು ಮತ್ತೆ ತನ್ನ ರೀತಿಯಲ್ಲಿ ಪೊಲಗೆಡಿಸುತ್ತಾನೆ. ಕಣ್ಣಪ್ಪನ ಪೂಜೆಯನ್ನು ಹರಿಹರನು ಚಿತ್ರಿಸಿರುವುದು ಹೀಗೆ :

'ಬಾಗುತುಂ ಕೈಚಪ್ಪಳಿಕ್ಕುತುಂ ಬೀಗುತುಂ
ಕೂಗುತುಂ ತೊನೆಯುತೊಂದೇ ಕಾಲೊಳಾಡುತುಂ
ಬಾಯಿಂದೆ ಕೊಂಬು ಮೌರಿಯ ಕಹಳೆಗಳನೂದಿ
ಬಾಯಿಂದೆ ಕರಡೆಯಂ ಬಾಜಿಸುತೆ ಕೊಳಲೂದಿ
ಎನ್ನವನೆ ನೋಡೆಂದು ಎತ್ತಿಕ್ಕಿಯಾಡುತುಂ
ಚನ್ನವನೆ ನೋಡೆಂದು ಸಿಳ್ಳಿಕ್ಕಿಯಾಡುತುಂ
ಮುಂದೆ ತುರುಬಂ ಕಟ್ಟಿದುಮ್ಮಿ ಸಲೆಯಾಡುತಂ
ಚಂದಚಂದದ ಬೇಡರಾಟಮಂ ತೋರುತಂ
ಆಡಲರಿಯದೆ ಕಾಲ್ಗೆ ಬಂದಂತೆಯಾಡುತಂ................
ಬೆರಿಕೆ ಇಲ್ಲದ ಬಚ್ಚಬರಿಯ ಭಕ್ತಿಯೊಳಾಡಿ
ನೆರವಿಲ್ಲದೇಕಾಂತ ಶಾಂತ ಭಕ್ತಿಯೊಳಾಡಿ'

ಬೆಳಗಾಗುವವರೆಗೂ ಭಕ್ತಿಯ ಆವೇಶದಲ್ಲಿ ಕುಣಿದಾಡಿ ಎಂದಿನಂತೆ ಬೇಟೆಗೆ ಹೋಗುತ್ತಾನೆ. ಬೇಟೆಯಾಡುವಾಗಲೂ ಶಿವನ ಧ್ಯಾನವನ್ನು ಬಿಟ್ಟೂ ಬಿಡದೆ ಮಾಡುತ್ತಾನೆ. ಬೇಟೆಯಲ್ಲಿ ದೊಡಗಿದಾಗಲೂ ಆತನ ಮನಸ್ಸು ಶಿವಲಿಂಗದ ನೆನಹಿನ ಆಳದಲ್ಲಿ ಮುಳುಗಿರುತ್ತಿದೆ.

ಎಂದಿನಂತೆ ಅರ್ಚಕನು ಅಗ್ಗವಣಿ ಹೂ ಪತ್ರೆಗಳನ್ನು ಹೊತ್ತುಕೊಂಡು ಶಿವಾಲಯಕ್ಕೆ ಬಂದಾಗ ಅಲ್ಲಿಯ ಹೊಲಸನ್ನು ಕಂಡು ಅದಕ್ಕೆ ಹೇಸಿ ಸಿಡಿಮಿಡಿಗೊಳ್ಳುತ್ತಾನೆ. 'ಪ್ರಾಣಿಯಂ ಕೊಲಲೀವುದಿದು ಧರ್ಮವೇ ದೇವ' ಎಂದೆನುತ್ತ ಸಾರಣೆ ಮಾಡಿ, ಮೈತೊಳೆದುಕೊಂಡು ಪತ್ರ, ಪುಷ್ಪದಿಂದ ಪೂಜೆ ಮಾಡಿ, ಧೂಪಾರತಿಯನ್ನೆತ್ತಿ, ನೈವೇದ್ಯ ಮಾಡುತ್ತಾನೆ. ಬೇಡನು ಪ್ರತಿದಿನವೂ ಹೀಗೆ ಮೂರ್ತಿಯನ್ನು ಪೊಲಗೆಡಿಸುತ್ತಿರಲು ಅರ್ಚಕನಿಗೆ ಕಾಡುಬೇಡನ ಬಗೆಗೆ ದ್ವೇಷವುಂಟಾಗುತ್ತಿದೆ. ಇದನ್ನೆಲ್ಲ ನೋಡುತ್ತಿದ್ದ ಪಾರ್ವತಿಯು ಶಿವನನ್ನೇ ಕೇಳುತ್ತಾಳೆ,

'ಜಪತಪಧ್ಯಾನ ಪ್ರದಕ್ಷಿಣಂಗಳಂಮಾಡಿ
ಪೂಜಿಸುವ ಪಾರ್ವಂಗೆ ಬಾಯ್ಮಿಡುಕದಿರ್ದಪಿರಿ
ಓಜೆಗೆಟ್ಟಾ ಲುಬ್ಧಕಂಗೆ ಕರುಣಿಸಿದಪಿರಿ'

ಹೀಗೇಕೆ ಎಂದು. ಶಿವನ ಉತ್ತರವನ್ನು ಕುರಿತು ಹರಿಹರನ ವಾಣಿಯಿದು :

‘ ಸತ್ಯವಿಲ್ಲದ ಪೂಜೆ ಸಸಿನವಪ್ಪುದೆ ಗೌರಿ
ನಿತ್ಯವಲ್ಲದ ಹಾಡು ಸೊಗಸಪ್ಪುದೇಗೌರಿ
ಮನವಿಲ್ಲದವ ಮುಟ್ಟಿ ಬಡಿವಡೆದತೆರನೆನಗೆ
ಮನವುಳ್ಳಂ ಬಡಿಯೆ ಪೂಜಿಸಿದತೆರೆನೆನಗೆ
ಎನ್ನವನೆ ಎಂಬ ಸಲುಗೆಯ ನುಡಿಯೆಮಂತ್ರವದು
ಎನ್ನನೇಕೂರ್ತುಮಾಡುವುದು ಶಿವತಂತ್ರವದು ’

ಅರ್ಚಕನ ಆಡಂಬರದ ಪೂಜೆಯನ್ನೂ, ಕಣ್ಣಪ್ಪನ ಸಹಜಭಕ್ತಿಯನ್ನೂ ತುಲನೆಮಾಡಿ ಶಿವನು ಪಾರ್ವತಿಗೆ ವಿವರಿಸುತ್ತಾನೆ. ಅಲ್ಲದೆ ಪ್ರತ್ಯಕ್ಷಪ್ರಮಾಣದಿಂದ ಅವರಲ್ಲಿಯ ತಾರತಮ್ಯವನ್ನು ಪಾರ್ವತಿಗೆ ತೋರಬಯಸುತ್ತಾನೆ.

ಅರ್ಚಕನು ಮೂರ್ಖಕಿರಾತನನ್ನು ಕಠಾರಿಯಿಂದ ಇರಿದು ಕೊಲ್ಲುವೆನೆಂದು ಶಿವಾಲಯದೆದುರು ಬಂದು ನಿಲ್ಲುತ್ತಾನೆ. ಆಗ ಶಿವನು ಅವನ ಮನಸ್ಸನ್ನು ಪರೀಕ್ಷಿಸಬೇಕೆಂದು ತನ್ನ ಒಂದು ಕಣ್ಣಲ್ಲಿ ನೆತ್ತರು ಒಸರುವಂತೆ ಮಾಡುತ್ತಾನೆ. ಕಣ್ಣಲ್ಲಿ ಬರುವ ರಕ್ತವನ್ನು ಕಂಡು ಅರ್ಚಕನು ಅಂಜಿ ಭಯಗೊಂಡು ‘ ಅರಸಿಂಗೆ ಕೇಡಿತ್ತೊ ದೇಶಕ್ಕೆ ಪೊಲ್ಲದೋ ’ ಎನ್ನುತ್ತ ತನ್ನೂರಿಗೆ ಹೋಗಿ ಜನರೆದುರು ಹೇಳಲು ಆ ಜನರೆಲ್ಲರು ಬಂದು ನೋಡಿ ಅಂಜಿ ಓಡಿಹೋಗುತ್ತಾರೆ.

ಇತ್ತ ಕಣ್ಣಪ್ಪನು ಶಿವಾಲಯವನ್ನು ಪ್ರವೇಶಿಸುತ್ತಲೇ ಶಿವನ ಕಣ್ಣೊಳಗಿಂದ ರಕ್ತ ಇಳಿಯುವುದು ದೃಷ್ಟಿಗೋಚರವಾಗುತ್ತಿದೆ. ಆಗ,

‘................ಮುಂಗೆಟ್ಟು ಮತಿಗೆಟ್ಟು ಬಾಳ್ಕೆಣನಾಗಿ
ಬಿಲ್ಲಂ ಬಿಸುಟು ಕಳೆದು ಮಾಂಸಂಗಳಂ ಚಲ್ಲಿ
ತಲ್ಲಣಿಸುತಗ್ಗಣಿಯನುಗುಳಿ ಪೂವಂ ಚಲ್ಲಿ
ಎಲೆ ತಂದೆ ಎನ್ನವನೆ ಏನಾದುದೈ ’

ಎಂದು ಹಣೆಯನ್ನು ಗಟ್ಟಿಸಿಕೊಳ್ಳುತ್ತಾ, ‘ ಕೆಟ್ಟೆನಾಂ ಕೆಟ್ಟೆನಾಂ ಬೆಂದೆನಾಂ ಬೆಂದೆನಾಂ ’ ಎನ್ನುತ್ತಾ ರಂಗಮಂಟಪದಲ್ಲಿ ಹೊರಾಳಾಡುತ್ತಾನೆ. ಕಡೆಗೆ ಸಂತೈಸಿಕೊಂಡು ಬಂದು ಶಿವನೆದುರು ಕುಳಿತು ತಾನುಟ್ಟ ಬಟ್ಟೆಯಿಂದ ಒರೆಸುತ್ತಾನೆ. ರಕ್ತದ ಹೊನಲು ನಿಲ್ಲುವುದಿಲ್ಲ. ‘ ಆ ಕಣ್ಗೆ ಎನ್ನ ಕಣ್ಣಿತ್ತು ನೋಡುವೆ ’ನೆಂದು ವಿಚಾರಿಸಿ ಕಣ್ಣಪ್ಪನು ಬಾಣದಿಂದ ತನ್ನ ಒಂದು ಕಣ್ಣನ್ನು ಕಿತ್ತಿ ಹಚ್ಚುತ್ತಾನೆ. ಆಗ ರಕ್ತ ಇಳಿಯುತ್ತಿದ್ದ ಕಣ್ಣು ಥಳಥಳಿಸಿ ಬೆಳಗಲಾರಂಭಿಸುವುದರ ಜೊತೆಗೆ ಮತ್ತೊಂದು ಕಣ್ಣಲ್ಲಿ ರಕ್ತ ಬರಲು ಪ್ರಾರಂಭಿಸುತ್ತಿದೆ. ‘ಇನ್ನಂಜೆನಿನ್ನಂಜೆನಿನ್ನೊಂದು ಕಣ್ಣುಂಟು’ ಎಂದುಕೊಂಡು ತನ್ನ ಮತ್ತೊಂದು ಕಣ್ಣನ್ನು ಕಿತ್ತು ರಕ್ತ ಸುರಿಯುತ್ತಿದ್ದ ಲಿಂಗದ ಕಣ್ಣಿಗೆ ಹಚ್ಚುತ್ತಾನೆ. ಆಗ ಶಿವನು ಆತನ ಸರ್ವಾರ್ಪಣ ಭಕ್ತಿಗೆ ಮೆಚ್ಚಿ,

‘ ಭಾಪುರೆ ಕಣ್ಣಪ್ಪ ಪೂತುರೇ ಕಣ್ಣಪ್ಪ
ಎನಗೆ ಕಣ್ಣುಂ ನೀನೆ ಎನಗೆ ಪುಣ್ಯಂ ನೀನೆ
ಎನಗೆ ಪುತ್ರಂ ನೀನೆ ಎನಗೆ ಮಿತ್ರಂ ನೀನೆ ’

ಎಂದು ಗಿರಿಜೆಯೆದುರು ಕೊಂಡಾಡಹತ್ತಿದ.

ವ್ಯಸನಕ್ಕೆ, ಪುಸಿವುದಕ್ಕೆ ತೆರಪಿಲ್ಲದಂತೆ ತನ್ನ ವೃತ್ತಿಯಲ್ಲಿ ತೊಡಗಿದ್ದ ಬೇಡರ ಕಣ್ಣಪ್ಪ ಶಿವನ ನಿಷ್ಠೆಯನ್ನು ಬಲಿಸಿಕೊಳ್ಳುತ್ತಾನೆ. ತನ್ನ ಕಾಡುರೀತಿಯಲ್ಲಿಯೆ ತನ್ನ ಭಕ್ತಿತನ್ಮಯತೆಯನ್ನು ತೋರುತ್ತಾನೆ. ವಿಧ್ಯುಕ್ತನಾಗಿ ನಡೆಯುವ ಅರ್ಚನೆಗಿಂತ ಬೇಡನ ವೃತ್ತಿಯಲ್ಲಿದ್ದು ಅದಕ್ಕನುಗುಣವಾಗಿ ಅರ್ಚನೆಗೈಯ್ಯುತ್ತಿದ್ದ ಕಣ್ಣಪ್ಪನ ರೀತಿಯು ವಿಚಿತ್ರವಾಗಿ ತೋರುತ್ತಿದೆ. ಆದರೆ ಶಿವನೊಂದಿಗೆ ಆತನು ಪಡೆದ ಆತ್ಮೀಯತೆಯು ಶಿವನನ್ನು ಮೆಚ್ಚಿಸುತ್ತಿದೆ. ಶಿವನು ಆತನ ನಿಷ್ಠೆಯನ್ನು ಪ್ರಕಟಗೊಳಿಸಿ ಆತನ ‘ ಸತ್ಯವುಳ್ಳ ’ ಪೂಜೆಯನ್ನು ಮನ್ನಿಸುತ್ತಾನೆ. ಮನಮುಟ್ಟಿ ಮಾಡುವ ಪೂಜೆ ಹೇಗಿದ್ದರೂ ದೇವನನ್ನೊಲಿಸಬಲ್ಲದು. ಅದು ಆಡಂಬರದ ಪೂಜೆಗಿಂತ ಉನ್ನತವಾದುದು ; ಫಲಕಾರಿಯಾದುದು. ಕೈಕೊಂಡ ಹೀನವೃತ್ತಿಯೂ ದೇವನನೊಲಿಸುವ ಸಾಧನವಾಗಬಲ್ಲದು. ಬೆರೆಕೆಯಿಲ್ಲದ ಬಚ್ಚಬರಿಯ ಭಕ್ತಿಯ ಹಿರಿಮೆಯಿಲ್ಲಿದೆ.

ಮೀನುಗಾರ ಅತಿಭಕ್ತ :

ಕದಳೀತೋಟ, ಕಬ್ಬಿನತೋಟ, ಹೂದೋಟಾದಿಗಳಿಂದ ನಾನಾಬಗೆಯ ಬೆಳೆಗಳಿಂದ ರಮಣೀಯವಾದ ಚೋಳದೇಶದ ಒಂದು ಊರು. ಅದರ ನೆರೆಯಲ್ಲಿ ಒಂದು ಹೊಳೆ. ಅದು ಮೀನುಗಳ ಆಗರವಾಗಿತ್ತು. ಹೊಳೆಯದಡದಲ್ಲಿ ವಾಸವಾಗಿದ್ದ ಅನೇಕ ಮೀನುಗಾರರು ಅಲ್ಲಿಯ ಮೀನುಗಳನ್ನು ಬಲೆಹಾಕಿ ಹಿಡಿದು ಪುರಕ್ಕೆ ಒಯ್ದು ಮಾರಿ ಕೈತುಂಬ ಹಣ ಸಂಪಾದಿಸಿ ಸಂಸಾರ ನಡೆಸಿದ್ದರು.

ಇವರಲ್ಲಿ ಅತಿಭಕ್ತನೆಂಬೊಬ್ಬ ಮೀನುಗಾರನಿದ್ದ. ಆದರೆ ಆತನು ಇತರ ಮೀನುಗಾರರಂತಿರಲಿಲ್ಲ.

‘………………ಸತ್ಯ ನಿತ್ಯಂ
ಭೂಮಿಮುಸುಂಕಿದ ನಿಧಾನದತೆರದಿಂ
ತಾಮಸ ಮುಸುಕಿದ ಸತ್ವದ ತೆರದಿಂ
ಶಿವಪೂಜಾಪರನತಿಗುಣಯುಕ್ತಂ
ಭವಭಯರಹಿತಂ ಕಾಲವಿಮುಕ್ತಂ ’

ಅತಿಭಕ್ತನು ಭೂಮಿಯೊಳಗೆ ಮರೆಯಾಗಿದ್ದ ಚಿನ್ನದ ಕೊಡದಂತಿದ್ದನು. ತಮೋಗುಣವು ಪ್ರಖರವಾದಾಗ ಸಾತ್ವಿಕಗುಣವು ಮರೆಯಾಗುವದು ಸಹಜ. ಅತಿ

ಭಕ್ತನು ತಮೋಗುಣದವರಾದ ಇತರ ಮೀನುಗಾರರ ಮಧ್ಯದಲ್ಲಿದ್ದರೂ ಸಾತ್ವಿಕವೃತ್ತಿಯವನಾಗಿದ್ದ. ಶಿವಪೂಜೆಯಲ್ಲಿ ನಿರತನಾಗಿದ್ದ. ಸದ್ಗುಣಿಯಾಗಿದ್ದ. ಸಂಸಾರದ ಜಂಜಡ ಆತನಿಗಿದ್ದಿಲ್ಲ. ಮೀನು ಹಿಡಿಯುವ ವೃತ್ತಿಯನ್ನೇನೋ ಕೈಕೊಂಡಿದ್ದ. ಅದರ ರೀತಿಯೇ ಬೇರೆಯಾಗಿತ್ತಂತೆ :

‘ ಲೀಲೆಯಿಂದ ಮೀನ್ಗಳ ತೆಗೆಯುತ್ತಂ
ಆ ಮೀನಂ ಮಾರಿದ ಬಹುಧನದಿಂ
ಸೋಮಧರನ ಭಕ್ತರನತಿ ಮುದದಿಂ
ತೃಪ್ತಿಬಡಿಸುತಂ........................
ಅಷ್ಟಮೂರುತಿ ಶಿವನಂ ಪೂಜಿಸುತಂ
ಮೊದಲೊಳು ಸಿಕ್ಕಿದ ಮೀನಂ ಬಿಡುವಂ
ಮದನ ಹರಗೆ ಪ್ರಿಯಾರ್ಥದಿ ಬಿಡುವಂ ’

ಮೀನುಗಳನ್ನು ಮಾರಿಬಂದ ಅಧಿಕ ಧನವನ್ನು ಶಿವನ ಭಕ್ತರಿಗಾಗಿ ವಿನಿಯೋಗಿಸುತ್ತಿದ್ದ. ಮೀನುಗಾರಿಕೆಯನ್ನು ಒಂದು ಕಾಯಕವೆಂದು ಕೈಕೊಂಡಿದ್ದ.

ಹೀಗೆ ಕೆಲವು ಕಾಲದವರೆಗೆ ನಡೆಯಲು ಆ ಹೊಳೆಯೊಳಗಿನ ಮೀನುಗಳೆಲ್ಲ ತೀರಿಹೋಗುತ್ತಿವೆ. ಏಳು ದಿನಗಳವರೆಗೆ ಬಿಸಿಲು ಗಾಳಿಯನ್ನದೆ ಬಲೆಹಾಕಿ ಕುಳಿತರೂ ಅತಿಭಕ್ತನಿಗೆ ಒಂದು ಮೀನವೂ ದೊರೆಯಲಿಲ್ಲ. ಆಗ ಸತಿ–ಸುತರು ಹಸಿವೆಗೆ ಪಕ್ಕಾದರು.

‘ ಪಸಿವಂ ತಾಳದೆ ಮಕ್ಕಳು ಅಳುತಿರೆ
ನಸುನಗೆ ಮೊಳೆಯಲು ಧೈರ್ಯದೊಳಿರುತಿರೆ
ಚಿತ್ತದೊಳಗೆ ಧೈರ್ಯಂ ತುಂಬುತ್ತಿರೆ
ಸಂತತ ಶಿವಭಕ್ತಂ ತಾಂ ಕೊಂಕದೆ ’

ಅತಿಭಕ್ತನು ಹಸಿವೆಗಾಗಿ ಬಳಲಲಿಲ್ಲ; ಹೆದರಲಿಲ್ಲ, ಧೈರ್ಯದಿಂದ ಶಿವಭಕ್ತಿಯುತನಾಗಿ ತೃಪ್ತನಾಗಿಯೇ ಇದ್ದ.

[‘ ನಪ್ರಹೃಷ್ಯೇತ್ಪ್ರಿಯಂ ಪ್ರಾಪ್ಯಂ ನೋದ್ವಿಜೇತ್ ಪ್ರಾಪ್ಯಚಾಪ್ರಿಯಂ
ಸ್ಥಿರಬುದ್ಧಿರಸಂಮೂಢೋ ಬ್ರಹ್ಮವಿದ್ಬ್ರಹ್ಮಣಿ ಸ್ಥಿತಃ ’ ॥
(ಗೀತಾ ಅ. ೫. ಶ್ಲೋ ೨೦)]

(ಪ್ರಿಯವಸ್ತು ದೊರಕಿದರೆ ಆನಂದಪಡದೆ, ಅಪ್ರಿಯವಸ್ತು ದೊರಕಿದರೆ ದುಃಖಿಸದೆ, ಮೋಹರಹಿತನಾದ ಸ್ಥಿರಬುದ್ಧಿಯವನೇ ಬ್ರಹ್ಮಜ್ಞಾನಿಯು) ಎಂಬ ಗೀತೆಯಲ್ಲಿಯ ಉಕ್ತಿಗೆ ಉದಾಹರಣೆಯಾಗಿದ್ದ ಅತಿಭಕ್ತ. ಹೀಗೆ ಅತಿಭಕ್ತ ಸಮಚಿತ್ತದಿಂದ ದಿನಗಳೆಯುತ್ತಿರಲು ಹರನು ಈತನ ಭಕ್ತಿಯ ಪರೀಕ್ಷೆ ಮಾಡಲೆಂದು ನಿರ್ಧರಿಸಿದ. ಮೀನದ ರೂಪು ಧರಿಸಿ ಅತಿಭಕ್ತನ ಬಲೆಗೆ ಸಿಲುಕಿದ. ಬಂಗಾರದ ಬಣ್ಣದಿಂದ ಹೊಳೆಯುತ್ತಿದ್ದ

ದೊಡ್ಡದಾದ ಆ ಮೀನವನ್ನು ಕಂಡು ಇತರ ಮೀನುಗಾರರು ಬೆರಗಾದರು. ಆದರೆ ಅತಿಭಕ್ತನು ತನ್ನ ನೇಮದಂತೆ 'ಹರನಿಗರ್ಪಿತ'ವೆಂದು ಅದನ್ನು ನೀರಲ್ಲಿ ಬಿಟ್ಟುಬಿಡಲು, ಬೆರಗಾದ ಜನರು ಈತನನ್ನು ಮರುಳನೆಂದು ಹಾಸ್ಯಮಾಡಿದರು. ಜನರು ಏನೇ ಅಂದರೂ ಅತಿಭಕ್ತನು ತನ್ನ ನೇಮಕ್ಕೆ ವ್ಯತ್ಯಯವನ್ನು ತಂದುಕೊಳ್ಳಲಿಲ್ಲ.

'ಕೋಡದೆ ಕೊಂಕದೆಯಳಲದೆ ಬಳಲದೆ
ಬಾಡದೆ ಮನದೊಳಗಾಸೆಯೊಳ್ಳಾಳದೆ'

ತನ್ನ ನೇಮವನ್ನು ಪಾಲಿಸಿದ.

ಎರಡನೆಯ ಸಲ ಬಲೆ ಬೀಸಿದಾಗಲೂ ಅದೇ ಮೀನವು ಬಲೆಗೆ ಬಿದ್ದಿತು. ಮತ್ತೆ 'ಶಿವನಿಗರ್ಪಿತ'ವೆಂದು ಅತಿಭಕ್ತ ಅದನ್ನು ಬಿಟ್ಟುಗೊಟ್ಟ. ಮರಳಿ ಮರಳಿ ಬಲೆ ಬೀಸಿದಾಗಲೆಲ್ಲ ಮೊದಲಿನ ಮೀನವೇ ಸಿಕ್ಕಿಬೀಳಹತ್ತಿತು. ಇದೇ ಕ್ರಮ ಸಂಜೆಯವರೆಗೆ ನಡೆದು ಕಡೆಗೆ ಅತಿಭಕ್ತನು ಬರಿಗೈಯಿಂದ ಮನೆಗೆ ಮರಳಿದ.

ಮರುದಿನ ಬೆಳಗಿನಲ್ಲಿ ಹೊಳೆಗೆ ಬಂದು ಬಲೆ ಬೀಸಿದಾಗಲೂ ಅದೇ ಮೀನು ಬಲೆಯಲ್ಲಿ ಸಿಲುಕಿತು. ಇದನ್ನು ಕಂಡು ಅತಿಭಕ್ತನಿಗೆ ಕೌತುಕವಾಯಿತು.

'ಇನ್ನೊಮ್ಮೆಯು ತಾ ಬೀಸಿ ನೋಡಿದರೆ
ಮುನ್ನಿನ ಮತ್ಸ್ಯವು ಬಂದಿತ್ತಾದರೆ
ಎನ್ನ ಕೈಯುಮಂ ಛೇದಿಸಿಕೊಂಬೆನು
ಇನ್ನು ಬಲೆಯನು ಬೀಸದ ಭಾಷೆಯು'

ಎಂದು ಕೊನೆಗೊಮ್ಮೆ ಬಲೆಯನ್ನು ಬೀಸಲು ಸಿದ್ಧನಾದ. ಮತ್ತೆ ಮತ್ತೆ ಶಿವನಿಗರ್ಪಿತವಾದ ಮೀನವೇ ಬಲೆಗೆ ಬೀಳುತ್ತಿರುವುದರ ಮರ್ಮವು ಅತಿಭಕ್ತನಿಗೆ ಹೊಳೆದಿರಬೇಕು. ಅಂತೆಯೇ ಆತನು ಇನ್ನೊಮ್ಮೆ ಬಲೆ ಬೀಸಿದಾಗ ಮುನ್ನಿನ ಮೀನವೇ ಸಿಕ್ಕರೆ ಕೈಯನ್ನು ಕಡಿದುಕೊಳ್ಳುವೆನೆಂದು ನಿರ್ಧರಿಸಿದ. ಕೊನೆಯದಾಗಿ ಬಲೆ ಬೀಸಿ ತೆಗೆದಾಗ,

'ಭಕ್ತನ ಭಕ್ತಿಯ ಪಾಶದಿ ಸಿಲ್ಕುತ
ಅತ್ಯನುಪಮನಾ ಭಕ್ತಿಗೆ ಸಿಲ್ಕುತ
ಎಸೆವ ಗಿರಿಜೆ ವೃಷಭೇಶ್ವರ ಸಹಿತಂ
ನಿಜರೂಪಂ ದೋರಿದನಾಕ್ಷಣದೊಳು'

ಮಾನವನ ಭಕ್ತಿಯೆಂಬ ಪಾಶದಿಂದ ಶಿವನನ್ನೂ ಮೀನದಂತೆ ಹಿಡಿದು ಹಾಕಬಹುದೆಂದು ಅತಿಭಕ್ತನ ರಗಳೆಯಲ್ಲಿ ಹರಿಹರನು ನಿರೂಪಿಸಿದ್ದಾನೆ. ಮೀನುಗಾರಿಕೆಯನ್ನು ಕಾಯಕದ ತತ್ವಕ್ಕೇರಿಸಿದ್ದಾನೆ, ಹರಿಹರ ಈ ರಗಳೆಯಲ್ಲಿ. ಮಾನವನ ಜೀವನದ ವೃತ್ತಿ ಏನೇ ಇದ್ದರೂ ಅದರಲ್ಲಿ ಭಕ್ತಿ, ನಿಷ್ಠೆಗಳನ್ನು ಅಳವಡಿಸಿಕೊಂಡು ದೈವೀಪ್ರಸನ್ನತೆಗೆ ಅರ್ಹನಾಗಬಹುದು. ಮೀನು ಹಿಡಿಯುವ ಉದ್ಯೋಗದಲ್ಲಿ ತೊಡಗಿಯೂ ಇಂತಹ ಭಕ್ತಿ-

ನಿಷ್ಠೆಗಳನ್ನು ತೋರಬಹುದು. ಸತಿಸುತರು ಹಸಿವೆಯಿಂದ ಕಂಗೆಟ್ಟಾಗಲೂ 'ಚಿತ್ತದೊಳಗೆ ಧೈರ್ಯ ತುಂಬಿ' ಶಿವಭಕ್ತಿಯ ಬಲದಿಂದ ಕೊಂಕದೆ ಇರುವುದನ್ನು ಸಾಧ್ಯ ಮಾಡಿಕೊಳ್ಳಬಹುದು. ಇಂತಹ ನಿಷ್ಠೆಗೆ ಶಿವನು ಒಲಿದೇ ಒಲಿಯುತ್ತಾನೆ. ಆತನ ಕಠಿಣಪರೀಕ್ಷೆಯಲ್ಲಿ ವಿಚಲರಾಗದೆ ನಾವು ನಿಲ್ಲಬೇಕು; ಆತನನ್ನು ನಂಬಬೇಕು. ದೈವೀಕೃಪೆ ಒದಗಿಯೇ ಒದಗುತ್ತದೆ.

ಭತ್ತ ಕೊಯ್ಯುವ ಅರಿವಾಳ್ತಾಂಡ:

ತಿಣ್ಣಮಂಗಳವೆಂಬ ಪುರದ ಅರಿವಾಳ್ತಾಂಡನು ಭತ್ತ ಕೊಯ್ದು ಜೀವಿಸುತ್ತಿದ್ದ.

'ನನ್ನಿ ಇಲ್ಲದೆ ಬೇರೆ ನುಡಿಗಳಂ ನುಡಿದರಿಯ
ಅನ್ನೆಯಂಗಳನೆಂದುವುಂ ಮರೆದು ಕೇಳ್ದರಿಯ'

ಸತ್ಯವಲ್ಲದೆ ಬೇರೆ ನುಡಿಯಲಾರ; ಅನ್ಯಾಯಕ್ಕೆಳಸಲಾರ. ಹೀಗೆ ಸದಾಚಾರಸಂಪನ್ನನಾಗಿ ಶಿವಭಕ್ತಿಯುತನಾಗಿ ಶಿವಾಲಯಕ್ಕೆ ಬಂದು ಶಿವದರ್ಶನ ಪಡೆದು ಹರ್ಷಿತನಾಗುತ್ತಿದ್ದ.

'ಎನಗೆ ಹೊನ್ನುಂ ನೀನೆ ಎನಗೆ ಚನ್ನಂ ನೀನೆ
ಎನಗಪ್ಪವಂ ನೀನೆ ಎನಗುಳ್ಳವಂ ನೀನೆ'

ಎಂದು ಅನನ್ಯಭಾವದಿಂದ ದೇವರನ್ನು ನೆನೆವುತ್ತಿರಲು, ದಿನ ಕಳೆದಂತೆ ಆತನಲ್ಲಿ ಭಕ್ತಿ ಉಕ್ಕೇರಹತ್ತಿತು. ಶಿವನನ್ನು ಬಿಟ್ಟು ಅಗಲಲಾರದಷ್ಟು ಆತನ ಮನಸ್ಸು ಗಟ್ಟಿಗೊಂಡಿತು.

'ಕಂತುಹರನಂ ಬಿಟ್ಟು ಪೋಗನೇನಾದೊಡಂ
ನಂಟರುಂ ಶಂಭುವೇ ನಲ್ಲರುಂ ಶಂಭುವೇ
ಉಂಟೆನಿಪ ಬಂಧುವುಂ ಬಳಗವುಂ ಶಂಭುವೇ'

ಎಂಬ ಶ್ರದ್ಧೆ ಅರಿವಾಳ್ತಾಂಡನಲ್ಲಿ ಬಲಿಯಿತು. ಇಲ್ಲಿ 'ತಂದೆ ನೀನು–ತಾಯಿ ನೀನು–ಬಂಧು ನೀನು–ಬಳಗ ನೀನು, ನೀನಿಲ್ಲದೆ ಎನಗೆ ಮತ್ತಾರಿಲ್ಲವಯ್ಯಾ........' ಎಂಬ ಬಸವವಾಣಿಯನ್ನೂ ನೆನಪಿಗೆ ತಂದುಕೊಳ್ಳಬಹುದು. ಅರಿವಾಳ್ತಾಂಡನು 'ಅರಸಿ ಕರೆದೊಡೆ ಪೋಪನಲ್ಲದಿರ್ದೊಡೆ ಪೋಗ' ಇದೊಂದು ಆತನ ನೇಮ. ಕೂಲಿಯಾಳು ಬೇಕಾದವರು ಈತನನ್ನು ತಾವಾಗಿಯೇ ಹುಡುಕಿಕೊಂಡು ಬರಬೇಕು. ತಾನಾಗಿಯೇ ಕೂಲಿಯ ಆಶೆಗಾಗಿ ಹೋಗುತ್ತಿದ್ದಿಲ್ಲ. ಬಹಳ ಲಾಭ ದೊರೆಯುವಂತಿದ್ದರೂ ಶಂಕರನನ್ನು ಅಗಲಿ ಹೋಗುವ ಮನಸ್ಸು ಆತನಿಗೆ ಆಗುತ್ತಿದ್ದಿಲ್ಲ. ಒಂದು ವೇಳೆ ಕೂಲಿಗೆ ಹೋದರೂ ಅವನ ಚಿತ್ತವೆಲ್ಲ ಶಿವನ ಕಡೆಗೇ ಇರುತ್ತಿತ್ತು.

'ಇಂತು ಕೂಲಿಗೆ ಕೊಯ್ವನಂತು ಪರಮಂಗೀವ
ಇಂತಿಂತು ಎಂತುವುಂ ಶಿವನತ್ತಲೇಭಾವ'

ಮಾಡುತ್ತಿರುವ ಎಲ್ಲ ಕಾರ್ಯಗಳಲ್ಲಿ ಶಿವನ ನೆನಹನ್ನು ಮರೆಯದಿದ್ದರೆ ಮಾತ್ರ ಆತನು ಒಲಿಯುವನು. ಸಂಸಾರದಲ್ಲಿ ಕಷ್ಟಗಳು ಒಂದರಮೇಲೊಂದು ಬಂದೊದಗುವುದು ಸಹಜ. ಅವುಗಳ ಪರಿಹಾರಕ್ಕೆಂದು ನಾವು ಬಗೆಬಗೆಯಾಗಿ ವಿಚಾರಮಾಡುವುದೂ ಉಂಟು. ದೇವರನ್ನು ಶುದ್ಧ ಭಾವದಿಂದ ನೆನೆಯಲು ನಮಗೆ ಅವಕಾಶವೇ ದೊರೆಯದೆ ಹೋಗುತ್ತಿದೆ. ಆದರೆ ಶರಣರ ಜೀವನದ ರೀತಿಯೇ ಬೇರೆ. ಬರುವ ಸಂಕಟಗಳು ಶಿವನ ಪ್ರಸಾದವೆಂದು ತಿಳಿದು ಅವರು ಹಸನ್ಮುಖಿಗಳಾಗಿ ಅವುಗಳನ್ನು ಸ್ವೀಕರಿಸುವರು. ‘ ನಡೆವೆಡೆಯಲ್ಲಿ, ನುಡಿವೆಡೆಯಲ್ಲಿ, ಭಾವಿಪ್ಪೆಡೆಯಲ್ಲಿ ರಮಿಪ್ಪೆಡೆಯಲ್ಲಿ ’ ಶಿವನನ್ನು ಮರೆಯುವುದಿಲ್ಲ. ಅದಕ್ಕೆಂದೇ ಅವರಿಗೆ ಶಿವನ ಕೃಪೆಯೂ ಒದಗಿಬರುತ್ತಿದೆ.

ಅರಿವಾಳ್ತಾಂಡನು ಶಿವಾರ್ಚನೆಯಲ್ಲಿ ತೊಡಗಿರುವಾಗ ಒಮ್ಮೆ ಕೂಲಿಯ ಅಕ್ಕಿ ದೊರೆಯದೆ ಹೋಗುತ್ತಿದೆ. ಅನೇಕ ದಿನಗಳವರೆಗೆ ಉಪವಾಸವಿರಬೇಕಾಯಿತು. ಆದರೆ ಆತ ‘ ಹಸಿವೆಯನ್ನು ಕಟ್ಟುವುದು ಹೇಗೆ ’ ಎಂದು ಚಿಂತಿಸಲಿಲ್ಲ.

‘ ಅಹ ಉಪವಾಸವಲ್ಲಲ್ಲಯ್ಯ ಬರ್ದುಕಿದೆಂ
ಈ ತೆರದೆ ನಡೆಯಿಸಯ್ಯ ನಿನ್ನನು ಬೇಡುವೆಂ
ಈ ತೆರದೆ ನೇಮವಂ ಕುಂದದಾಂ ಮಾಡುವೆಂ ’

ಎನ್ನುತ್ತಿದ್ದ. ಆಹಾರವಿಲ್ಲದೆ ಮನುಷ್ಯನು ಬಾಳಲಾರ ; ಆದರೆ ಇಲ್ಲಿ ಅರಿವಾಳ್ತಾಂಡನು ‘ ಬರ್ದುಕಿದೆಂ ’ ಎಂದು ಹೇಳುತ್ತಾನೆ. ದಿನಗಳೆದಂತೆ ಅವನ ಮುಖ ‘ ರಾಗದಿಂದೊಂದೊಂದು ದಿನಕೆ ಕಳೆಯೇರುತಿ ’ತ್ತಂತೆ. ಭಕ್ತನ ಬವಣೆಯನ್ನರಿತ ಶಿವನು ತನ್ನ ಭಕ್ತನ ಗುಣಗಳನ್ನು ಪಾರ್ವತಿಗೆ ತೋರಿಸಲು ಅರಿವಾಳ್ತಾಂಡನಿದ್ದ ಶಿವಾಲಯಕ್ಕೆ ಬರುತ್ತಾನೆ. ಇತ್ತ ಅರಿವಾಳ್ತಾಂಡನು ಹಸಿವೆಯಿಂದ ಸೊರಗಿದ ದೇಹದವನಾಗಿ, ಕೈಯಲ್ಲಿ ಕುಡುಗೋಲನ್ನು ಹಿಡಿದುಕೊಂಡು, ತಡವರಿಸುತ್ತ ಶಿವಪ್ರಸಾದಕ್ಕೆ ಅಕ್ಕಿಯನ್ನೊಯ್ಯಲು ಭತ್ತದ ಗದ್ದೆಗೆ ಬರುತ್ತಾನೆ. ಪಚ್ಚಪಸಿಯೊಕ್ಕಲ ಮಗನಾದ, ಬಡಕಲು ದೇಹದವನಾದ ಅರಿವಾಳ್ತಾಂಡನನ್ನು ಕಂಡ ಗಿರಿಜೆಯು,

‘ ಹರ ನಿಮ್ಮನರ್ಚಿಸಲ್ಬಲ್ಲನೇ ಎಲೆ ದೇವ
ಪಾಡಲಾಡಲ್ಪೊಗಳಲೀತನೇನರಿವನೇ ’

ಎಂದು ಶಿವನನ್ನು ಕೇಳುತ್ತಾಳೆ. ಪಾರ್ವತಿಯ ದೃಷ್ಟಿಯಲ್ಲಿ ಅರಿವಾಳ್ತಾಂಡನು ದಡ್ಡನಂತೆ ಕಾಣುತ್ತಾನೆ. ಪರಮೇಶ್ವರನನ್ನು ಪಾಡಲು, ಪೊಗಳಲು ಇಂತಹನಿಗೆ ಸಾಧ್ಯವೇ, ಎಂದು ಪಾರ್ವತಿಗೂ ಕೂಡ ಸಂದೇಹ. ಆಗ ಮಾರಹರನು ಕೊಡುವ ಉತ್ತರವನ್ನು ಹರಿಹರನ ಮಾತಿನಲ್ಲಿಯೇ ಆಲಿಸಬೇಕು :

‘ ಅರ್ಚಿಸಲ್ಕರಿಯನನ್ನಕ್ಕಳುಪದಿರಬಲ್ಲ
ಎಚ್ಚತ್ತು ಪೊಗಳಲರಿಯಂ ಹುಸಿಯದಿರಬಲ್ಲ
ಆಡಲರಿಯಂ ಬಲ್ಲವರ್ಬಲ್ಲನೆಲೆದೇವಿ

ಪಾಡಲರಿಯಂ ಪಾಡಿನರ್ಥವೀತಂ ದೇವಿ
ಎನ್ನನರಿಯದ ಚೆಲ್ವು ಶಬುದ ಚೆಲ್ವೆಲೆ ಗಿರಿಜೆ
ಎನ್ನನರಿಯದ ಪಾಡು ಪಲವಾದಿತೆಲೆ ಗಿರಿಜೆ
ನಡೆಯಿಲ್ಲದನ ಪಾಡ ನಾನೊಲ್ವೆನೇದೇವಿ
ನುಡಿದು ಪುಸಿವನ ನುಡಿಯನಾನೊಲ್ವೆನೇದೇವಿ
ನುಡಿಕಿರಿದು ನಡೆಪಿರಿದು ನೋಡೆನ್ನ ಭಕ್ತರ್ಗೆ
ನುಡಿಗಳುಂ ನಡೆಗಳುಂ ಪೊರಪೊಣ್ಮವಾತಂಗೆ
ಒಡಲ ಪಿಡಿದಿಹ ಗುಣಗಳಿಲ್ಲವಾ ಭಕ್ತರಿಗೆ
ಸಡಗರದ ಸಂಭ್ರಮದ ಬಗೆ ಪೊರ್ದನೀತಂಗೆ
ಅವನ ಚರಿತವ ಪೊಗಳ್ವಡರಿದು ವೇದಂಗಳಿಗೆ
ಭುವನದೊಳು ನಡೆವ ಮನುಜರ ಪರಿಯು ಅಲ್ಲಿವಗೆ '

ಭಕ್ತರ ಬಗೆಯು ಭುವನದೊಳು ನಡೆವ ಮನುಜರ ಪರಿಗಿಂತ ಬೇರೆಯೇ ಆಗಿರುತ್ತದೆ. ಅವರಿಗೆ ಸಡಗರದ ಸಂಭ್ರಮ ಪೊರ್ದದು ; ಅಂಗಗುಣಗಳು ಅಂತಹವರನ್ನು ಆವರಿಸವು. ದೇವನನ್ನರಿಯದ ಶಬ್ದದ ಚೆಲ್ವು ಅವರಿಗೆ ಬೇಕಿಲ್ಲ. ಅನ್ಯಕ್ಕೆ ಅಳುಪದ, ಹುಸಿಯದೆ ಇರಬಲ್ಲ ಅವರ ಗುಣಗಳಲ್ಲಿಯೇ ಅರ್ಚನೆ-ಪ್ರಾರ್ಥನೆಗಳು ಅಡಕವಾಗಿವೆ. ಹಾಡುವದಕ್ಕೆ ಗೊತ್ತಿಲ್ಲದೆ ಅವರು ಹಾಡಿನ ಅರ್ಥವೇ ಆಗಿರುತ್ತಾರೆ. ಅವರ ನುಡಿ ಕಿರಿದು ; ನಡೆ ಪಿರಿದು, ನಡೆನುಡಿಗಳ ಸೀಮೆಯಾಚೆಯ ಪರಮಸತ್ಯವನ್ನು ಅಳವಡಿಸಿಕೊಳ್ಳಬಲ್ಲರವರು. ಹರಿಹರನ ಈ ನಿರೂಪಣೆಯಲ್ಲಿ ಜೀವನವನ್ನು ಕುರಿತ ಆತನ ದರ್ಶನವು ಸ್ಫುಟವಾಗಿ ಹೊರಹೊಮ್ಮಿ ನಿಂತಿದೆ. ದರ್ಶನದ ಬೃಹತ್ತನ್ನು ರಮಣೀಯ ಕಾವ್ಯದಲ್ಲಿ ರೂಪಿಸಿದ ಈ ಅರ್ಥಪೂರ್ಣ ಸೊಗಸು ಕನ್ನಡಕಾವ್ಯದ ಹೆಮ್ಮೆಯ ಸೊತ್ತಾಗಿದೆ. ಸರ್ಪಭೂಷಣ ಕವಿಗಳ ಒಂದು ಹಾಡನ್ನು ಈ ಸಂದರ್ಭದಲ್ಲಿ ನೆನೆದುಕೊಳ್ಳಬಹುದು.

‘ ಸಕಲವೇದ ಶಾಸ್ತ್ರ ತರ್ಕ। ಮುಖರರಾಗಿ ನಿಜವನರಿವ।
ಯುಕುತಿಯರಿತು। ಕಾಲಕೀಡಾಗುವವರೆ ಕಿರಿಯರು।
ಮುಖದೊಳಂದಕ್ಷರವು ತೋರ। ದಖಿಳದಂತ್ಯವರಿದುಪೂರ್ಣ।
ಸುಖದಿ ಮುಳುಗಿ ಮೂರ್ಚೆ ಹೋಗುವವರೆ ಹಿರಿಯರು।
ಕರದಿ ದಂಡ ಯೋಗವಟ್ಟೆ। ಶಿರದಿಜಡೆಗಳಿರ್ದುಜೀವ
ಪರಮರೈಕ್ಯವರಿಯದಿರ್ದೊಡವರೆ ಕಿರಿಯರು।
ಕುರಿಯ ಕಾಯುತಿರ್ದೊಡಿರಲಿ। ಪರಮ ಶ್ರೀಗುರುಸಿದ್ಧನೊಡನೆ।
ಬೆರೆದು ಬ್ರಹ್ಮವಾಗಬಲ್ಲೊಡವರೆ ಹಿರಿಯರು।
ಹೊರಗೆ ಹಿರಿಯರಾಗಿ ನಿಜವ। ನರಿಯದವರೆ ಕಿರಿಯರೊಳಗ।
ನರಿದು ಕಿರಿಯರಾಗಿರೊಡವರೆ ಹಿರಿಯರು। '

ಇಲ್ಲಿ ಹಿರಿಕಿರಿಯರಲ್ಲಿಯ ಅಂತರವನ್ನು ಅರ್ಥಪೂರ್ಣವಾಗಿ ವಿವರಿಸಲಾಗಿದೆ. ನಿಜವಾದ

ಶರಣನು ಡಾಂಭಿಕಭಕ್ತನಿಗಿಂತ ಹೇಗೆ ಭಿನ್ನನಾಗಿರುತ್ತಾನೆಂಬುದನ್ನು ಸರ್ಪಭೂಷಣ ಶಿವಯೋಗಿಗಳು ತಮ್ಮ ಭಾವಗೀತೆಯಲ್ಲಿ ಹೇಳಿವರೆ ಹರಿಹರನು ಶರಣರ ಕಥೆಗಳ ಮೂಲಕವಾಗಿ ಅದನ್ನು ಬಿತ್ತರಿಸಿದ್ದಾನೆ.

ಬಟ್ಟೆ ಒಗೆಯುವ ತಿರುಕುರುಂಪೆ ತೊಂಡ :

ತಿರುಕುರುಂಪೆ ತೊಂಡ ಕಾಂಚೀಪುರದ ಪರಮಶಿವಭಕ್ತ. ಅವನಿಗೆ ಶಿವನಲ್ಲಿ ಅಗಾಧವಾದ ಶ್ರದ್ಧೆ. ನಿತ್ಯವೂ ನಸುಕಿನಲ್ಲಿ ಹೂಗಳಿಂದ ಶಿವನ ಪಾದಗಳನ್ನು ಸಿಂಗರಿಸಿ ಪೂಜಿಸುತ್ತಿದ್ದನು. ಆತನು ಬಟ್ಟೆಯೊಗೆಯುವ ಕಾಯಕ ಕೈಕೊಂಡಿದ್ದ. ಮೃಡನ ಭಕ್ತರ ಬಟ್ಟೆಗಳನ್ನು ಮಾತ್ರ ಹಸನು ಮಾಡುತ್ತಿದ್ದನು. ಆತನು ತನ್ನ ವೃತ್ತಿಯನ್ನೆ ಶಿವಾನುಭವಕ್ಕೆ ತಿರುಗಿಸಿಕೊಂಡು ಕೈಲಾಸವನ್ನು ಕಂಡ. ಶರಣನಾದ ಹರಿಹರನು ರೂಪಕದ ಮೂಲಕ ಈ ಮಾತನ್ನು ಸ್ವಾರಸ್ಯಕರವಾಗಿ ಹೇಳಿದ್ದಾನೆ :

‘ ಪಾಪವೆಂಬ ಮಲಿನಮನದ ಸೀರೆಯಂ ತೆರಳ್ಚಿ ಕಟ್ಟಿ
ಕೋಪವೆಂಬ ಕತ್ತೆ ನಿಲಲು ಬೆನ್ನ ಮೇಲೆ ಮಾಣದೊಟ್ಟಿ
ನಡೆದು ಭವನ ಭಕ್ತಿರಸದ ಹೊಳೆಯ ತಡಿಯ ಬಳಿಗೆ ಬಂದು
ಮೃಡನ ಶರಣೆನುತ್ತೆ ದೇಹವೆಂಬ ಕಲ್ಲಬಳಿಗೆ ಬಂದು
ತಾಪತ್ರಯಗಳೆಂಬ ಕಿಚ್ಚಿನಿಂದೆ ಕುದಿಸೆ ಕುದಿವುತಿರಲು
ತಾಪವಾರೆ ವಸ್ತ್ರ ಕುಲಮನಲ್ಲಿ ಪಿಡಿದು ತೊಳೆವುತಿರಲು
ಒಗೆದ ನೊಗೆದನಮಮ ಹರನ ಪರಮಭಕ್ತಿರಸದೊಳೊಗೆದ ’

ವೃತ್ತಿಯಲ್ಲಿಯ ಆತನ ತಲ್ಲೀನತೆಯನ್ನೂ ಹರಿಹರನ ಮಾತುಗಳಲ್ಲಿಯೇ ಕೇಳೋಣ :

‘ ಒಗೆದ ನೊಗೆದನಾಹದೇಹಭಾವವಳಿದು ಸುಖದೊಳೊಗೆದ
ಒಗೆದ ದನಿಯನಾಲಿಸಿದರ ಪಾಪ ಓಡಿಹೋಗಲೊಗೆದ
ಒಗೆಯೆ ಸಿಡಿದ ಹನಿಗಳೆಯ್ದಿದವರೆ ಮುಕ್ತರಾಗಲೊಗೆದ
ಏಕನಿಷ್ಠೆಯಿಂದೆ ತಿರುಹಿ ಮುರುಹಿ ಹಿಳಿದು ಹಿಂಡಿ ಮತ್ತೆ
ಏಕನಭವನೆಂಬ ದಿಟದ ಬಿಸಿಲೊಳೊಣಗಿಸುತ್ತ ಮತ್ತೆ
ಪುರಹರ ಪ್ರಸಾದದಿಂದೆ ರಂಜಿಸಲ್ಕೆ ಗಂಜಿ ಇಟ್ಟು
ಶರಣ ಸಂಗದಿಂದೆ ಘಟ್ಟಿಸುತ್ತೆ, ಹೊಳಹನೊಪ್ಪವಿಟ್ಟು
ಪರಮನಂಘ್ರಿಗಳ್ಗೆ ಇಚ್ಛೆಯಂತೆ ಮಡಿಸಿ ಗಳಿಗೆ ಮಾಡಿ
ತಿರುಕುರುಂಪೆ ತೊಂಡರೆಸೆವ ಮನದ ಮಡಿಯನೊಂದುಗೂಡಿ
ಸಕಲ ಭಕ್ತಜನಕೆ ಮನದ ಮಡಿಯನಿವುತಿರ್ದನಲ್ಲಿ ’

ಅಗಸನ ಜೀವನಚಿತ್ರ ಓದುಗರ ಕಣ್ಮುಂದೆ ಸ್ಪಷ್ಟವಾಗಿ ರೂಪುಗೊಳ್ಳುವಂತಹ ಶಬ್ದ ಚಿತ್ರವಿಲ್ಲಿದೆ. ಕತ್ತೆಯ ಮೇಲೆ ಮಲಿನವಾದ ಬಟ್ಟೆಗಳನ್ನು ಹೇರಿಕೊಂಡು, ಹೊಳೆಯ

ಶೀರದ ಕಲ್ಲಮೇಲೆ ಸ್ವಚ್ಛವಾಗಿ ಒಗೆದು, ಹಿಂಡಿ, ಬಿಸಿಲಿಗೆ ಒಣಗಿಸಿ ಗಳಿಗೆ ಮಾಡಿ ಕೊಡುವ ಅಗಸನ ಹೋರೆಯ ಚಿತ್ರವಿಲ್ಲಿದೆ.

ತಿರುಕುರುಂಪೆ ತೊಂಡನೂ ಒಬ್ಬ ಅಗಸ. ಆದರೆ ಆತನು ಸಾಮಾನ್ಯ ಅಗಸ ನಂತಿರಲಿಲ್ಲ. ತನ್ನ ಉದ್ಯೋಗವನ್ನೇ ಅಧ್ಯಾತ್ಮಕ್ಕೆ ಅಳವಡಿಸಿಕೊಂಡು ಇಹಪರಗಳೆರಡಕ್ಕೂ ಮಾನ್ಯನಾದ ಶರಣನಾತ. ಪಾಪವೆಂಬ ಮಲಿನ ಮನದ ಬಟ್ಟೆಯ ಮೊಟ್ಟೆಯನ್ನು ಕೋಪವೆಂಬ ಕತ್ತೆಯ ಬೆನ್ನಮೇಲೆ ಹೇರುತ್ತಾನೆ. ಶಿವಭಕ್ತಿರಸವೇ ಆತನು ಬಟ್ಟೆಯೊಗೆಯುವ ಹೊಳೆ. ದೇಹವೇ ಒಗೆಯುವ ಕಲ್ಲು. ದೇಹಭಾವವಳಿದು ಹೋಗುವಂತೆ ಒಗೆದು ಏಕನಿಷ್ಠೆಯಿಂದ ತಿರುಹಿ ಮುರುಹಿ ಹಿಳಿದು ಹಿಂಡಿ ದೇವನೊಬ್ಬನೇ ಎಂಬ ದಿಟದ ಬಿಸಿಲೊಳಗೆ ಒಣಗಿಸುತ್ತಾನೆ. ಹರನ ಪ್ರಸಾದವೆಂಬ ಗಂಜಿಯನ್ನು ಹಾಕಿ ಹೊಳಪು ಬರುವಂತೆ ಮಡಿಚಿ ಗಳಿಗೆ(ಇಸ್ತ್ರಿ) ಮಾಡಿ ತನ್ನ ಮನದ ಮಡಿಯನ್ನೇ ಸಕಲಭಕ್ತರಿಗೆ ಕೊಡುವಂತೆ ಬಟ್ಟೆಗಳನ್ನು ಮರಳಿ ಕೊಡುತ್ತಿದ್ದನು. ಹರಿಹರನ ರೂಪಕದ ಕೌಶಲ್ಯ, ಶಬ್ದ ಚಿತ್ರ, ಮಾತಿನ ಸೊಗಸು, ಇವುಗಳನ್ನು ಈ ಚಿತ್ರದಲ್ಲಿ ಕಾಣಬಹುದು. ಸಾಮಾನ್ಯರಿಗೂ ಅರ್ಥವಾಗುವ ನುಡಿಗಳನ್ನು ಹರಿಹರನು ಪೂರ್ಣವಾಗಿ ಬಳಸಿದ್ದಾನೆ.

> ‘ ಪಂಡಿತರುಂ ವಿವಿಧಕಳಾ
> ಮಂಡಿತರುಂ ಕೇಳತಕ್ಕ ಕೃತಿಯಂ ಕ್ಷಿತಿಯೊಳ್
> ಕಂಡರ್ ಕೇಳ್ದೊಡೆ ಗೊರವರ
> ಸುಂಡುಚಿಯೋ ಬೀದಿವರೆಯ ಬೀರನಕತೆಯೋ ’

ಎಂದು ಹೇಳುವಲ್ಲಿ ಸಾಹಿತ್ಯವು ಪಂಡಿತಮಾನ್ಯವಾಗಬೇಕು, ಅವರಿಗಷ್ಟೇ ತಿಳಿಯಬೇಕು, ಅವರಷ್ಟೇ ಕೇಳಬೇಕು, ಸಾಮಾನ್ಯ ಜನರಿಗೆ ಅದು ತಿಳಿಯಬಾರದು, ಎಂಬ ಸೂಚನೆಯಿರಬಹುದು. ಹರಿಹರನೂ ಒಮ್ಮೆ ಇಂತಹ ಮಾತನ್ನು ಹೇಳಿದ್ದ. ಇಂತಹ ಸಂಪ್ರದಾಯವನ್ನು ಬಿಟ್ಟುಗೊಟ್ಟು ಜನವಾಣಿಯ ಮೂಲಕ ಗಹನಸಂದೇಶ ಬೀರುವ ಧೈರ್ಯ, ಸಾಹಸಗಳು ಹರಿಹರಕವಿಯವಾಗಿವೆ. ಸರಳತೆಯಲ್ಲಿಯೇ ಘನತೆಯಿದೆಯೆಂಬುದೂ ಹರಿಹರನ ದೃಷ್ಟಿಯಾಗಿದೆ.

ತಿರುಕುರುಂಪೆ ತೊಂಡನ ಭಕ್ತಿಗೆ ಒಲಿದು ಶಿವನು ಅವನನ್ನು ಕೈಲಾಸಕ್ಕೆ ಒಯ್ಯಬೇಕೆಂದು ನಿಶ್ಚಯಿಸುತ್ತಾನೆ. ಕೈಲಾಸಕ್ಕೆ ಒಯ್ಯುವ ಮೊದಲು ಭಕ್ತನ ಸತ್ವ ಪರೀಕ್ಷೆಯೊಂದು ಆಗಬೇಕಲ್ಲ ! ಶಿವನು ತನ್ನ ದೇವಗಣಕ್ಕೆ

> ‘ ಮನುಜಲೋಕದೊಳಗೆ ತೊಳಗಿ ಬೆಳಗಿ ಮೆರೆವ ಚೋಳದೇಶದಲ್ಲಿ
> ತಿರುಕುರುಂಪೆ ತೊಂಡರೆಂಬ ಭಕ್ತರಿರ್ಪರಲ್ಲಿ ಪೊಕ್ಕು
> ನೆರೆದು ನಡೆದು ಮುಂದುಗೆಡಿಸಿ ಬನ್ನಿ ’

ಎಂದು ಆಜ್ಞೆ ಮಾಡುತ್ತಾನೆ. ದೇವಕೋಟಿಗಣವು ಆಜ್ಞೆಯನ್ನು ಶಿರಸಾವಹಿಸಿ ಆತನನ್ನು ಕಾಡಬೇಕೆಂದು ಅವನಿದ್ದಲ್ಲಿಗೆ ಬರುತ್ತಿದೆ. ‘ ತಾ ಮುಂದು ನಾ ಮುಂದು ’

ಎಂದು ತಮ್ಮ ಗುಡ್ಡದೆತ್ತರದ ಬಟ್ಟೆಗಳನ್ನು ಒಗೆಯಲಿಕ್ಕೆ ಕೊಡುತ್ತಾರೆ. ಒಗೆಯಲು ಭಕ್ತರ ಬಟ್ಟೆ ಸಾಕಷ್ಟು ಸಿಕ್ಕವೆಂದು ಆತನು ಸಂತೋಷಪಡುತ್ತಾನೆ. ಸಂತೋಷದಲ್ಲಿ ಆತನು ಬಟ್ಟೆಗಳನ್ನು ಒಗೆದಂತೆ ಅವು ಕ್ಷಣಕ್ಷಣಕ್ಕೂ ಹೆಚ್ಚಾಗುತ್ತಿವೆ. ಗುಡ್ಡದಾಕಾರ ದಲ್ಲಿ ಬಿದ್ದ ಬಟ್ಟೆಗಳು ಸವೆಯುವದೇ ಇಲ್ಲ. ತಿರುಕುರುಂಪೆ ತೊಂಡನು ನಿದ್ದೆ-ನೀರಡಿಕೆಯೆನ್ನದೆ, ಹಗಲು-ರಾತ್ರಿಯೆನ್ನದೆ ಬಟ್ಟೆಗಳನ್ನು ಒಗೆಯುತ್ತಾನೆ. ಉಪವಾಸ ದಿಂದ ಶಕ್ತಿಗೆಟ್ಟು ಬೀಳುತ್ತೇಳುತ್ತ 'ಅಂಜೆನಯ್ಯ ದೇವ ಹೋಗೆನು' ಎಂದು ಮನದಲ್ಲಿ ನಿಶ್ಚಯಿಸಿ ಒಗೆಯುತ್ತಾನೆ. ಆತನ 'ಭಕ್ತಿ ಚಿತ್ತದಲ್ಲಿ ಪೊಕ್ಕು ನೆಗೆದು, ನಿಷ್ಠೆ ರೂಪುಗೊಂಡು, ಮನದ ಮೊನೆಯೊಳ್' ಉಕ್ಕುತ್ತಿದೆ. ಇಷ್ಟಾದಾಗ ಸಿದ್ಧಿಯಾಗದೆ ಹೇಗೆ ಉಳಿದೀತು? ಆತನು ಮುಟ್ಟಿದೊಡನೆಯೇ ಅರಿವೆಗಳೆಲ್ಲ ಸ್ವಚ್ಛವಾಗಹತ್ತಿದವು. ಆತನು ನೋಡಿದ, ನೆನೆದ; ಬಟ್ಟೆಗಳೆಲ್ಲ ನಿರ್ಮಲವಾಗಹತ್ತಿದವು. ಕ್ಷಣಾರ್ಧದಲ್ಲಿ ದೇವಗಣದ ಅರಿವೆಗಳೆಲ್ಲ ಹಸನುಗೊಂಡವು. ಇದನ್ನು ಕಂಡು ತಿರುಕುರುಂಪೆ ತೊಂಡ ನನ್ನು ಮುಂದುಗೆಡಿಸುವದು 'ಎಮ್ಮವಶವಿದಲ್ಲ' ಎನ್ನುತ್ತ ದೇವಗಣದವರು ಶಿವ ನೆದುರು ಬಂದು ಆತನ ಅಚಲನಿಷ್ಠೆಯನ್ನು ವರ್ಣಿಸುತ್ತಾರೆ. ಆಗ ಶಂಕರನು 'ಗಿರಿಜೆ ಬಾರ, ನೋಡಬಾರ, ಬಾರ-'ಎಂದು ಪಾರ್ವತಿಯನ್ನು ಕರೆದುಕೊಂಡು ಬಂದು ಗಗನದಲ್ಲಿ ಕಾಣದಂತೆ ಇರಿಸಿ ತಾನು ವೇಷ ಪರಿವರ್ತಿಸಿಕೊಂಡು ತನ್ನ ಹೊಲಸು ಬಟ್ಟೆಯನ್ನು ಕೊಟ್ಟು 'ನಾಳೆ ಸೂರ್ಯೋದಯದೊಳಗಾಗಿ ಒಗೆದುಕೊಡು-' ಎಂದು ಹೇಳಿ ಹೋಗುತ್ತಾನೆ.

ಇತ್ತ ತಿರುಕುರುಂಪೆ ತೊಂಡನು ಬಟ್ಟೆಯನ್ನು ಒಗೆಯಲು ಪ್ರಾರಂಭಿಸುತ್ತಲೇ ಶಿವನ ಮಾಯೆಯಿಂದ ಮೋಡ ಕವಿದು ಭಯಂಕರವಾದ ಮಳೆ ಸುರಿಯುತ್ತಿದೆ. ಇದಾವುದಕ್ಕೂ ಗಮನ ಕೊಡದೆ ತನ್ನ ಒಗೆಯುವ ಕಾಯಕದಲ್ಲಿ ಆತ ನಿರತನಾದ.

'ಒಗೆದನೊಗೆದನುದಯದಿಂದೆಯಸ್ತಮಾನವಾಗಲೊಗೆದು
ಒಗೆದು ನೋಡಿ ಮತ್ತೆಯೊಗೆದು ಬಿಚ್ಚಿನೋಡಿ ಮತ್ತೆಯೊಗೆದು
ಕರತಳಂಗಳೊಳಗೆ ಕೆಂಪು ಕೆಚ್ಚುಗಟ್ಟಿ ಸುಲಿಯಲೊಗೆದು
ಬೆರಲ ತುದಿಗಳೊಳಗೆಯರುಣ ಜಲದ ಧಾರೆಯೊಗೆಯಲೊಗೆದು
ಒಗೆಯೆ ಬಿಳಿದುಹಾರೆ ಕಗಿದು ತೋರೆ ಮಸಿಯಬಣ್ಣವೇರೆ'

ಅಂಗೈಯಲ್ಲಿ ರಕ್ತ ಮಂಜುಗಟ್ಟಿ ಕಡೆಗೆ ಬೆರಳ ತುದಿಗಳಿಂದ ರಕ್ತ ಹರಿಯಹತ್ತಿದರೂ ಬಟ್ಟೆ ಒಗೆಯುವದನ್ನು ಆತ ನಿಲ್ಲಿಸುವದಿಲ್ಲ. ಕಪಟವೇಷದ ಶಿವನು ಭಕ್ತನ ನಿಷ್ಠೆ ಯನ್ನು ಪರೀಕ್ಷಿಸಲೆಂದು ಕೊಟ್ಟ ಬಟ್ಟೆಯದು. ಒಗೆದು ನೋಡಿ, ಮತ್ತೆ ಒಗೆದು ಬಿಚ್ಚಿ ನೋಡಿ ಒಗೆದಂತೆಲ್ಲ ಕಪ್ಪುಕಪ್ಪಾಗಹತ್ತಿತು. ಬೆಳಗಾಗುವವರೆಗೆ ಒಗೆದರೂ ಮತ್ತಿಷ್ಟು ಕಪ್ಪಾಗುತ್ತ ಹೋಗುತ್ತಿದೆ. 'ಬಟ್ಟೆಯನ್ನು ಹಸನು ಮಾಡಲಿಕ್ಕೆ ಕೊಟ್ಟು ಹೋದ ಭಕ್ತನು ಬರುವ ವೇಳೆಯಾಯಿತು, ಏನು ಮಾಡಲಿ, ಹೇಗೆ ಮುಖ

ತೋರಿಸಲಿ 'ಎಂಬ ಚಿಂತೆ ಆವರಿಸಿದರೂ ಒಗೆಯುವ ಕೆಲಸ ಸಾಗಿಯೇ ಇತ್ತು. ಇತ್ತ ಬಟ್ಟೆ ಮಸಿಯ ಬಣ್ಣ ತಳೆದಂತೆ 'ಶಿವನ ಚಿತ್ತವಲ್ಲಿ' ಬಿಳಿಯದಾಗುತ್ತಿದೆ. ಆದರೂ ಕಪಟವೇಷದಿಂದಲೇ ಶಿವನು ಅಲ್ಲಿಗೆ ಬರುತ್ತಾನೆ. ಆ ಸಮಯದಲ್ಲಿ ತಿರುಕುರುಂಪೆ ತೊಂಡನಿಗಾದ ಸ್ಥಿತಿಯನ್ನು ಹರಿಹರನು ಬಣ್ಣಿಸಿದುದು ಹೀಗೆ :

'ಸತ್ಯವಿಡಿದು ಸಮತೆಗೆಟ್ಟು ಭಕ್ತಿಮೀರಿ ಮುಂದುವರಿದು
ನಿಶ್ಚಪದದ ನಿಷ್ಠೆನಿಮಿರ್ದು ನೆತ್ತಿಗೇರಿ ಮೀರಿನೆಗೆದು
ಧೈರ್ಯವಳಿದು ಲಜ್ಜೆಯುಳಿದು ಮನದೊಳಲ್ಲಿ ಚಿಂತೆ ಮೂಡಿ . . .
ಹಸಿದು ಬದುಕುವಾಸೆಯಿಂದೆ ಸತ್ತೊಡೊಳ್ಳಿತೆಂಬ ತೆರದಿ
ಎಸೆವಕಂಥೆಗೆನ್ನತನುವನೊಗೆದು ಕೊಡುವೆನೆಂಬ ತೆರದಿ
ಬಿಳಿದು ಮಾಡಲಾರೆನೆಂದು ಪದತಳಕ್ಕೆಬೀಳ್ವತೆರದಿ
ತಿಳಿದು ತನಗೆ ತಾನೆ ಮುಳಿದು ತನುವನೊಗೆದು ಕುಡುವತೆರದಿ
ಇದರೊಳಾಗದೆಂದು ಸೂಕ್ಷ್ಮತನುವನೊಗೆದು ಕೊಡುವ ತೆರದಿ
ಅದರದಿಂತು ರಜತಗಿರಿಯೊಳೊಗೆದು ಕೊಡುವನೆಂಬ ತೆರದಿ
ತನ್ನನೊಗೆದುಕೊಂಡನಾಹ ತಿರುಕುರುಂಪೆ ತೊಂಡನಲ್ಲಿ'

ತಿರುಕುರುಂಪೆ ತೋಂಡನ ಭಕ್ತಿಮೀರಿ–ಶಿವನಲ್ಲಿ ನಿಷ್ಠೆ ಬೆಳೆದು ನೆತ್ತಿಗೇರಿ ಮೀರಿ ನೆಗೆಯಿತಂತೆ ! ಅಂಗಾಲೊಳಗಿಂದ ನಡುನೆತ್ತಿಯವರೆಗೆ ಏರಿದ ಭಕ್ತಿಯರಸ ಅಲ್ಲಿಯೇ ಉಳಿಯದೆ ಕಾರಂಜಿಯಂತೆ ಮೀರಿ ನೆಗೆಯಿತಂತೆ. ತಿರುಕುರುಂಪೆ ತೋಂಡನು ಜೀವವಳಿದು ಬೀಳುವಲ್ಲಿಯ ಹರಿಹರನ ಹೋಲಿಕೆಗಳು ಇನ್ನೂ ಸುಂದರವಾಗಿವೆ. ಹಸಿದು ಬದುಕುವದಕ್ಕಿಂತ ಸಾಯುವದೇ ಲೇಸೆನ್ನುವಂತೆ, ಅರಿವೆಯಲ್ಲಿಯ ಕಪ್ಪು ಹೋಗದಿರುವುದಕ್ಕೆ ಪ್ರತಿಯಾಗಿ ತನ್ನ ಶರೀರವನ್ನೇ ಒಗೆದು ಕೊಡುವೆನೆನ್ನುವಂತೆ, ಬಟ್ಟೆಯನ್ನು ಬಿಳಿದು ಮಾಡುವದು ಸಾಧ್ಯವಾಗದೆ ಸೋತೆನೆಂದು ಪಾದಗಳಲ್ಲಿ ಬೀಳುವಂತೆ, ತಿರುಕುರುಂಪೆ ತೊಂಡನ ದೇಹವು ಬಿದ್ದಿತು. ಭೌತಿಕ ಶರೀರದಿಂದ ಬಿಳಿದು ಮಾಡುವುದು ಅಸಾಧ್ಯವೆಂದು ಸೂಕ್ಷ್ಮಳಿನುವನ್ನು ಒಗೆದು ಕೊಡುವೆನೆನ್ನುವಂತೆ, ತಿರುಕುರುಂಪೆ ತೊಂಡನು ತನ್ನ ದೇಹವನ್ನೇ ಈಡಾಡುತ್ತಾನೆ.

ಆಗ ಶಿವನು ನಿಜರೂಪ ತೋರಿ ಪಾರ್ವತಿಯನ್ನು ಕುರಿತು ತನ್ನ ಭಕ್ತನ ಶ್ಲಾಘನೆಗೆ ಆರಂಭಿಸುತ್ತಾನೆ.

'ಎನ್ನ ಕಂಥೆಗಿಂತು ತನ್ನ ತನುವನೊಗೆದುಕೊಂಡರುಂಟೆ
ಎನ್ನಗೋಸುಗಿಂತು ನಿಂತು ತನ್ನ ತೊರೆದು ಮೆರೆದರುಂಟೆ'

ಎನ್ನುತ್ತಾನೆ. ತನ್ನ ಸತ್ಯಶುದ್ಧಕಾಯಕದಿಂದ ಮುಕ್ತನಾದ ಭಕ್ತನನ್ನು ಗಣಸಮೂಹದೆದುರು ಹೊಗಳಿ 'ಹುಸಿಯಲರಿಯದಚ್ಚ ಸತ್ಯಶರಣ ಬಾರ ಬಾರ' ಎನ್ನುತ್ತ ವಿಮಾನದಲ್ಲಿ ಕುಳ್ಳಿರಿಸಿಕೊಂಡು ಕೈಲಾಸಕ್ಕೊಯ್ದು ನಿತ್ಯಪದವನ್ನೀಯುತ್ತಾನೆ.

ಕಾಯಕದ ಪವಿತ್ರವಾದ ತತ್ತ್ವಪಾಲನೆಯೊಂದಿಗೆ ಭಕ್ತಿ, ನಿಷ್ಠೆ, ಅರ್ಪಣಭಾವಗಳ ಚಿತ್ರವೂ ಇಲ್ಲಿದೆ. ಭೌತದೇಹವಳಿದರೂ ಕೈಕೊಂಡ ನಿಷ್ಠೆಯನ್ನು ಸೂಕ್ಷ್ಮತನುವಿನಿಂದ ಪೂರೈಸಬೇಕೆಂಬ ಉನ್ನತದೃಷ್ಟಿಯಿಲ್ಲಿದೆ.

ಕುಂಬರ ಗುಂಡಯ್ಯ :

ಶಿವಭಕ್ತನಾದ ಗುಂಡಯ್ಯ ಮಡಿಕೆ ಮಾಡುವ ವೃತ್ತಿಯನ್ನೇ ಅಧ್ಯಾತ್ಮಕ್ಕೆ ಅಳವಡಿಸಿಕೊಂಡಿದ್ದ :

‘ ಆಧಾರಮೆಯಾಧಾರಮುದಾಗಿರೆ
ಮಿಗೆ ಷಟ್ಚಕ್ರಮೆ ಚಕ್ರಮುದಾಗಿರೆ
ಸೊಗಯಿಪ ನಾಭಿಯೆ ನಾಭಿಯದಾಗಿರೆ
ಕನಸಿನಕಾಯಂ ಮೃತ್ತಿಕೆಯಾಗಿರೆ
ನೆನಹಂ ಚಟಿದಾರಂಗಳವಾಗಿರೆ
ನಿಷ್ಠೆಯೆ ತಿರುಹುವ ದಂಡವದಾಗಿರೆ . . . .
ಮಾಡುವ ಭಕ್ತಿ ಕಟಾಮುಹದಾಗಲು
ಕೂಡಿದ ಕರಣದೆ ಮರ್ದಿಸುತಾಗಲು
ಮಿಗೆ ಶೋಷಣದಾತಪದಿಂದಾರಿಸಿ
ಬಗೆ ಮಿಗಲುದರಾಗ್ನಿಗಳಿಂದಹಿಸಿ
ಇಂತೊಳಗಣ ಘಟಕಾಯಕಮೊಪ್ಪಲು
ಸಂತತ ಹೊರಗಣ ಮಾಟಮುದೊಪ್ಪಲು
ಕುಂಬರನೆನಿಸಿರ್ಪಂ ಗುಂಡಯ್ಯಂ ’

ಕುಂಬಾರನ ಸಲಕರಣೆಗಳನ್ನು ಆಧ್ಯಾತ್ಮದ ಸಾಂಕೇತಿಕ ಶಬ್ದಗಳಿಗೆ ಹೋಲಿಸಿ ಹರಿಹರನು ಈ ಚಿತ್ರ ಕೊಟ್ಟಿದ್ದಾನೆ. ಕುಂಬಾರನು ಒಂದು ಕಟ್ಟಿಗೆ ತುಂಡನ್ನು ನೆಲದಲ್ಲಿ ಗಟ್ಟಿಯಾಗಿ ಹುಗಿದು ಅದರ ತುದಿಯಲ್ಲಿ ಒಂದು ಮೊನೆಯಾದ ಮೊಳೆಯನ್ನು ನೆಡುವುದುಂಟು. ಅದರ ಮೇಲೆ ತಿಗರಿಯನ್ನು (ಚಕ್ರ) ಇಟ್ಟು ಅದರ ಮಧ್ಯದಲ್ಲಿ ಹದಮಾಡಿದ ಹಸಿ ಮಣ್ಣನ್ನು (ಅರಲು) ಇಟ್ಟು ಕೋಲಿನಿಂದ ತಿರುಗಿಸಲಾಗುತ್ತಿದೆ. ಚಕ್ರ ತಿರುಗಿದಂತೆ ಮಡಕೆಗಳು ರೂಪುಗೊಳ್ಳುತ್ತಿವೆ. ಆ ಹಸಿಮಡಕೆಗಳನ್ನು ಚಟಿದಾರರಿಂದ ಕೊಯ್ದು ತೆಗೆದು, ತಿದ್ದಿ ಒಣಗಿಸಿ, ಆವಿಗೆಯಲ್ಲಿ ಸುಡುವುದುಂಟು. ಆಗ ಅವು ಉಪಯೋಗಕ್ಕೆ ಯೋಗ್ಯವಾಗುತ್ತಿವೆ. ಗುಂಡಯ್ಯನು ಹೀಗೆ ಬಾಹ್ಯದಲ್ಲಿ ಮಡಕೆ ಸಿದ್ಧಗೊಳಿಸುವ ಕ್ರಮ ಕೈಕೊಂಡು ಅದನ್ನು ಅಂತರಂಗದ ವಿಕಾಸಕ್ಕಾಗಿ ಅಳವಡಿಸಿಕೊಳ್ಳುವುದನ್ನು ಹರಿಹರನು ಇಲ್ಲಿ ಚಿತ್ರಿಸಿದ್ದಾನೆ. ಕುಂಬಾರ ಗುಂಡಯ್ಯನಿಗೆ ಚಕ್ರಕ್ಕೆ ಆಧಾರವಾಗಿ ಹುಗಿದ ಕಟ್ಟಿಗೆಯೇ ಆಧಾರವಾಗುತ್ತಿದೆ.*

* ಆಧಾರ, ಸ್ವಾಧಿಷ್ಠಾನ, ಮಣಿಪೂರಕ, ಅನಾಹತ, ವಿಶುದ್ಧಿ, ಆಜ್ಞಾ ಎಂದು ಆರು ಚಕ್ರಗಳಿವೆಯೆಂದೂ, ಅವು ಶರೀರದಲ್ಲಿ ಕ್ರಮವಾಗಿ ಗುದ, ಗುಹ್ಯ, ನಾಭಿ,

ತಿಗರಿಯೇ ಆತನ ಷಟ್‌ಚಕ್ರವಾಗುತ್ತಿದೆ. ಚಕ್ರದಲ್ಲಿಯ ನೊಳೆ ನೆಡುವ ರಂಧ್ರವೇ ನಾಭಿ(ಮಣಿಪೂರಕ)ಯಾಗುತ್ತಿದೆ. ಶರೀರವನ್ನೇ ಮೃತ್ತಿಕೆಯನ್ನಾಗಿ ಮಾಡಿ, ನಿಷ್ಠೆಯೆಂಬ ದಂಡದಿಂದ ಚಕ್ರವನ್ನು ತಿರುಗಿಸಿ ಕೊಡವನ್ನು ಮಾಡುತ್ತಾನೆ. ಅದನ್ನು ನೆನಹೆಂಬ ಚಟಿದಾರಗಳಿಂದ ಕೊಯ್ದು, ಕರಣಗಳಿಂದ ತಿದ್ದಿ ಬಡಿದು, ಆರಿಸಿ, ಭಕ್ತಿಯೆಂಬ ಆವಿಗೆಯಲ್ಲಿ ಹಾಕಿ ಉದರಾಗ್ನಿಗಳಿಂದ ಕಾಯಿಸುತ್ತಾನೆ. ಇಂತಹ ಅಂತರಂಗದ ಶುದ್ಧಿ ವಿಕಾಸಗಳಿಂದಲೇ ದೈವೀಕೃಪೆಯುಂಟಾಗುತ್ತದೆಯೆಂಬುದು ಇಲ್ಲಿಯ ಭಾವ.

ಇಂತು ಅಂತರಂಗ ಶುದ್ಧಿ ವಿಕಾಸದಲ್ಲಿ ತೊಡಗಿದ ಗುಂಡಯ್ಯನು ಶಿವಪೂಜೆಗೆ ತೊಡಗುತ್ತಲೇ ಶಿವನನ್ನು ನಿರೀಕ್ಷಿಸುತ್ತಿದ್ದಂತೆ ಎವೆ (ರೆಪ್ಪೆ) ಬಡೆಯುವದನ್ನೇ ಮರೆಯುತ್ತಿದ್ದ. 'ಮನದೊಳ್ ಕಣ್ಣೊಳ್ ಪೂಜಾಭಾವ' ತುಂಬಿರುತ್ತಿತ್ತು.

'ಊಟಂ ನಿದ್ರೆಗೆ ಮನವಿಲ್ಲಿಲ್ಲಂ
ನೋಟಂ ನುಡಿಗೆಡೆ ಇಲ್ಲೆಡೆ ಇಲ್ಲಂ
ಶಿವಪೂಜೆಯ ಕರಡಿಗೆಯಂತಿರ್ಪಂ
ಶಿವಪೂಜೆಯ ಗವಸಣಿಗೆಯೊಲಿರ್ದಂ'

ಭಕ್ತಿಯ ರಸದಲ್ಲಿ ಮಿಂದೆದ್ದ ಗುಂಡಯ್ಯನು ಊಟ, ನಿದ್ದೆಗಳನ್ನೂ ಮರೆಯುತ್ತಾನೆ. ಶಿವನಲ್ಲದನ್ಯವಸ್ತುವನ್ನು ನೋಡುವದಿಲ್ಲ, ಅದರ ಬಗ್ಗೆ ಮಾತನಾಡಲಾರ. ಆತನ ಮನವೆಲ್ಲ ದೇವರಲ್ಲಿ ತಲ್ಲೀನವಾಗುತ್ತಿದೆ. ಶಿವಪೂಜೆ ಆತನ ಮನದಲ್ಲಿ ನಿರಂತರವೂ ಸಾಗುತ್ತಿದೆ. ಅಂತೆಯೆ ಆತನು ಶಿವಪೂಜೆಯ ಕರಡಿಗೆ(ಪೆಟ್ಟಿಗೆ)ಯಂತೆ, ಹೊದಿಕೆಯಂತೆ ಇದ್ದನೆಂದು ಹರಿಹರನು ಹೇಳುವಲ್ಲಿ ಔಚಿತ್ಯವಿದೆ.

ಶಿವಾಲಯದಲ್ಲಿ ಶಿವಪೂಜೆ ಮಾಡಿ ಮನೆಗೆ ಬಂದರೂ ಆತನ ಮಾನಸಪೂಜೆ ಎಡವಿಡದೆ ನಡೆಯುತ್ತಿತ್ತು. ತನ್ನ ಘಟಕಾಯಕದಲ್ಲಿಯೇ ಶಿವನನ್ನು ಆತನು ನಿರಂತರ ನೆನೆಯುತ್ತಾನೆ. ರಾತ್ರಿಯೆಲ್ಲ ಶಿವನ ಸಂತೋಷಕ್ಕಾಗಿ ಕುಣಿಕುಣಿದು ಹರ್ಷಚಿತ್ತನಾಗಿ ತಾನು ಮಾಡಿದ ಮಣ್ಣಿನ ಕೊಡಗಳನ್ನು ಬಾರಿಸುತ್ತಾನೆ.

ಹೃದಯ, ಕಂಠ, ಭ್ರೂಮಧ್ಯ ಎಂಬ ಆರು ಸ್ಥಳಗಳಲ್ಲಿರುತ್ತವೆಂದೂ ಹೇಳಲಾಗುತ್ತಿದೆ. ಈ ಚಕ್ರಗಳಿಗೆ ಕ್ರಮವಾಗಿ ೪, ೬, ೧೦, ೧೨, ೧೬, ೨ ದಳಗಳಿರುತ್ತಿವೆ, ಆಧಾರ ಚಕ್ರದಲ್ಲಿ ಕುಂಡಲಿನಿ ಶಕ್ತಿಯು ಅಧೋಮುಖವಾಗಿರುತ್ತಿದೆ, ಅದನ್ನು ಊರ್ಧ್ವಮುಖ ಮಾಡಿ ಭ್ರೂಮಧ್ಯಸ್ಥಾನದವರೆಗೆ ತಂದಾಗ ದೈವೀ ಸಾಕ್ಷಾತ್ಕಾರವಾಗುತ್ತಿದೆ, ಎಂದು ಹಿಂದೂ ತತ್ವಜ್ಞಾನಿಗಳು ಷಟ್‌ಚಕ್ರದ ವರ್ಣನೆಯನ್ನು ಮಾಡುತ್ತಾರೆ. ಇಲ್ಲಿ ಆಧಾರ ಚಕ್ರದಿಂದಲೇ ಪರಮಾತ್ಮನ ಆವಿರ್ಭಾವಕ್ಕೆ ಪ್ರಾರಂಭವಾಗುವದೆಂದು ತಿಳಿದರೆ ಸಾಕು.

‘ ನೆನೆದಂದದಿ ಮಡಕೆಗಳಾಗುತ್ತಿರೆ
ಮನದಂದದಿ ಶಿವನೊಳಗಾಡುತ್ತಿರೆ
ಬೆಳಗಪ್ಪನ್ನಂ ಬಾರಿಸಿ ನೋಡುತೆ
ಇದು ನೇಮವೆನಗೆ ನೇಮವೆನುತ್ತಂ
ಶಿವನಾಟದ ಸವಿಗಂಡಂ ಗುಂಡಂ ’

ಗುಂಡಯ್ಯನು ಹರನನ್ನು ನೆನೆದಂತೆಲ್ಲ ಗಡಿಗೆಗಳೆಲ್ಲ ತಾವೇ ತಯಾರಾಗುತ್ತಿವೆ. ಇದನ್ನು ಕಂಡು ಆನಂದಿತನಾದ ಆತನು ಬೆಳಗಾಗುವವರೆಗೆ ಶಂಕರನನ್ನು ನೆನೆಯುತ್ತ ಮಡಕೆಗಳನ್ನು ಬಾರಿಸುವದನ್ನೇ ತನ್ನ ನೇಮವನ್ನಾಗಿ ಮಾಡಿಕೊಳ್ಳುತ್ತಾನೆ.

ಹೀಗೆ ಪ್ರತಿರಾತ್ರಿಯಲ್ಲಿ ಗುಂಡಯ್ಯನು ಘಟಗಳನ್ನು ಬಡೆಯುತ್ತಾ ಶಿವಧ್ಯಾನದಲ್ಲಿ ನಿರತನಾಗುತ್ತಿದ್ದ.

‘ ಬಂದವರನರಿಯದೆ ಹೋದವರನರಿಯದೆ
ನಿಂದವರನರಿಯದೆ ನೆರೆದವರನರಿಯದೆ
ನೋಟವನರಿಯದೆ ನೆನೆವುದನರಿಯದೆ
ತಟಪಟ ಧಂಧಣದಿಂ ಧಿಮಿಕೆನಿಸುವ
ತಟಿಕಂಕಟ ದಿಕ್ಕಟ ತಟಿಕೆನಿಸುವ
ತೂಗಾಡುತ ಮಡಿಕೆಗಳಂ ಬಾರಿಸಿ
ಒಳಗಣ ಶಿವನಂ ನೆರೆಸಾಗಿಸುತಂ . . .
ಸತ್ಯದ ಸುಖದೊಳ್ಮುಳುಗಾಡುತ್ತಂ ’

ಗುಂಡಯ್ಯನು ಧ್ಯಾನಮಗ್ನನಾದಾಗ ಹೊರಗಿನ ಪರಿವೆ ಆತನಿಗೆ ಇರುವದಿಲ್ಲ. ಬಂದವರು, ನಿಂದವರು, ನೆರೆದವರು, ಹೋದವರು ಆತನ ಲಕ್ಷ್ಯದಲ್ಲಿಲ್ಲ; ನಿದ್ರೆ ನೀರಡಿಕೆಯಿಲ್ಲ. ತಾಳಕ್ಕೆ ಸರಿಯಾಗಿ ಗಡಿಗೆಗಳನ್ನು ಬಡಿಯುತ್ತ ಬ್ರಹ್ಮಾನಂದದಲ್ಲಿ ಓಲಾಡುತ್ತಾನೆ. ‘ ನೆನೆವುದನರಿಯದೆ ’ ಎಂದು ಹೇಳುವಲ್ಲಿ ಹರಿಹರನು ದೇವ—ಜೀವರು ಸಮರಸವಾದಾಗ ಎಲ್ಲವೂ ಶೂನ್ಯವಾಗುತ್ತಿದೆಯೆಂಬ ಭಾವವನ್ನು ಸೂಚಿಸಿದ್ದಾನೆ.

ಭೂಲೋಕದಲ್ಲಿ ಭಕ್ತಿಪರವಶನಾಗಿ ಗಡಿಗೆ ಬಾರಿಸುತ್ತಿದ್ದ ಗುಂಡಯ್ಯನ ಕಡೆಗೆ ಗಮನ ಹೊರಳಿದ ಶಿವನು ಕೈಲಾಸದಲ್ಲಿ ಸುರರೋಲಗವನ್ನು ಮರೆಯುತ್ತಾನೆ. ಪಾರ್ವತಿಯು ಎಚ್ಚರಿಸಿದಾಗ ಶಿವನು ಹೇಳುತ್ತಾನೆ: ‘ ಗುಂಡನ ಹೃದಯದೊಳಾಡುತ್ತಿರ್ದೆಂ, ತಂಡದ ಸುಖದೊಳ್ಮೂಡುತ್ತಿರ್ದೆಂ. ಸಲ್ಲೀಲೆಯೊಳ್ ಎನ್ನಂ ಮರೆದಿರ್ದೆಂ ’ ಎಂದು. ಆಗ ಪಾರ್ವತಿ ಅಚ್ಚರಿಬಟ್ಟು ‘ ನಿಮ್ಮನ್ನು ನೀವೇ ಮರೆಯುವಂತೆ ಮಾಡಿದ ಶರಣನಾರು ?’ ಎಂದು ಕೇಳಿದಳು. ಆಗ ಶಿವನು ಪಾರ್ವತಿಯನ್ನು ಕರೆದುಕೊಂಡು ಮರ್ತ್ಯಲೋಕಕ್ಕಿಳಿದು ಗಗನದಲ್ಲಿ ಆಕೆಯನ್ನು ನಿಲ್ಲಿಸಿ ತಾನು, ಗಡಿಗೆ ಬಾರಿಸುತ್ತ

ಕುಣಿಯುತ್ತಿದ್ದ ಶರಣಗುಂಡಯ್ಯನ ಮನೆಯ ಮುಂದೆ ನಿಲ್ಲುತ್ತಾನೆ. ಗುಂಡಯ್ಯನು ಏಕನಿಷ್ಠೆಯಿಂದ ಕಣ್ಮುಚ್ಚಿ ಬಾರಿಸುತ್ತಿರುವುದನ್ನು ಕಂಡು ಹರ್ಷಿತನಾಗುತ್ತಾನೆ. ಭಕ್ತನನ್ನು ಎಚ್ಚರಿಸಬೇಕೆಂದು ಬಗೆದು ಶಿವನು ಆತನ ಮನದಲ್ಲಿದ್ದ ಶಿವಲಿಂಗವನ್ನು ತನ್ನೆಡೆಗೆ ಆಕರ್ಷಿಸಿ ಅದರೊಡನೆ ತಾನು ಸಮರಸಹೊಂದಿ ಗುಂಡಯ್ಯನ ಬಾಗಿಲದ ಎದುರಿನಲ್ಲಿಯೇ ಲಿಂಗವಾಗಿ ಗೋಚರಿಸುತ್ತಾನೆ. ಹೊರಗಿನ ಲಿಂಗವನ್ನು ಕಂಡ ಮೇಲಂತೂ ಆತನ ಆನಂದಕ್ಕೆ ಮೇರೆಯಿಲ್ಲದಾಗುತ್ತಿದೆ. ಭಕ್ತಿಯ ಆವೇಶ ಇನ್ನೂ ಹೆಚ್ಚುತ್ತಿದೆ.

‘ ಕುಣಿಯುತೆ ಕೊರಲೆತ್ತುತೆ ನೆರೆತೂಗುತೆ
ಕೊನೆವುತೆ ತೂಗಾಡುತೆ ಸುಖಿಯಾಗುತೆ ’

ಶಿವನನ್ನು ಸುತ್ತಾಡುತ್ತಾ ಮಡಿಕೆ-ಕುಡಿಕೆಗಳನ್ನು ಬಾರಿಸುತ್ತಾನೆ.

‘ ಆಡುವ ಗುಂಡಯ್ಯನ ಹೊಸ ನೃತ್ಯಂ
ನೋಡುವ ಶಿವನಂ ಮುಟ್ಟಿತು ಸತ್ಯಂ ’

ನಿಷ್ಠಾವಂತ ಭಕ್ತ ಗುಂಡಯ್ಯನ ‘ ಹೊಸನೃತ್ಯ ’ ಶಿವನಿಗೆ ಮೆಚ್ಚುಗೆಯನ್ನುಂಟು ಮಾಡುತ್ತಿದೆ. ಅವನೊಂದಿಗೆ ತಾನೂ ಕುಣಿಯಲು ಸಿದ್ಧನಾಗುತ್ತಾನೆ.

ಶಿವನ ನೃತ್ಯವೆಂದಮೇಲೆ ಕೇಳಬೇಕೆ? ದಶಭುಜಗಳು ದಶದಿಕ್ಕುಗಳಲ್ಲಿ ಪಸರಿಸುತ್ತಿವೆ. ಒಂದು ಪಾದ ಪಾತಾಳವನ್ನೊತ್ತಿದರೆ ಇನ್ನೊಂದು ಪಾದ ಬ್ರಹ್ಮಾಂಡವನ್ನೆತ್ತುತ್ತಿದೆ. ಮುಡಿಯಲ್ಲಿದ್ದ ಗಂಗಾನದಿ ತುಳುಕಾಡುತ್ತಿದೆ. ಚಂದ್ರಕಲೆ ಅಲ್ಲಾಡುತ್ತಿದೆ. ಮೈಮೇಲಿನ ಸರ್ಪಗಳೆಲ್ಲ ಹೆಡೆ ತೆಗೆಯುತ್ತಿವೆ. ಕೊರಳಲ್ಲಿಯ ಸುರರ ರುಂಡಮಾಲೆಗಳುಲಿಯಹತ್ತುತ್ತಿವೆ. ಡಮರುಗದ ಸಪ್ಪಳ ‘ ಢಂ ಢಂ ಢಣಲೆಂ ’ದೂ ಗೆಜ್ಜೆಗಳ ರವವು ‘ ಘುಲು ಘುಲುಕ್ ’ ಎಂದೂ ಕೇಳಬರುತ್ತಿದೆ.

‘ ಶಿವನಂ ಕಂಡಾ ಭಕ್ತಂ ಕುಣಿಯಲು
ಶಿವಭಕ್ತನ ಕೂಡಭವಂ ಕುಣಿಯಲು
ಈರ್ವರನೀಕ್ಷಿಸಿ ಗಣತತಿ ಕುಣಿಯಲು
ಸರ್ವಸ್ಥಾವರ ಜಂಗಮವಾಡಲು ’

ಶಿವನನ್ನು ಕಂಡು ಗುಂಡಯ್ಯನೂ, ಗುಂಡಯ್ಯನನ್ನು ಕಂಡು ಶಿವನೂ ಇವರಿಬ್ಬರನ್ನು ಕಂಡು ಶಿವನ ಅನುಯಾಯಿಗಳೂ ಕುಣಿಯಹತ್ತಿದರಂತೆ. ಹರಿಹರನು ಇನ್ನೂ ಮುಂದುವರಿದು ‘ ಸಚರಾಚರ ವಸ್ತುಗಳೆಲ್ಲವೂ ಕುಣಿದಾಡಹತ್ತಿದವು ’ ಎಂದು ಹೇಳುತ್ತಾನೆ. ಜಗತ್ತೆಲ್ಲವೂ ಶಿವನ ಸ್ವರೂಪ. ಶಿವನೇ ಕುಣಿಯಲು ತೊಡಗಿದಾಗ ಎಲ್ಲವೂ ಕುಣಿಯತೊಡಗುವುದೂ ಸಹಜ. ಇದಕ್ಕೆಲ್ಲ ಒಬ್ಬ ಭಕ್ತನ ದೇವಭಾವವೇ ಕಾರಣವಾಯಿತು.

ಜೀವಭಾವ; ದೇವಭಾವ

ಜೀವಭಾವವಳಿದು ದೇವಭಾವವಳವಡಬೇಕಾಗಿರುವ ಸೂತ್ರವನ್ನು ಹರಿಹರನು ಶತಕಗಳಲ್ಲಿ ಆರ್ತಭಾವದಿಂದ ನಿವೇದಿಸಿದ್ದಾನೆ. ಗಿರಿಜಾಕಲ್ಯಾಣದಲ್ಲಿ ಅಂತಹ ಚಿತ್ರವನ್ನು ಕಾವ್ಯಮಯ ಸಾಂಕೇತಿಕ ರೂಪದಲ್ಲಿ ಪಡಿಮೂಡಿಸಿದ್ದಾನೆ. ಆದರೆ ರಗಳೆಗಳಲ್ಲಿ ದೇವಭಾವವಳವಟ್ಟವರ ಚರಿತ್ರೆ, ಸಾಧನ, ಸಿದ್ಧಿಗಳನ್ನು ಬಗೆಬಗೆಯಾಗಿ ವಿಶದೀಕರಿಸಿದ್ದಾನೆ.

ಹರಿಹರನ ೧೦೬ ರಗಳೆಗಳಲ್ಲಿ ೧೮ ರಗಳೆಗಳನ್ನು ಆರಿಸಿಕೊಂಡು ಇದುವರೆಗೆ ವಿವೇಚಿಸಲಾಯಿತು.

ಮಾನವೀಯ ಮಟ್ಟದ ಮೇಲೇರಿ ನಿಂತು ದೈವೀಪ್ರಜ್ಞೆಯನ್ನು ಅಳವಡಿಸಿಕೊಂಡ ಜೀವಿಯನ್ನು ಶ್ರೀ ಅರವಿಂದರು (Gnostic Being) ವಿಜ್ಞಾನಮಯಜೀವಿ ಎಂದು ಹೆಸರಿಸಿ ಅಂತಹ ಜೀವಿಯ ಲಕ್ಷಣಗಳಲ್ಲಿ ಕೆಲವನ್ನು ಹೀಗೆ ವಿವರಿಸಿದ್ದಾರೆ :

The Gnostic individual would be the consumation of the spiritual man, his whole way of being, thinking living acting would be governed by the power of a vast universal spirituality. All his existence would be fused into oneness with the transcendent and universal Self and Spirit; all his action would originate from and obey the Supreme Self and Spirit's divine governence of Nature. All life would have to him the sense of the Conscious Being, the Purusha within, finding its self-expression in Nature ; his life and all its thoughts, feelings, acts would be filled for him with that significance and built upon that foundation of its reality. He would feel the presence of divine in every centre of his consiousness, in every vibration his life-force, in every cell of his body..... in this consciousness he would live and act in an entire transcendent freedom, a complete joy of the spirit, an entire identiy with the cosmic self.......The gnostic individual would be in the world and of the world but would also exceed it in this consciousness and life in his self of transcedence above it. He would be universal but free in the universe, Individual but not limitted by seperative individuality..........

In a gnostic being there could be no conflict between self-affirmation of the ego and a control by super-ego ; for since

in this action of life the gnostic individual would at once express himself, his truth of being and work out the Divine as his true self and the source and constituent of this spiritual individuality.........

—*Life Divine.*

‘ ವಿಜ್ಞಾನಮಯಜೀವಿ (ಪೂರ್ಣಯೋಗವಿಜ್ಞಾನಿ)ಯು ಆಧ್ಯಾತ್ಮಿಕ ಮಾನವ ವಿಕಾಸದ ಪರಮಸಿದ್ಧಿಯ ಪ್ರತೀಕವಾಗಿದ್ದಾನೆ. ಆತನ ಇರವು, ಆಲೋಚನೆ, ಜೀವನ, ಕ್ರಿಯೆ ಇವುಗಳ ದಿಸೆಯು ವಿಶ್ವವ್ಯಾಪಿಯಾದ ಆಧ್ಯಾತ್ಮಿಕತತ್ತ್ವದ ನಿಯಂತ್ರಣಕ್ಕೆ ಒಳಪಟ್ಟಿದೆ. ಅವನ ಅಸ್ತಿತ್ವವೆಲ್ಲ ಪರಾತ್ಪರ ಹಾಗೂ ವಿಶ್ವಾಂತರ್ಗತ ಚೇತನ ಹಾಗೂ ಆತ್ಮಗಳೊಡನೆ ಸಂಪೂರ್ಣವಾಗಿ ಒಂದಾಗಿರುತ್ತಿದೆ. ಪ್ರಕೃತಿಯನ್ನಾಳುವ ಆತ್ಮಿಕ ದೈವೀನಿಯಂತ್ರಣ ಹಾಗೂ ಪರಮಚೇತನಗಳೇ ಅವನ ಸರ್ವ ಕಾರ್ಯಗಳಿಗೆ ಪ್ರೇರಣೆಯನ್ನು ಒದಗಿಸುತ್ತಿವೆ. ಆತನು ಆ ಪರಮತತ್ತ್ವಕ್ಕೆ ತಲೆಬಾಗಿ ವ್ಯವಹರಿಸುತ್ತಾನೆ. ಜೀವನವೆಲ್ಲಾ ಆತನಿಗೆ ಪ್ರಜ್ಞಾಜೀವಿಯ ವ್ಯಕ್ತಸ್ವರೂಪವಾಗಿ ಕಾಣುತ್ತಿದೆ. ಅಂತರ್ಗತಪುರುಷನು ಪ್ರಕೃತಿಯಲ್ಲಿ ತನ್ನ ಆವಿಷ್ಕಾರ ಪಡೆಯುವಂತೆ ಅವನಿಗೆ ತೋರುತ್ತಿದೆ. ಆ ವಿಜ್ಞಾನಮಯಜೀವಿಗೆ ಸಮಸ್ತಜೀವನ, ಹಾಗು ಅವನ ಸರ್ವ ಆಲೋಚನೆ, ಕ್ರಿಯೆ, ಭಾವನೆ ಇವುಗಳೆಲ್ಲ ಈಯೊಂದು ಮಹತ್ವದ ಅಂಶವನ್ನು ಎತ್ತಿ ತೋರಿಸುತ್ತಿವೆ ಮತ್ತು ಅವೆಲ್ಲ ಈ ದಿವ್ಯಸತ್ತೆಯ ತಳಹದಿಯ ಮೇಲೆ ನಿಂತಿವೆ. ಅವನು ತನ್ನ ಅಂಗಾಂಗಗಳ ಪ್ರತಿಯೊಂದು ರಂಧ್ರದಲ್ಲಿ, ಪ್ರಾಣಶಕ್ತಿಯ ಪ್ರತಿ ಅನುಕಂಪದಲ್ಲಿ ಮತ್ತು ತನ್ನ ಪ್ರಜ್ಞೆಯ ಪ್ರತಿ ಕೇಂದ್ರದಲ್ಲಿ ದೈವೀ ಅಸ್ತಿತ್ವವನ್ನೇ ಅನುಭವಿಸುವವನಾಗಿದ್ದಾನೆ. ಅವನು ತನ್ನ ಅಂತಃಪ್ರಜ್ಞೆಯಲ್ಲಿರುವಾಗ ಅದೊಂದು ವಿಶ್ವಾತೀತ ಸ್ವಾತಂತ್ರ್ಯದಿಂದ ಅವನ ಜೀವನ ಹಾಗೂ ಕ್ರಿಯೆಗಳು ನಡೆಯುತ್ತಿರುತ್ತಿವೆ. ಅವೆಲ್ಲ ಆತ್ಮಿಕ ಪರಮಾನಂದದಿಂದ ತುಂಬಿರುತ್ತಿವೆ; ವಿಶ್ವದೊಡನೆ ಒಂದಾಗಿರುತ್ತಿವೆ. ವಿಜ್ಞಾನಮಯಜೀವಿಯು ಈ ಜಗತ್ತಿನಲ್ಲಿಯೇ ಇದ್ದು ಇದಕ್ಕೆ ಸಂಬಂಧಿಸಿದವನಾಗಿರಬಹುದು. ಆದರೆ ಅದೇ ಕಾಲಕ್ಕೆ ತನ್ನ ಅಂತಃಪ್ರಜ್ಞೆಯಲ್ಲಿ ಈ ವಿಶ್ವವನ್ನು ಮೀರಿಯೂ ನಿಂತಿರುತ್ತಾನೆ. ಆತನು ವಿಶ್ವಾಂತರ್ಗತನಾದರೂ ಸ್ವತಂತ್ರ ಚಲನವಲನವುಳ್ಳವನಾಗಿರುತ್ತಾನೆ. ಆತನು ತನ್ನ ವ್ಯಕ್ತಿತ್ವವನ್ನು ಕಾಯ್ದುಕೊಂಡರೂ ಸಾಮಾನ್ಯತಃ ವ್ಯಕ್ತಿಗಳಿಗಿರಬಹುದಾದ ಪರಿಮಿತಿಗಳು ಆತನಿಗಿರುವುದಿಲ್ಲ. ವಿಜ್ಞಾನಮಯ ಜೀವನದಲ್ಲಿ ಅವನ ವ್ಯಕ್ತಿಗತ ಅಹಂಭಾವಕ್ಕೂ ಪರಮ ಅಹಂತತ್ವಕ್ಕೂ ಘರ್ಷಣೆಯೊದಗುವುದಿಲ್ಲ. ಏಕೆಂದರೆ ವಿಜ್ಞಾನಮಯಜೀವಿಯ ಜೀವನದ ತನ್ನ ಕಾರ್ಯದಲ್ಲಿ ತನ್ನನ್ನು ಮತ್ತು ಇರುವಿಕೆಯ ಪರಮಸತ್ಯವನ್ನು ಅಭಿವ್ಯಕ್ತಿಗೊಳಿಸುತ್ತ ದೈವೀಸಂಕಲ್ಪವನ್ನೇ ಕ್ರಿಯಾರೂಪಕ್ಕಿಳಿಸುತ್ತಾನೆ. ಏಕೆಂದರೆ ದೈವೀತತ್ತ್ವವೇ ತನ್ನ ನಿಜವಾದ ಸ್ವರೂಪವೆಂದು, ಅದೇ ತನ್ನ ಆಧ್ಯಾತ್ಮಿಕ ವ್ಯಕ್ತಿತ್ವದ ಆಗರವೆಂದು ಅಭಿನ್ನ ಅಂಗವೆಂದು ಆತನು ಅರಿತಿರುತ್ತಾನೆ.’

ವಿಜ್ಞಾನಮಯಜೀವಿಯ ಈ ಲಕ್ಷಣಗಳಲ್ಲಿ ಕೆಲವು ಹರಿಹರನ ರಗಳೆಗಳಲ್ಲಿಯ ಒಬ್ಬೊಬ್ಬ ಶಿವಭಕ್ತನಿಗೆ ಅನ್ವಯಿಸುವುದನ್ನು ನಾವು ಕಾಣುತ್ತೇವೆ. 'ಜಗಮಂ ಪೊರ್ದಿಯುಂ ಪೊರ್ದದಂತಿರುವ' ಎಂಬ ಮಾತು ಮೇಲಿನ ಅವತರಣಿಕೆಯಲ್ಲಿಯೂ ಉಕ್ತವಾಗಿದೆ. ಜಗಕ್ಕೆ ಅತೀತವಾಗುವ ಅನೇಕ ಘಟನೆಗಳನ್ನು ಹರಿಹರನು ರಗಳೆಗಳಲ್ಲಿ ನಿರೂಪಿಸಿದ್ದಾನೆ. ರಗಳೆಗಳಲ್ಲಿ ಚಿತ್ರಿತರಾದ ಜೀವಿಗಳು ದೈವೀತತ್ತ್ವವೇ ತಮ್ಮ ನಿಜವಾದ ಸ್ವರೂಪವೆಂದು ಭಾವಿಸಿದ್ದಾರೆ. ಅದೇ ತಮ್ಮ ಅಧ್ಯಾತ್ಮಿಕ ವ್ಯಕ್ತಿತ್ವದ ಆಧಾರವೆಂದು ಅಭಿನ್ನ ಅಂಗವೆಂದು ಇಹಜೀವನದಲ್ಲಿ ವ್ಯವಹರಿಸಿದ್ದಾರೆ. ಅವರ ಎಲ್ಲ ಆಲೋಚನೆ, ಭಾವನೆ, ಕ್ರಿಯೆಗಳು ದೈವೀಪ್ರಜ್ಞೆಯ ನಿಯಂತ್ರಣಕ್ಕೊಳಗಾಗಿವೆ. ಬಾಹ್ಯಜೀವನದ ದೃಷ್ಟಿಯಿಂದ ಅವರ ಜೀವನವು ವಿಚಿತ್ರವಾಗಿ ಕಾಣಬಹುದು. ಆದರೆ ವಿಜ್ಞಾನಮಯಜೀವಿಯ ಲಕ್ಷಣಗಳಿಗೆ ಲಕ್ಷ್ಯವಾಗುವಂತೆ ಅವರ ಜೀವನವಾಹಿನಿ ಹರಿದಿದೆ. ಅಂತೆಯೇ ಹರಿಹರನ ರಗಳೆಗಳ ವಿವೇಚನೆಯನ್ನು ಈ ಉಪನ್ಯಾಸಗಳಲ್ಲಿ ಕೈಕೊಳ್ಳಲಾಯಿತು. ಈಗ ವಿವೇಚಿಸಲಾಗಿರುವ ಶಿವಭಕ್ತರಲ್ಲಿ ಒಬ್ಬೊಬ್ಬರಿಗೆ ಒಂದೊಂದು ಬಗೆಯ ವ್ಯಕ್ತಿತ್ವವಿದೆ. ಆದರೆ ಭಿನ್ನತೆಯನ್ನಾವರಿಸಿದ ವ್ಯಕ್ತಿಗಳಿಗಿರುವ ಪರಿಮಿತಿಗಳು ಅವರನ್ನು ಸೋಂಕಲಾರವು. ವಿಶ್ವಾತೀತಸ್ವಾತಂತ್ರ್ಯವನ್ನು ಅವರು ಅನುಭವಿಸಬಲ್ಲವರಾಗಿದ್ದಾರೆ. ಅಂತೆಯೇ ಅವರವರು ಸಾಧಿಸಿ ತೋರಿಸಿದ ಅತಿಮಾನುಷ ಶಕ್ತಿಯನ್ನು ನಾವು ಅರ್ಥಮಾಡಿಕೊಳ್ಳಬೇಕಾಗುತ್ತಿದೆ.

ಮಾನವೀಯ ಶಕ್ತಿಯು ಎಂದಿಗೂ ಪರಿಮಿತಿಯುಳ್ಳದ್ದೇ ಆಗಿದೆ. ಆದರೆ ಅಹಂಕಾರಕ್ಕೊಳಗಾದ ಮಾನವನು ತನ್ನ ಅಲ್ಪ ಶಕ್ತಿಯಲ್ಲಿಯೇ ಆಸಕ್ತನಾಗಿ ಅದನ್ನು ಮೆರೆಯಿಸುವಲ್ಲಿಯೇ ಹೆಮ್ಮೆಯನ್ನು ಪಡೆಯುತ್ತಾನೆ. ಇದರಿಂದಾಗಿಯೇ ಆತನು ಜೀವನದಲ್ಲಿ ಬಗೆಬಗೆಯ ನಿರಾಶೆ, ದ್ವಂದ್ವ, ದುಃಖಗಳಿಗೀಡಾಗುತ್ತಾನೆ.

ಜೀವಿ, ವಿಶ್ವ ಹಾಗು ದೇವ ಇವರಲ್ಲಿಯ ಪರಸ್ಪರ ಸಂಬಂಧವನ್ನು ಸಮುಚಿತವಾಗಿ ಅರಿತುಕೊಂಡರೆ ಮಾನವೀಯ ಜೀವನದ ವಿಷಮತೆಗೆ ಅರ್ಥವಿಲ್ಲದೆ ಹೋಗುತ್ತಿದೆ. ಪ್ರಕೃತಿಯ ಮಧ್ಯದಲ್ಲಿ ತೊಡಕಿಕೊಂಡ ಪುರುಷನ ಆವಿಷ್ಕಾರವು ಜೀವನದ ಗುರಿಯಾಗಿರಬೇಕು. ಈ ಗುರಿಯನ್ನು ಮರೆತ ಮಾನವ ದುಃಖದ ಮಡುವಿನಲ್ಲಿ ಸಿಲುಕಿಕೊಳ್ಳುತ್ತಾನೆ. ಮಾನವ ಜೀವನದಲ್ಲಿ ದೈವೀ ಅಂಶವು ಅವಿತುಕೊಂಡಿದೆ. ಅದರ ಆವಿಷ್ಕಾರವೇ ಮಾನವನ ನಿಜವಾದ ಜೀವನ. ಅದೇ ಆತ್ಮಸಾಧನೆ. ಇಂತಹ ಆತ್ಮಸಾಧನೆಯಲ್ಲಿ ತೊಡಗದೆ ಸಂಸಾರದ ಬಂಧನದಲ್ಲಿ ಜೀವ ತೊಳಲಾಡುವುದುಂಟು. ಸತ್ಯಪ್ರಜ್ಞೆಯನ್ನು ಪಡೆದ ಕೆಲವರು ಮಾತ್ರ ಲೋಕದ ಮಾನವರಿಗೆ ಮರುಳರಂತೆ ತೋರಿದರೂ ದೈವೀಶಕ್ತಿಯ ಆವಿಷ್ಕಾರಕ್ಕೆಂದು ತಮ್ಮ ಜೀವನವನ್ನು ಮುಡಿಪಾಗಿಡಬಲ್ಲರು. ಹಾಗೆ ತಮ್ಮ ಜೀವನವನ್ನು ದೈವೀಶಕ್ತಿಯ ಆವಿಷ್ಕಾರಕ್ಕಾಗಿ ಮುಡಿಪಾಗಿಟ್ಟ ಕೆಲವು ಶಿವಭಕ್ತರ ಚರಿತೆಗಳನ್ನು ಹರಿಹರನು ತನ್ನ ರಗಳೆಗಳಲ್ಲಿ ನಿರೂಪಿಸಿದ್ದಾನೆ. ಸರ್ವವನ್ನೂ ದೇವನಿಗೆಂದು ಸಮರ್ಪಿಸುವ ಭಕ್ತಿನಿರ್ಭರತೆಯನ್ನು

ಈ ರಗಳೆಯಲ್ಲಿ ಕಾಣುತ್ತೇವೆ. ಮಾನವನ ಸಹಜವಾದ ನ್ಯೂನತೆಗಳು, ವಿಕ್ಷಿಪ್ತತನ, ಒಮ್ಮೊಮ್ಮೆ ಮರುಳುತನ ಇವುಗಳಿಂದ ಕೂಡಿದ ಕೆಲವು ವ್ಯಕ್ತಿಗಳನ್ನೂ ಹರಿಹರನು ಚಿತ್ರಿಸಿದ್ದಾನೆ. ಆದರೆ ಈ ದೃಷ್ಟಿಯಿಂದ ಅವರನ್ನು ನಾವು ಅಳೆಯಬೇಕಾಗಿಲ್ಲ. ಮಾನವಜೀವನವನ್ನು ಕುರಿತ ಚಿರಂತನಮೌಲ್ಯದತ್ತ ದೃಷ್ಟಿಯನ್ನು ಹರಿಯಿಸುವವರು ಜಗದ ಕಣ್ಗೆ ವಿಕ್ಷಿಪ್ತರಾಗಿ ತೋರುವುದು ಸಹಜವಾಗಿದೆ. ನ್ಯೂನತೆಗಳಿರುವುದೂ ಮಾನವಜೀವನದಲ್ಲಿ ಅನಿವಾರ್ಯ. ಆತ್ಮಸಾಧನೆಯಲ್ಲಿ ತೊಡಗಿದಾಗ ಮಾನವೀಯ ವ್ಯವಹಾರದ ದೃಷ್ಟಿಯಲ್ಲಿ ಮರುಳರಂತೆಯೂ ಕಾಣಬಹುದು. ಆದರೆ ಜೀವನವನ್ನು ಕುರಿತ ನಮ್ಮ ದೃಷ್ಟಿಯಲ್ಲಿಯೇ ವ್ಯತ್ಯಾಸ ತಲೆದೋರಿದಾಗ ಇವುಗಳಿಗೆ ಯಾವ ಬೆಲೆಯೂ ಇಲ್ಲವೆಂಬುದನ್ನು ಕಂಡುಕೊಳ್ಳುತ್ತೇವೆ.

ಇದುವರೆಗೆ ವಿವೇಚಿಸಿದ ಹರಿಹರನ ಶಿವಭಕ್ತರ ಜೀವನ ಹಾಗು ಸಿದ್ಧಿಗಳ ಮೂಲಕವಾಗಿ ನಾವು ಹರಿಹರನ ಜೀವನದರ್ಶನವನ್ನು ಕುರಿತ ಅಂಶಗಳನ್ನು ಕಾಣುತ್ತೇವೆ.

ಮೇಲೆ ಮರುಳುತನವಿದ್ದರೂ ಶುದ್ಧಹೃದಯವೊಂದಿದ್ದರೆ ಅದಕ್ಕೇ ನಿಜವಾದ ಸಫಲತೆ ದೊರೆಯುತ್ತಿದೆ. ಜೀವನದಲ್ಲಿ ಅಚಲನಿಷ್ಠೆಯ ಬಲ್ಪು ಸಾಮಾನ್ಯದೃಷ್ಟಿಗೆ ಅಸಾಧ್ಯವೆನ್ನುವ ಸಿದ್ಧಿಯನ್ನು ಪಡೆಯಬಲ್ಲದು. ಅರ್ಪಣಭಾವದಿಂದ ಕೂಡಿ ದೈವೀ ಶಕ್ತಿಯಲ್ಲಿ ಶ್ರದ್ಧೆಯನ್ನಿಟ್ಟು ಮಾನವಜೀವನದ ಸಂಕಟಪರಂಪರೆಗಳನ್ನು ನಾವು ಎದುರಿಸಬೇಕು. ಬಹುಶಃ ಸಂಕಟಪರಂಪರೆಯು ಹೆಚ್ಚಿದಂತೆ ದೈವೀಕೃಪೆಯು ಹೆಚ್ಚಾಗಿ ಸನ್ನಿಹಿತವಾಗುವಂತೆ ತೋರುತ್ತಿದೆ. ಏಕೆಂದರೆ ಅನುತಾಪವು ಅಂತಃಪರಿಶುದ್ಧಿಗೆ ಕಾರಣವಾಗುತ್ತಿದೆ. ಈ ಮಾತನ್ನು ಹರಿಹರನ ರಗಳೆಗಳಲ್ಲಿ ನಾವು ಮತ್ತೆಮತ್ತೆ ಕಾಣುತ್ತೇವೆ. ಬಾಹ್ಯಪ್ರಜ್ಞೆಯತ್ತ ನಮ್ಮ ಗಮನವನ್ನು ಹೊರಳಿಸದೆ ಧ್ಯಾನದ ಆನಂದದಲ್ಲಿ ತೊಡಗಿದ ಶಿವಭಕ್ತರು ಜೀವನದಲ್ಲಿ ಸಫಲತೆಗಳನ್ನು ಪಡೆದಿದ್ದಾರೆ. ಮಾನವನು ತನ್ನ ಪರಿಸರವನ್ನೇ ದೈವೀ ಆನಂದದ ಸಾಧನವನ್ನಾಗಿ ಮಾರ್ಪಡಿಸಿಕೊಳ್ಳಲು ಸಾಧ್ಯವಿದೆಯೆಂಬುದನ್ನೇ ಹರಿಹರನು ಸ್ಪಷ್ಟಗೊಳಿಸಿದ್ದಾನೆ. ವಿಶ್ವದ ಮೂಲವು, ಗಮ್ಯವು ಆನಂದವೇ ಆಗಿದೆಯೆಂಬ ಚಿರಂತನ ತತ್ತ್ವವನ್ನು ಹರಿಹರನ ಒಂದು ರಗಳೆಯಲ್ಲಿ ಬಿತ್ತರಿಸಲಾಗಿದೆ. ಕುಂಬರ ಗುಂಡಯ್ಯನ ವೈಯುಕ್ತಿಕ ಕುಣಿತ ಸ್ಥಾವರಜಂಗಮವನ್ನೆಲ್ಲ ಕುಣಿಯಹಚ್ಚುತ್ತಿದೆ. ಸರ್ವವ್ಯಾಪಿಯಾದ ವಿಶ್ವವನ್ನೇ ತಟ್ಟುತ್ತಿದೆ. ವಿಶ್ವದ ಸ್ವಾಮಿಯಾದ ಶಿವನನ್ನೇ ಕುಣಿಯಹಚ್ಚುತ್ತಿದೆ. ಇಲ್ಲಿ ವ್ಯಕ್ತಿಯ ಸತ್ಯಪ್ರಜ್ಞೆಯು, ವಿಶ್ವಂಬರ ಪ್ರಜ್ಞೆಯಾಗಿ ಪಸರಿಸಿ ವಿಶ್ವಾತೀತವಾಗಿರುವ ರಹಸ್ಯವನ್ನು ಹರಿಹರನು ನಮಗಾಗಿ ಚಿತ್ರಿಸಿದ್ದಾನೆ. ನಮ್ಮ ಅಹಂಕಾರಯುಕ್ತ ಸಂಕುಚಿತ ದೃಷ್ಟಿಯಲ್ಲಿ ಮಾನವನ ಶಕ್ತಿಯು ಅಲ್ಪವೆಂದು ತೋರಿದರೂ ಪರಮಾತ್ಮನ ಧ್ಯಾನದ ತಲ್ಲೀನತೆಯು ಮಾನವನ ಅಲ್ಪಶಕ್ತಿ, ಸಂಕುಚಿತ ಕ್ಷೇತ್ರ ಇವುಗಳನ್ನು ಮೀರಿ ನಿಂತು ದೈವೀಶಕ್ತಿಯ ಆವಿಷ್ಕಾರವನ್ನು ಹೇಗೆ ತರಬಲ್ಲದೆಂಬುವನ್ನು ಹರಿಹರನು ಚಿತ್ರಿಸಿದ್ದಾನೆ.

ಈ ದೈವೀಶಕ್ತಿಯ ಆವಿಷ್ಕಾರವೇ ಮಾನವನ ಗುರಿಯಾದಾಗ ಇಹಜೀವನದ ವಿಷಮತೆ ತಾನೇ ಅಳಿದುಹೋಗುತ್ತಿದೆ. ಮಾನವನು ತನ್ನ ಅಲ್ಪಶಕ್ತಿಯನ್ನು ದೇವನ ಅಪಾರ ಶಕ್ತಿಯೊಂದಿಗೆ ಸಂಯೋಜಿಸಬೇಕೆನ್ನುವುದೇ ಹರಿಹರನ ಮುಖ್ಯಸಂದೇಶವಾಗಿದೆ. ಅದನ್ನೇ ಯೋಗವೆಂದು ಹೇಳಲಾಗುತ್ತಿದೆ. ಇಡಿಯ ಜೀವನವನ್ನೆಲ್ಲ ಅಂತಹ ಯೋಗವನ್ನಾಗಿ ಮಾರ್ಪಡಿಸುವ ಕಲೆಯು ಹರಿಹರನ ರಗಳೆಗಳಲ್ಲಿ ಕಾವ್ಯದ ರಮಣೀಯ ರೀತಿಯಲ್ಲಿ ಹೊರಹೊಮ್ಮಿ ನಿಂತಿದೆ. ಭಕ್ತಿಯ ಏಕಾಂತಸಂಭ್ರಮವು ಕಾವ್ಯವಸ್ತುವೂ ಆಗಬಲ್ಲದು ; ದೈವೀಜೀವನದ ಸಾಧನವೂ ಆಗಬಲ್ಲದು. ಇದನ್ನು ಹರಿಹರನ ರಗಳೆಗಳು ಸ್ಪಷ್ಟಗೊಳಿಸುತ್ತಿವೆ.

ಭಕ್ತಿ, ನಿಷ್ಠೆ, ಸಮರ್ಪಣೆ ಇವುಗಳು ದೈವೀಜೀವನದ ಸಾಧನೆಗಳೆಂಬ ಮಾತು ಸ್ಪಷ್ಟವಿದೆ. ಆದರೆ ಜೀವನದ ವ್ಯವಹಾರ ಬೇರೆ ; ಅಧ್ಯಾತ್ಮದ ಹಾದಿ ಬೇರೆ, ಎಂಬ ವಿಭಾಜಕ ದೃಷ್ಟಿಯು ಸಾಮಾನ್ಯವಾಗಿ ಮಾನವರಲ್ಲಿ ಕಂಡುಬರುತ್ತಿದೆ. ಇಲ್ಲವೆ ಜೀವನದ ವ್ಯವಹಾರವು ಅಧ್ಯಾತ್ಮದ ಸಾಧನೆಗೆ ತೊಡಕಾಗುವುದೆಂದು ತಿಳಿದು ಜೀವನದಿಂದ ವಿರಕ್ತಿ ಪಡೆಯುವ ಹವಣಿಕೆಯಾದರೂ ಇರುತ್ತಿದೆ. ಹರಿಹರನ ಶಿವಗಣ ಪ್ರಪಂಚದಲ್ಲಿ ಇಂತಹ ದೃಷ್ಟಿಗಳಿಗೆ ಅವಕಾಶವಿಲ್ಲ. ದಿನಚರಿಯ ವ್ಯವಹಾರದೊಂದಿಗೇ ದೈವೀ ಜೀವನವನ್ನು ಸಾಧಿಸಬೇಕೆಂಬ ದೃಷ್ಟಿಯನ್ನು ಹರಿಹರನು ನಿರೂಪಿಸಿದ್ದಾನೆ. ಹಾಗೆ ಜೀವನ ನಡೆಯಿಸಿದ ಶರಣರ ಚರಿತ್ರೆಗಳನ್ನು ತನ್ನ ರಗಳೆಗಳಲ್ಲಿ ರೂಪಿಸಿದ್ದಾನೆ. ಹರಿಹರಕೃತವೆಂದು ತಿಳಿಯಲಾದ ೧೦೬ ರಗಳೆಗಳಲ್ಲಿ ಕೆಳಗಣ ೧೮ ರಗಳೆಗಳನ್ನು ಮಾತ್ರ ಈ ಉಪನ್ಯಾಸಕ್ಕೆಂದು ಆಯ್ದುಕೊಳ್ಳಲಾಯಿತು :

೧ ರುದ್ರಪಶುಪತಿ
೨ ಕೋಳೂರ ಕೊಡಗೂಸು
೩ ಓಹಿಲಯ್ಯ
೪ ಕಾರಿಕಾಲಮ್ಮೆ
೫ ತಿರುನೀಲಕಂಠ
೬ ಮಲುಹಣ
೭ ಉದ್ಭಟದೇವ
೮ ಹಲಾಯುಧ
೯ ಮಳೆಯರಾಜ
೧೦ ಅಮರನೀತಿ
೧೧ ಬಸವರಾಜದೇವ
೧೨ ಆನಯನಾರ
೧೩ ಇಳೆಯಾಂಡಗುಡಿಮಾರ
೧೪ ಬೇಡರಕಣ್ಣಪ್ಪ

೧೫ ಅತಿಭಕ್ತ
೧೬ ಅರಿವಾಳ್ತಾಂಡ
೧೭ ತಿರುಕುರುಂಪೆ ತೊಂಡ
೧೮ ಕುಂಬರ ಗುಂಡಯ್ಯ

ಹೀಗೆ ೧೮ ರಗಳೆಗಳನ್ನು ಆರಿಸಿಕೊಂಡು ಅವುಗಳನ್ನು ಇದುವರೆಗೆ ವಿವೇಚಿಸಲಾಗಿದೆ.

ಆಯು ತೀರಿದರೂ ನಿಷ್ಠೆ ತೀರಬಾರದು ; ಕಾಯವಳಿದರೂ ನೇಹವಾರಬಾರದು, ಎಂಬ ನಿರೂಪಣೆಯು ರುದ್ರಪಶುಪತಿಯ ರಗಳೆಯಲ್ಲಿದೆ. ಶುದ್ಧ ಹೃದಯದ ಛಲದಿಂದ ನಿರ್ಮಲವಾದ ಅಂತಃಕರಣದ ಪ್ರಾರ್ಥನೆಯಿಂದ ದೇವರ ಕೃಪೆಯನ್ನು ಕೈಗೂಡಿಸಿಕೊಳ್ಳುವ ಚಿತ್ರ ಕೋಳೂರ ಕೊಡಗೂಸಿನ ರಗಳೆಯಲ್ಲಿ ಬಂದಿದೆ. ಭೀಕರಸಂಕಟಗಳನ್ನೂ ಪ್ರಸನ್ನಚಿತ್ತದಿಂದ ಎದುರಿಸಿ, ದೈವೀಕೃಪೆಗಾಗಿ ಉತ್ಕಟನಿಷ್ಠೆಯನ್ನು ತೋರುವ ದೃಷ್ಟಿ ಓಹಿಲಯ್ಯನ ರಗಳೆಯಲ್ಲಿ ಪಡಿಮೂಡಿದೆ. ಮಾಡುವ ಭಕ್ತಿಯು ಪ್ರದರ್ಶನದ, ಪ್ರಸಿದ್ಧಿಯ ಬಣ್ಣವನ್ನು ತಳೆಯಬಾರದು ; ವಿರಕ್ತಿಯೆಂಬುದು ಜೀವನದ ವ್ಯವಹಾರಕ್ಕೆ ಸಂಬಂಧಿಸಬೇಕಾಗಿಲ್ಲ ; ಮನದ ಪೂರ್ವಗ್ರಹಗಳನ್ನು ಜಯಸುವಲ್ಲಿ ನಿಜವಾದ ವಿರಕ್ತಿಯಿದೆ ಎಂಬುದನ್ನು ಕಾರಿಕಾಲಮ್ಮೆಯ ರಗಳೆಯು ವಿವೇಚಿಸುತ್ತಿದೆ. ಜೀವನದಲ್ಲಿ ಅಕಾರಣವಾಗಿ ತಲೆದೋರುವ ನಿಂದೆಯನ್ನೂ ಮೌನವಾಗಿ ಸಹಿಸಿ, ತೊಂದರೆಯನ್ನು ಗೊಣಗುಟ್ಟದೆ ಅನುಭವಿಸಿ, ಪರಮಾತ್ಮನ ಬಗೆಗೆ ನಿಶ್ಚಲವಾದ ನಿಷ್ಠೆಯನ್ನು ತೋರುವುದು ಹೇಗೆಂಬುದನ್ನು ತಿರುನೀಲಕಂಠನ ರಗಳೆಯಲ್ಲಿ ಬಿತ್ತರಿಸಲಾಗಿದೆ. ಮಾನವನು ತನಗಾಗಿ, ತನ್ನವರಿಗಾಗಿ ಭವಿಷ್ಯದ ಯೋಜನೆಯನ್ನು ಹಮ್ಮುವುದರ ವಿಫಲತೆ ; ವಿರಹಮಂ ತೆಗೆದು ಹರನ ಮೇಲಿಕ್ಕುವ ಆವಶ್ಯಕತೆ, ಇವುಗಳನ್ನು ಮಲುಹಣನ ರಗಳೆಯಲ್ಲಿ ಬಿಂಬಿಸಲಾಗಿದೆ. ಅಲ್ಲದೆ ಮಾನವನ ಚಿತ್ತದಾತುರದ ಉದಾತ್ತೀಕರಣವನ್ನಿಲ್ಲಿ ಪ್ರತಿಪಾದಿಸಲಾಗಿದೆ. ಈಶ್ವರನ ಭಕ್ತಿಯಿಂದಾಗಿ ಮಾನವೀಯ ಜೀವನದಲ್ಲಿ ಅತಿಮಾನುಷಶಕ್ತಿಯನ್ನು ಪಡೆದವರ ಸ್ಪರ್ಧೆಯ ಚಿತ್ರಗಳನ್ನು ಹರಿಹರಕವಿಯು ಉದ್ಭಟದೇವ, ಹಲಾಯುಧ, ಮಳೆಯರಾಜ, ಅಮರನೀತಿ ಈ ರಗಳೆಗಳಲ್ಲಿ ಕೊಟ್ಟಿದ್ದಾನೆ. ಅಲ್ಪನಾದ ಮಾನವನು ತನ್ನ ಶಕ್ತಿಯನ್ನು ಭಗವಂತನ ಶಕ್ತಿಯೊಂದಿಗೆ ಸಂಯೋಜಿಸಿದಾಗ ಮಾನವನ ಶಕ್ತಿಯು ಅಲ್ಪವಾಗಿ ಉಳಿಯಲಾರದೆಂಬುದೇ ಇಲ್ಲಿಯ ದೃಷ್ಟಿಯಾಗಿದೆ. ಕೇಳ್ವುದೆಲ್ಲ ಶಿವನಪೂಜೆ, ಮಾಳ್ಪುದೆಲ್ಲ ಶಿವನಪೂಜೆ, ಬಾಳ್ವುದೆಲ್ಲ ಶಿವನಪೂಜೆ, ಬಯಸಿತೆಲ್ಲ ಶಿವನಪೂಜೆ–ಹೀಗೆ ಮಾನವನ ಭಾವ ಕ್ರಿಯೆಗಳೆಲ್ಲವೂ ಶಿವಮಯವಾಗಬೇಕು. ಮಾನವನ ಇಂದ್ರಿಯಗಳು ಮಾನವೀಯ ಇಚ್ಛೆಗೆ ಒಳಗಾಗಿ ವ್ಯವಹರಿಸುವುದನ್ನು ನಿಲ್ಲಿಸಿ ದೈವೀಶಕ್ತಿಯ ಪ್ರೇರಣೆಗೆ ಒಳಗಾಗಬೇಕು. ಆಗ ಮಾನವನ ಶಕ್ತಿಯೂ ಅನಂತವಾಗಬಲ್ಲದು, ಎಂಬುದನ್ನು ಹರಿಹರಕವಿಯು ಇಲ್ಲಿ ಸ್ಪಷ್ಟಗೊಳಿಸಿ

ದ್ದಾನೆ. ಅತಿಮಾನುಷ ಶಕ್ತಿಯಿಂದ ದೇವಲೋಕಕ್ಕೆ ಸ್ಪರ್ಧೆಯಿಂದ ಬಿಜಯಂಗೆಯ್ಯುವ ಕೆಲವು ಶರಣರನ್ನು ಚಿತ್ರಿಸಿದ ಕವಿಯು ಬಸವರಾಜದೇವರ ರಗಳೆಯಲ್ಲಿ ಇನ್ನೊಂದು ಬಗೆಯನ್ನು ಬಣ್ಣಿಸಿದ್ದಾನೆ. ಅದೆಂದರೆ ಮಾನವಲೋಕದಲ್ಲಿಯೇ ದೈವೀರಾಜ್ಯವನ್ನು ನೆಲೆಗೊಳಿಸುವುದು. ಬಸವಣ್ಣನವರು ದೇವಲೋಕದ ಸುಖಕ್ಕಿಂತ ಮಾನವಲೋಕದ ಸುಖವು ಹೆಚ್ಚೆಂದು ತಿಳಿಯುವಮಟ್ಟಿಗೆ ಸಾಧನೆಗೆಯ್ದರು. ಸಾಮಾನ್ಯ ಮಾನವರ ಮಧ್ಯದಲ್ಲಿ ಬಾಳುತ್ತ, ಮಾನವೀಯ ಶಕ್ತಿಗೆ ಅಂಟಿರುವ ಬಂಧನಗಳನ್ನು ಎದುರಿಸುತ್ತ ಬಸವಣ್ಣನವರು ದೈವೀಜೀವನವನ್ನು ಸಾಧಿಸಿದ ಬಗೆಯನ್ನು ಈ ರಗಳೆಯಲ್ಲಿ ಚಿತ್ರಿಸಲಾಗಿದೆ.

ಆಕಳುಕಾಯುವ ಆನಯನಾರ, ಒಕ್ಕಲುತನ ಮಾಡುವ ಇಳೆಯಾಂಡ ಗುಡಿಮಾರ, ಬೇಟೆಯಾಡುವ ಕಣ್ಣಪ್ಪ, ಮೀನು ಹಿಡಿಯುವ ಅತಿಭಕ್ತ, ಭತ್ತ ಕೊಯ್ಯುವ ಕೂಲಿಯ ಕೆಲಸ ಕೈಕೊಂಡ ಅರಿವಾಳ್ತಾಂಡ, ಬಟ್ಟೆ ಹಸನುಮಾಡುವ ತಿರುಕುರುಂಪೆ ತೊಂಡ, ಗಡಿಗೆಗಳನ್ನು ಮಾಡುವ ಕುಂಬರ ಗುಂಡಯ್ಯ–ಹೀಗೆ ವಿವಿಧ ವೃತ್ತಿಗಳನ್ನು ಕೈಕೊಂಡವರ ರಗಳೆಗಳನ್ನೂ ಈ ಮೊದಲು ವಿವೇಚಿಸಲಾಗಿದೆ. ತಮ್ಮ ತಮ್ಮ ವೃತಿಗಳನ್ನು ಅಧ್ಯಾತ್ಮಕ್ಕೆ ಹೇಗೆ ತಿರುಗಿಸಿಕೊಳ್ಳಬಹುದೆಂಬುದನ್ನು ಹರಿಹರನು ಈ ರಗಳೆಗಳಲ್ಲಿ ನಿರೂಪಿಸಿದ್ದಾನೆ. ಕೈಕೊಂಡ ಉಪಜೀವನದ ವೃತ್ತಿಗಳು ಏನೇ ಇದ್ದರೂ ಅವುಗಳಲ್ಲೆಲ್ಲ ಅಧ್ಯಾತ್ಮದ ದೃಷ್ಟಿಯನ್ನು ತಂದುಕೊಳ್ಳುವುದು ಸಾಧ್ಯವಿದೆ; ದೈವೀನಿಷ್ಠೆಯನ್ನು ಅವುಗಳಲ್ಲಿ ಅಳವಡಿಸಿಕೊಳ್ಳಬಹುದಾಗಿದೆ ಎಂಬುದನ್ನು ಕವಿಯು ಸ್ವಾರಸ್ಯಕರವಾಗಿ ಪಡಿಮೂಡಿಸಿದ್ದಾನೆ. ಬಾಹ್ಯವೃತ್ತಿಗಳನ್ನು ಸಾಂಕೇತಿಕವಾಗಿ ಅಂತರಂಗದಲ್ಲಿಯೂ ಆಚರಿಸುತ್ತ ಅವುಗಳ ಸಮನ್ವಯ ಸಾಧಿಸುತ್ತ ದೈವೀಜೀವನದತ್ತ ಸಾಗುವುದನ್ನು ಈ ರಗಳೆಗಳು ಅರ್ಥಗರ್ಭಿತವಾಗಿ ಚಿತ್ರಿಸುತ್ತಿವೆ. ನಿಷ್ಠೆ, ತಲ್ಲೀನತೆ, ಭಕ್ತಿ, ಸಮರ್ಪಣೆ, ಕಾಮನಾತ್ಯಾಗ, ನಿರ್ಮಮತೆ, ನಿರಹಂಕಾರ–ಇವುಗಳನ್ನು ನಮ್ಮ ನಮ್ಮ ಜೀವನದಲ್ಲಿ, ವೃತ್ತಿಯಲ್ಲಿ, ಭಾವದಲ್ಲಿ ಅಳವಡಿಸಿಕೊಂಡು ನಾವು ದೈವೀ ಜೀವನವನ್ನು ಸಾಧಿಸಬೇಕೆನ್ನುವುದೇ ಹರಿಹರಕವಿಯ ದರ್ಶನವಾಗಿದೆ.

ರಗಳೆಗಳಲ್ಲಿಯ ರಸಸ್ರೋತವು ಕಾವ್ಯಪ್ರೇಮಿಗಳಿಗೆ ಆನಂದವನ್ನೀಯುತ್ತಿದೆ. ಭಕ್ತಿನಿರ್ಭರತೆಯ ತಲ್ಲೀನತೆಯು ಮನಸ್ಸಿಗೆ ಉದಾತ್ತ ಸಂಸ್ಕಾರವನ್ನುಂಟುಮಾಡುತ್ತಿದೆ. ದೈವೀಸಾಕ್ಷಾತ್ಕಾರದ ಹರಿಹರನ ದೃಷ್ಟಿಯು ಅನುಭಾವವನ್ನು ಮೆಚ್ಚಿಕೊಳ್ಳುವವರಿಗೆ ಸಮೃದ್ಧ, ಸಮೀಚೀನ ಆಹಾರವನ್ನೊದಗಿಸುತ್ತಿದೆ. ಒಳ್ಳೆಯ ಜೀವನದ ಹಾಗು ಒಳ್ಳೆಯ ಕಾವ್ಯದ ಸಫಲತೆಗಳನ್ನು ಹರಿಹರನ ರಗಳೆಗಳಿಂದ ನಾವು ಪಡೆಯುತ್ತೇವೆ. ಮಾನವ ಜೀವನದ ಬಗೆಗೆ ಹರಿಹರನು ನಿರೂಪಿಸುವ ಉದಾತ್ತದೃಷ್ಟಿಯು ನಮ್ಮ ಬಾಳಿನ ಬೆಳಕಾಗುತ್ತಿದೆ ; ಸಾಧನೆಯ ಕೈದೀವಿಗೆಯಾಗುತ್ತಿದೆ. ಬಾಳಿನಲ್ಲಿ ನಿಶ್ಚಿಂತಚಿತ್ತನಾಗಿ ಆನಂದವನ್ನು ಕೈಗೂಡಿಸಿಕೊಳ್ಳುವುದು ಹೇಗೆಂಬುದನ್ನು ಈ ರಗಳೆಗಳಿಂದ ನಾವು ಕಲಿತುಕೊಳ್ಳಬಹುದಾಗಿದೆ.

ಯೋಜನೆಯ ಬೃಹತ್ತು, ಅನುಭಾವದ ಮಹತ್ತು ಈ ದೃಷ್ಟಿಯಿಂದ ಈ ಕಾವ್ಯಕೃತಿಯು ಪ್ರಾಚೀನ ಕನ್ನಡ ಕಾವ್ಯಗಳಲ್ಲಿ ಬಹುಬೆಲೆಯುಳ್ಳದ್ದಾಗಿ

'ದರ್ಶನಧ್ವನಿ ರಸಾಮೃತಪಾನದಿಂ ಲೋಕಶೋಕವನಳಿಸಿ ಭುವನತ್ರ ತಣಿಪ ರಸಋಷಿ ವಿಭೂತಿಗೆ ನಮೋ' ಎಂಬ ಶ್ರೀ ರಾಮಾಯಣದರ್ಶ 'ಕುವೆಂಪು' ಉಕ್ತಿಗಳಿಂದ ಕವಿಗೆ ವಂದನೆ ಸಲ್ಲಿಸಿ ವಿರಮಿಸುತ್ತೇನೆ.